4. ನಿಯಮ 69 ರ ಮೇರೆಗೆ ಚರ್ಚೆ

ವಿಷಯ : ರೈತರ ಸಾಲ ಮರುಪಾವತಿ ಅವಧಿಯನ್ನು ಮಾರ್ಚ್ 2006 ರ ವರೆಗೆ ವಿಸ್ತರಿಸುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಸಚಿವರು ಒಂದು ಸ್ಟೇಟ್‌ಮೆಂಟ್‌ನ್ನು ಮಾಡಿದರು. ಇದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋದರೆ ಇದರ ಮಹತ್ವ ಹೋಗುತ್ತದೆ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಅವಧಿಯು 10ನೇ ತಾರೀಖಿಗೆ ಮುಗಿಯುತ್ತದೆ. ವ್ಯಾಕ್ಯೂಮ್ ಕ್ರಿಯೇಟಾಯಿತು. ನಾನು ನಿಮಗೆ ವಿನಂತಿಯನ್ನು ಮಾಡುವಂಥದ್ದು ತಕ್ಷಣ ಅಂದರೆ ಎರಡು-ಮೂರು ದಿವಸಗಳಲ್ಲಿ ಈ ಕಾಯಿದೆಗೆ ಒಂದು ತಿದ್ದುಪಡಿಯನ್ನು ತಂದು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುವುದಕ್ಕೆ ಒಂದು ಕ್ಷಣ ತಡ ಮಾಡದೆ ಮಾಡಿ. ಬಹುಶಃ ಇದಕ್ಕೆ ಯಾರೂ ಅಬ್ಜೆಕ್ಷನ್ ಮಾಡುವುದಿಲ್ಲ. ತಾವು ಇದನ್ನು ಮಾಡಿದರೆ ಬಹುಶಃ ಅದಕ್ಕೆ ನಿಷ್ಪಕ್ಷಪಾತವಾಗಿ ನಡೆದುಕೊಂಡಿದ್ದಾರೆಂಬುದಕ್ಕೆ ಒಂದು ಅರ್ಥ ಬರುತ್ತದೆ. ಚುನಾವಣೆಯ ಬಗ್ಗೆ ನಮಗೆ ಗೊತ್ತಿರುವಂತೆ, ನಾಳೆಯೇ ಚುನಾವಣೆ ಮಾಡಿ ಎಂದರೆ ಎಲ್ಲಿಂದ ಮಾಡುವುದಕ್ಕಾಗುತ್ತದೆ? ಮಳೆಗಾಲ ಪ್ರಾರಂಭವಾಗುವುದರಿಂದ ಇನ್ನು ಮೂರು ತಿಂಗಳು ಮುಂದಕ್ಕೆ ಹೋಗುವಂಥ ಇಂತಹ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲಾ ನಾವು ಚುನಾವಣೆಯನ್ನು ಮಾಡುತ್ತೇವೆಂದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಇಲ್ಲವೆಂದರೆ ದಯಮಾಡಿ ಕಾಯಿದೆಗೆ ಒಂದು ತಿದ್ದುಪಡಿಯನ್ನು ತಂದು ಇಮ್ಮಿಡಿಯೇಟ್ ಅಡ್ಮಿನಿಸ್ಟ್ರೇಟರಗಳನ್ನು ನೇಮಕ ಮಾಡುವಂಥದ್ದನ್ನು ಮಾಡಬೇಕು. ಇದನ್ನು ಬಿಟ್ಟು ಬೇರೆ ಯಾವ ಪರ್ಯಾಯ ಮಾರ್ಗ ಇಲ್ಲವೆಂದು ಒತ್ತಾಯವನ್ನು ಮಾಡಿ ನಾನು ನನ್ನ ಮಾತನ್ನು ಮುಂದುವರೆಸುತ್ತೇನೆ. ಆ ಕಡೆ ಮತ್ತು ಈ ಕಡೆ ಇರುವಂಥ ಸದಸ್ಯರಿಂದ ತಪ್ಪು ಭಾವನೆ ಮತ್ತು ಭಿನ್ನಾಭಿಪ್ರಾಯ ಇದೆ ಎಂದು ನನಗೇನೂ ಅನ್ನಿಸುವುದಿಲ್ಲ. ಒಟ್ಟಾಗಿ ಇದರ ಬಗ್ಗೆ ಒಂದು ತೀರ್ಮಾನವಾಗಬೇಕಾಗಿದೆ. ಅದನ್ನು ತಾವು ಮಾಡಬೇಕು. ಅದಕ್ಕೆ ತಾವು ತಮ್ಮ ಸಹಮತವನ್ನು ಸೂಚಿಸುತ್ತೀರೆಂದು ಭಾವಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ಬೆಳೆ ವಿಮೆ ಬಗ್ಗೆ ನಾನು ಪ್ರಸ್ತಾಪವನ್ನು ಮಾಡುತ್ತಿದ್ದೆ. ಆದರೆ ಇವತ್ತು ಬೆಳೆ ವಿಮೆ ಸರಿಯಾದ ರೈತರಿಗೆ ಸಿಗದೆ, ನಮ್ಮ ಮಾನ್ಯ ಸಚಿವರು ಕೊಟ್ಟಿರುವಂಥ ಹೇಳಿಕೆಯಲ್ಲಿ ಇವತ್ತು ನಾವು ಬೆಳೆ ವಿಮೆಯನ್ನು ಕೊಡುವುದಕ್ಕೆ ನಾವು ಇವತ್ತು ಸಿದ್ಧರಿದ್ದೇವೆಂದು ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರ 2003-04ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ವಿಮೆ ಹಣ ಇನ್ನು ಬಿಡುಗಡೆಯಾಗಿಲ್ಲ. ಆದರೆ ಅದಕ್ಕೆ ರಾಜ್ಯದ ಪಾಲಿನ ಹಣವನ್ನು ನಾವು ಪಾವತಿ ಮಾಡಿದ್ದೇವೆ.

ಆದರೆ ಕೇಂದ್ರ ಸರ್ಕಾರ ತನ್ನ ಪಾಲಿನ ಹಣವನ್ನು ಬಿಡುಗಡೆ ಮಾಡಿಲ್ಲ. ಈ ಮಾತನ್ನು ತಾವು ಹೇಳಿದಿರಿ. ಎರಡು ಸಂಗತಿಯನ್ನು ಹೇಳುತ್ತೇನೆ. ಒಬ್ಬ ಸಚಿವರಾಗಿ, ಒಂದು ಸರ್ಕಾರದ ಪ್ರತಿನಿಧಿಯಾಗಿ ನನಗೆ ಗೊತ್ತಿರುವ ಪ್ರಕಾರ ರಾಜ್ಯ ಸರ್ಕಾರದ ಹಣ ಸ್ವಲ್ಪ ತಡವಾಗುವ ಸಂದರ್ಭ ಇರಬಹುದು. ಆದರೆ ಕೇಂದ್ರ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿಲ್ಲವೆಂದು ಹೇಳಿ ನಾವು ರಾಜ್ಯದ ಜನರಿಗೆ ಉತ್ತರವನ್ನು ಕೊಡುವುದಕ್ಕೆ ಇಲ್ಲಿ ಕುಳಿತಿದ್ದೇವಾ? ಅಥವಾ ಕೇಂದ್ರ ಸರ್ಕಾರದ ಮನವೊಲಿಸಿ ಹಣವನ್ನು ಬಿಡುಗಡೆ ಮಾಡಿಸಿ ಸಕಾಲಕ್ಕೆ ಅವನಿಗೆ ಬೆಳೆ ವಿಮೆ ಹಣ ಸಿಗಬೇಕು ಅದರ ವ್ಯವಸ್ಥೆಯನ್ನು ಮಾಡುವುದಕ್ಕೆ ನಮ್ಮ ಸರ್ಕಾರ ಇದೆಯಾ? ಇವತ್ತು ಸಚಿವರಾಗಿ ನೀವು ಈ ರೀತಿಯ ಹೇಳಿಕೆಯನ್ನು ಕೊಟ್ಟು ಇವತ್ತು ಬೆಳೆ ವಿಮೆಯನ್ನು ಒಂದುಕಡೆ ಪೂರ್ತಿಯಾಗಿ ಪಾವತಿಯನ್ನು ಮಾಡಿಲ್ಲ. ಆ ಬೆಳೆ ವಿಮೆ ಬಗ್ಗೆ ರೈತರಿಗೆ ಇದ್ದ ವಿಶ್ವಾಸವನ್ನೇ ರೈತ ಸಮೂಹ ಕಳೆದುಕೊಳ್ಳತಕ್ಕಂಥ ಒಂದು ವಿಚಿತ್ರವಾದಂಥ ಪರಿಸ್ಥಿತಿಗೆ ನಾವು ಬಂದು ಮುಟ್ಟಿದ್ದೇವೆ, ಆದ್ದರಿಂದ ಈ ಒಂದು ವಿಷಯದ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಡವನ್ನು ತಂದು ಈ ಬೆಳೆ ವಿಮೆಯನ್ನು ಬಿಡುಗಡೆ ಮಾಡುವುದರಲ್ಲಿ ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಾ?

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಪೂರ್ತಿ ಎರಡು ತಿಂಗಳು ಡಿಲೇ ಆಯಿತು. ಕೆಲವರು ಕೇಳಿದಾಗ ಹೇಳಬೇಕಾಗಿತ್ತು ಪತ್ರಿಕೆಗಳಿಗೆ ಎಂದರೆ, ಈಗ ಹಣ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ್ದು ಬಂದಿರುವುದರಿಂದ ಎಲ್ಲಾ ಹಣವನ್ನು ಕೊಟ್ಟು ಬಿಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷರೇ, ಯಾವ ಸಮಯದಲ್ಲಿ ಯಾವಾಗ ಯಾರಿಗೆ ಎಲ್ಲಿ ಹಣವನ್ನು ಪಾವತಿ ಮಾಡಬೇಕು? ನಿಮಗೆ ಗೊತ್ತಿರುವ ಹಾಗೆ ಬೆಳೆ ವಿಮೆ ಹಣ ಬಿಡುಗಡೆಯಾದಂಥ ಕಡೆ ಸಾಲದ ಮೇಲೆ ಅವನ ಬೆಳೆ ವಿಮೆ ಹಣವನ್ನು ಜಮಾ ಮಾಡಿಕೊಂಡಿರುವ ನೂರಾರು ಉದಾಹರಣೆಗಳು ಇದೆ ತಾನೇ. ಬೆಳೆ ವಿಮೆ ಕೊಡುವಂಥದ್ದು ಸಾಯುತ್ತಿರುವಂಥ ರೈತನ ರಕ್ಷಣೆಗಾಗಿ ನಿಮ್ಮ ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್‌ಗಳು ಇರಬಹುದು. ರಾಷ್ಟ್ರೀಕೃತ ಬ್ಯಾಂಕ್‌ಗಳು ಇರಬಹುದು. Is it not your duty ? ಬೆಳೆ ವಿಮೆಯ ಹಣ ಬಂದಿರುವಂಥದ್ದು, ರೈತನಿಗೆ ಅದು ನೇರವಾಗಿ ತಲುಪಬೇಕು ಅದನ್ನು ಅವನ ಸಾಲಕ್ಕೆ ಜಮಾ ಮಾಡಿಕೊಳ್ಳಕೂಡದು ಎಂದು ತಾವು ಹೇಳಿ ಒಂದು ಕಟ್ಟುನಿಟ್ಟಿನ ಆದೇಶ ಮಾಡಿ. ಅದು ಎಲ್ಲಿ ಕಾರ್ಯರೂಪಕ್ಕೆ ಬಂದಿದೆ. ಈ ರೀತಿ ಜಮಾ ಮಾಡಿಕೊಂಡಿರುವ ಬಗ್ಗೆ ತಮಗೆ ಒಂದು ಸಾವಿರ ಉದಾಹರಣೆಯನ್ನು

ಕೊಡುತ್ತೇನೆ. ಎಲ್ಲಿ ಇದು ಇಂಪ್ಲಿಮೆಂಟ್ ಆಗಿದೆ. ಆದ್ದರಿಂದ ಇವತ್ತು ಪ್ರತಿಯೊಂದು ಸಂದರ್ಭದಲ್ಲಿ ರೈತನ ಕತ್ತು ಹಿಚುಕುವಂಥ ಪ್ರಯತ್ನ ನಡೆದಿದೆ ಹೊರತು, ಅವನಿಗೆ ನ್ಯಾಯ ಒದಗಿಸಿಕೊಡುವಂಥ ಪ್ರಾಮಾಣಿಕವಾದ ಪ್ರಯತ್ನ ಇದುವರೆಗೆ ಎಂದೂ ಆಗಲಿಲ್ಲ. ಬೆಳೆ ವಿಮೆ ಬಗ್ಗೆ ಜನ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಇವತ್ತು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಎಲ್ಲಾ ಬೆಳೆಗಳಿಗೆ ಬೆಳೆ ವಿಮೆ ಹಣವನ್ನು ಕೊಡುವಂಥ ಒಂದು ಅವಕಾಶ ಮಾಡಿಕೊಟ್ಟಿದ್ದಾರೆ. ಇವತ್ತು ನಿಮ್ಮ ಸಂಬಂಧಪಟ್ಟ ಅಧಿಕಾರಿಗಳು ಆ ಬೆಳೆ ನಾಶವಾದ ಸಂದರ್ಭದಲ್ಲಿ ಸರಿಯಾದ ರೀತಿಯ ಮಾಹಿತಿಯನ್ನು ಪಡೆಯದೇ ಪಕ್ಕದ ಒಂದು ಸರ್ವೆಯಲ್ಲಿ ಬೆಳೆ ವಿಮೆ ಹಣ ಸಿಕ್ಕಿದೆ, ಅದರ ಪಕ್ಕದಲ್ಲಿರುವವರಿಗೆ ಬೆಳೆ ವಿಮೆ ಹಣ ಸಿಕ್ಕಿಲ್ಲ. ಸಾಲ ಪಡೆದವರು ಪಡೆಯದೇ ಇರುವವರಿಗೂ ತಾರತಮ್ಯ, ಖುಷ್ಕಿ, ಭೂಮಿ, ತರಿ ಭೂಮಿ ಇದರ ಬಗ್ಗೆ ವ್ಯತ್ಯಾಸಗಳು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಈ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಬಗ್ಗೆ ನಿಲುವಳಿ ಸೂಚನೆಯನ್ನು ತಂದು ಕೊನೆಗೆ ಅದು ಬದಲಾವಣೆಯಾಗಿ ಅದರ ಬಗ್ಗೆ ನಿಯಮ 69ರ ಮೇಲೆ ಚರ್ಚೆಯಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇದ್ದು. ಈ ಚರ್ಚೆಯನ್ನು ಅವರು ಕೇಳುತಿದ್ದರು. ಬಡ್ಡಿ ಮನ್ನಾ ಮಾಡುತ್ತೇವೆಂದು ಆಯವ್ಯಯದಲ್ಲಿ ಹೇಳಿದವರು ಹಣಕಾಸು ಸಚಿವರು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀಮಾನ್ ಸಿದ್ಧರಾಮಯ್ಯನವರು. ಮಾನ್ಯ ಮುಖ್ಯಮಂತ್ರಿಗಳು ನಾವು ಹೇಳುವುದನ್ನು ಕೇಳುತ್ತಿದ್ದರು. ಅವರೂ ಕೂಡ ಈಗ ಹೊರಗಡೆ ಹೋದರು. ಮಾನ್ಯ ಸಿದ್ಧರಾಮಯ್ಯನವರು ಬೆಳಿಗ್ಗೆಯಿಂದ ಸದನಕ್ಕೆ ಬಂದೇ ಇಲ್ಲ. ಇದು ಬಹಳ ಪ್ರಾಮುಖ್ಯವಾದದ್ದು. ಈ ಸದನ ಬಹಳ ಪ್ರಾಮುಖ್ಯ.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ಅವರು ಸದನಕ್ಕೆ ಬರದೇ ಇರುವ ಉದ್ದೇಶವೇನು? ಅದು ಸ್ವಲ್ಪ ನಮ್ಮ ಸದನಕ್ಕೆ ಗೊತ್ತಾಗಬೇಕು. ಏಕೆಂದರೆ, ಹಣಕಾಸಿನ ಸಚಿವರಾಗಿ ಈ ರಾಜ್ಯಕ್ಕೆ ಅವರು ಮಾಡಿರುವ ಸೇವೆ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ರೈತರ ಸಾಲದ ಬಡ್ಡಿ ಕೂಡ ಮನ್ನಾ ಮಾಡಿದ್ದಾರೆ. ಈಗ ಬಡ್ಡಿ ಮನ್ನಾ ಮಾಡಿದ್ದೇವೆಂದು ಅವರು ಹೇಳುವಾಗ, ಈ ಸದನದಲ್ಲಿ ಅವರು ಇದ್ದರೆ ಶೋಭೆ. ಏನಾದರೂ ಆಂತರೀಕವಾದಂಥ ವಿಧ್ಯಮಾನಗಳು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜಗಳಗಳು ಬರುತ್ತವೆ

ನಾನು ಇಲ್ಲವೆಂದು ಹೇಳುವುದಿಲ್ಲ. ಇದೆಲ್ಲದರ ದೃಷ್ಟಿಯಿಂದ ಸುಮಾರು ಒಂದು ವಾರದಿಂದ ರಾಜ್ಯದಲ್ಲಿ ಏನೊಂದು ದೊಡ್ಡ ಬಿರುಗಾಳಿ ಎದ್ದಿದೆ. ರಾಜ್ಯದಲ್ಲಿ ವಾಗ್ದಾಳಿ ಎದ್ದಿದೆ. ಪಾರ್ಟಿಯೊಳಗಡೆ ಬಿರುಕುಗಳು ಎದ್ದಿವೆ. ಅವರ ಬಗ್ಗೆ ಅನೇಕ ವಿಚಾರಗಳು ಹೊರಗೆ ಬರುತ್ತಿವೆ. ಆದ್ದರಿಂದ ಇವೆಲ್ಲವನ್ನು ನೋಡಿದಾಗ ಸದನದಲ್ಲಿ ಅವರು ಇಲ್ಲದೇ ಇರತಕ್ಕಂಥದ್ದು, ನಮಗೆ ನಿಜವಾಗಲೂ ನೋವಾಗುತ್ತಿದೆ. ನಾನೊಬ್ಬ ಹಿರಿಯ ಸದಸ್ಯನಾಗಿ ಅವರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಈ ಸದನದಲ್ಲಿ ಮಾನ್ಯ ಸಿದ್ಧರಾಮಯ್ಯನವರ ಗೈರು ಹಾಜರಿ ಬಹಳ ಎದ್ದು ಕಾಣುತ್ತಿದೆ. ಕಾರಣ ಏನು ಎನ್ನುವುದನ್ನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಬೇಕು. ಅವರು ಮೇಲ್ಮನೆಯಲ್ಲಿದ್ದಾರೆಂದು ಹೇಳುವುದಿಲ್ಲ. ಆದರ ಇದು ಎಲ್ಲೋ ಏನೋ ನಡೆದಿದೆ. ಕೋಲಾರದ ವಾಗ್ದಾಳಿಯಿಂದ ಅವರು ರಾಜಕೀಯವಾಗಿ ಮುನಿಸಿನಿಂದ ಇದ್ದಾರೆಯೇ? ಅಥವಾ ತಾವು ರಾಜಕಾರಣ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಮಾತನಾಡತಕ್ಕಂಥದ್ದರ ಬಗ್ಗೆ ಕರ್ನಾಟಕ ರಾಜ್ಯಾದ್ಯಂತ ಧೂಳನ್ನು ಎಬ್ಬಿಸಿದ್ದೀರಿ. ನಿಮ್ಮ ನಿಮ್ಮಲ್ಲಿ ಹೊಂದಾಣಿಕೆ ಇಲ್ಲವೆ? ಏನು ಪ್ರಶ್ನೆ ? ಅವರ ಬಗ್ಗೆ ನನಗೆ ಅಪಾರವಾದಂಥ ಗೌರವ. ಅವರಿಗೆ ನಾನು ಸಂಪೂರ್ಣವಾಗಿ ನನ್ನ ಎಲ್ಲಾ ರೀತಿಯ ಬೆಂಬಲವನ್ನು ಕೊಡತಕ್ಕಂಥ ಮನುಷ್ಯ ನಾನು. ಆ ವಿಚಾರ ಬೇರೆ. ಆದರೆ ಅವರು ಈ ಸದನಕ್ಕೆ ಬರದೇ ಇರತಕ್ಕಂಥದ್ದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲೋ ಒಂದು ಕಡೆ ಮಾನ್ಯ ಉಪಮುಖ್ಯಮಂತ್ರಿಗಳು ಸದನದಲ್ಲಿ ಇವತ್ತು ಇರಬೇಕು. ಇಲ್ಲದಿರುವುದಕ್ಕೆ ಕಾರಣವೇನು? ಇವತ್ತು ನಿಲುವಳಿ ಸೂಚನೆ ತರುತ್ತಿದ್ದೇವೆ. ಆ ವಿಷಯ ಅವರಿಗೆ ಸಂಬಂಧಪಟ್ಟಂಥದ್ದು. ನಾನು ಮಾನ್ಯ ಮುಖ್ಯಮಂತ್ರಿಗಳು ಇರುವವರೆಗೆ ಸುಮ್ಮನೆ ಇದ್ದೆ ಅವರು ಎದ್ದು ಹೋದ ಮೇಲೆ ಯಾರಾದರೊಬ್ಬರು ಆ ವಿಷಯದ ಬಗ್ಗೆ ಉತ್ತರವನ್ನು ಹೇಳುವುದಕ್ಕೆ ಇರಬೇಕಲ್ಲವೆ? ಇದರ ಜೊತೆಗೆ ರಾಜಕಾರಣದ ಗೊಂದಲದಿಂದ ಅವರನ್ನು ಒಂದು ಕಡೆಯಿಂದ ಕಾಂಗ್ರೆಸ್‌ಗೆ ಸೆಳೆಯತಕ್ಕಂಥದ್ದರ ಬಗ್ಗೆ ಒಂದು ಭಾರಿ ಗೊಂದಲ, ಮತ್ತೊಂದು ಕಡೆ ಅವರು ಹೋಗಬಾರದೆನ್ನುವ ಬಗ್ಗೆ ಸಭೆಯನ್ನು ನಡೆಸತಕ್ಕಂಥದ್ದು, ಇಂತಹ ವಿಪರೀತ ಗೊಂದಲ ನಡೆಯುತ್ತಿರುವಂಥ ಸಂದರ್ಭದಲ್ಲಿ ಈ ಸದನಕ್ಕೆ ಏನಾದರೂ ಅಪಾಯ ಇದೆಯೇ? ತಾವು ಯಾರಾದರೊಬ್ಬರು ಜವಾಬ್ದಾರಿ ಇರುವವರು ಇದ್ದರೆ ಅದರ ಬಗ್ಗೆ ಈ ಸದನಕ್ಕೆ ತಿಳಿಸಬೇಕು.

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಮಾನ್ಯ ದೇಶಪಾಂಡೆಯವರು ತಮ್ಮ ಮಾಹಿತಿಗಾಗಿ ಮಾನ್ಯ ಸಿದ್ಧರಾಮಯ್ಯನವರು ಬಂದಿದ್ದಾರೆ. ಅಪ್ಪರ್ ಹೌಸ್‌ನಲ್ಲಿದ್ದಾರೆನ್ನುವ ಮಾತನ್ನು ಹೇಳಿದರು

ಸಮಯ 12.50 ಆಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ಎಲ್ಲಾ ವಿಚಾರಗಳನ್ನು ಆಲಿಸುತ್ತಿದ್ದರು. ನೀವು ಬಿರುಗಾಳಿ ಎದ್ದಿದೆ. ಅದು ಎದ್ದಿದೆ, ಇದು ಎದ್ದಿದೆ ಎನ್ನುವ ಬಗ್ಗೆ ತಾವೇನು ಕಲ್ಪನೆಯನ್ನು ಮಾಡಿದಿರಿ. ಅದಕ್ಕೆ ಉತ್ತರವಾಗಿ ಹೇಳುತ್ತೇನೆ. ಒಂದು ಸೆಕೆಂಡ್ ಕೇಳಿ.

ಶ್ರೀ ವಾಟಾಳ್ ನಾಗರಾಜ್ :– ಬಿರುಗಾಳಿ ಎದ್ದು ಬಟ್ಟೆ ಎಲ್ಲಾ ಮಣ್ಣಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ವಾಟಾಳ್ ನಾಗರಾಜ್‌ರವರು ಬಿರುಗಾಳಿ ಇದ್ದಿದೆ ಎಂದರು. ನೀವು ಬಿರುಗಾಳಿಯ ಬಗ್ಗೆ ಏನಾದರೂ ಹೇಳುತ್ತಾರೆಂದು ನಾವು ಕೇಳಿದೆವು.

ಶ್ರೀ ಹೆಚ್.ಕೆ. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಒಂದು ಸೆಕೆಂಡ್ ಕೇಳಿ, ತಾವು ಏನು ಕಲ್ಪನೆಯನ್ನು ಮಾಡಿಕೊಂಡಿದ್ದೀರಿ. ಆ ರೀತಿ ನಿಮಗೆ ಯಾವುದೂ ಕಲ್ಪನೆ ಇರಬಾರದು. ಆ ಸಂಶಯಗಳು ಇರಬಾರದು.

ಶ್ರೀ ವಾಟಾಳ್ ನಾಗರಾಜ್ :– ಕಲ್ಪನೆ ಅಲ್ಲ, ಪ್ರತಿದಿನ ದಿನಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಮೂರುಮೂರು ಪುಟದವರೆಗೆ ಬರುತ್ತದೆ ಅದು ಕಲ್ಪನೆಯೇ? ಇದಕ್ಕಾಗಿಯೇ ಮೂರು ಪುಟಗಳನ್ನು ಮೀಸಲಾಗಿಟ್ಟಿದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್ :– ಸರ್ಕಾರಕ್ಕೆ ಸಂಬಂಧಿಸಿದ ಹಾಗೆ ಯಾವ ಬಿರುಗಾಳಿಯೂ ಇಲ್ಲ. ಪರಗಾಳಿಯು ಇಲ್ಲ. ಮಾನ್ಯ ಮಂಜುನಾಥ್‌ರವರು ಶಾಂತವಾಗಿ ಮತ್ತು ಗಂಭೀರವಾಗಿ ಕುಳಿತಿರುವುದನ್ನು ನೋಡಿದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲದೇ ಇರುವುದಕ್ಕೂ ಅದಕ್ಕೆ ಯಾವ ಅರ್ಥವನ್ನು ಮಾಡಿದರೂ ಕೂಡ ಅದು ತಪ್ಪು ಎಂದು ಹೇಳುವಂಥ ಸಂದೇಶ ಅವರ ಮುಖದಿಂದ ಬರುತ್ತದೆ. ಆದ್ದರಿಂದ ಈ ಒಂದು ಗಂಭೀರವಾದ ರೈತರ ವಿಚಾರವಾಗಿ ಚರ್ಚೆಯನ್ನು ಮಾಡುತ್ತಿದ್ದೇನೆ. ಆದ್ದರಿಂದ ಈಗ ಚರ್ಚೆಯನ್ನು ಮುಂದುವರೆಸೋಣ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದರೂ ಮತ್ತೆ ಯಾವ ಕಾರಣಕ್ಕೂ ಕೂಡ ಅವರು ಬರುತ್ತಾರೆ. ಮಾನ್ಯ ಉಪಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ ಅದು ಮುಗಿದು ತಕ್ಷಣ ಅವರು ಇಲ್ಲಿಗೆ ಬರುತ್ತಾರೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು ನಿಮಿಷ. ಇವರು ಬಿರುಗಾಳಿ ಎದ್ದಿದೆ ಎಂದು ಏನು ಹೇಳಿದರು. ಬಿರುಗಾಳಿ ಎದ್ದಿರುವ ಬಗ್ಗೆ ನಮಗೇನೂ ಗೊತ್ತಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಆಯಿತು. ಸುಂಟರಗಾಳಿ ಎಂದು ಹೇಳಬಹುದೆ?

ಶ್ರೀ ಡಿ. ಮಂಜುನಾಥ್ :- ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವವರೆಗೆ ಮಾನ್ಯ ಸದಸ್ಯರು ಸ್ವಲ್ಪ ಕೇಳಿ, ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲಿ ಇಲ್ಲವೆನ್ನುವುದಕ್ಕಾಗಿಯೇ ಮಾನ್ಯ ದೇಶಪಾಂಡೆಯವರು ಮತ್ತು ಮಾನ್ಯ ಹೆಚ್.ಕೆ.ಪಾಟೀಲ್‌ರವರು ಮೇಲ್ಮನೆಯಲ್ಲಿದ್ದಾರೆಂದು ಹೇಳಿದರು. ಈ ಚರ್ಚೆಯಾಗುವಾಗ ಇರಬೇಕು. ಅದರ ಬಗ್ಗೆ ನಾನೂ ಕೂಡ ಹೇಳುತ್ತೇನೆ. ಅವರು ಮೇಲ್ಮನೆಯಲ್ಲಿದ್ದಾರೆ. ಆದರೆ ಈಗ ಬಿರುಗಾಳಿ ಎದ್ದಿದೆ ಎಂದರು. ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಸ್ವಲ್ಪ ವ್ಯತ್ಯಾಸಗಳು ಬರುತ್ತವೆ. ಅವುಗಳನ್ನು ಸರಿಪಡಿಸಿಕೊಳ್ಳುತ್ತೇವೆ. ಇದು ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಸಹ ಬರುತ್ತದೆ. ಅದನ್ನು ಸರಿ ಮಾಡಿಕೊಳ್ಳುವುದಕ್ಕೂ ಕೂಡ ಸಾಧ್ಯತೆ ಇದೆ. ಅದನ್ನು ಸರಿ ಮಾಡುವುದಕ್ಕೆ ಏನು ಬೇಕೋ ಅದನ್ನು ನಾವು ಮಾಡುತ್ತಿದ್ದೇವೆ. ಇದರಲ್ಲಿ ಯಾವುದೇ ರೀತಿಯಲ್ಲೂ ಕೂಡ ಗೊಂದಲವಿಲ್ಲ. ಪತ್ರಿಕೆಗಳಲ್ಲಿ ವಾಗ್ದಾಳಿ ಎಂದು ಬರೆದಿದ್ದಾರೆ ಪತ್ರಿಕೆಗಳಲ್ಲಿ ಎಲ್ಲವನ್ನೂ ಬರೆಯುತ್ತಾರೆ. ನಾನು ಅವತ್ತಿನ ದಿವಸ ಕೋಲಾರದಲ್ಲಿದ್ದೆ. ಅಲ್ಲಿ ವಾಗ್ದಾಳಿಯೂ ಇಲ್ಲ. ಎಂತಹದ್ದು ಕೂಡ ಇಲ್ಲ. ಆ ಸಂಶಯ ಏಕೆ. ಅದು ನಮ್ಮ ಪಕ್ಷಕ್ಕೆ ಸಂಬಂಧಪಟ್ಟಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ನಾನು ವಾಗ್ದಾಳಿ ವಿಚಾರಕ್ಕೆ ಬರುತ್ತಿಲ್ಲ. ವಾಗ್ದಾಳಿ ಎನ್ನುತ್ತೀರಾ ಕೈದಾಳಿ ಎನ್ನುತ್ತೀರಾ ತಾವು ಯಾವ ದಾಳಿ ಎಂದು ಹೇಳುತ್ತೀರಿ?

ಶ್ರೀ ಡಿ. ಮಂಜುನಾಥ್ :- ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾನು ನನ್ನ ಮಾತನ್ನು ಇನ್ನೂ ಮುಗಿಸಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ತಾವು ಈ ಸದನಕ್ಕೆ ಹಿರಿಯ ಸದಸ್ಯರಾಗಿದ್ದೀರಿ. ಇದರ ಬಗ್ಗೆ ನಾನು ತಮಗೆ ಖಂಡಿತವಾಗಿ ಹೇಳುತ್ತೇನೆ. ವಿಧಾನಪರಿಷತ್ತಿನ ಕಲಾಪ 12–30 ಗಂಟೆಗೆ ಪ್ರಾರಂಭವಾಗುತ್ತದೆ. ಇಲ್ಲಿ ನಮ್ಮ ವಿಧಾನ ಸಭೆಯು 11–00 ಗಂಟೆಗೆ ಪ್ರಾರಂಭವಾಗಿರುವುದು., ಅವರು ಈ ಸದನಕ್ಕೆ ಬರಬಹುದಾಗಿತ್ತು.

ಶ್ರೀ ಡಿ. ಮಂಜುನಾಥ್ :- ಅವರು ಈ ಸದನಕ್ಕೆ ಬರುವಂತೆ ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಸಿದ್ಧರಾಮಯ್ಯನವರನ್ನು ತುಳಿಯುವುದಕ್ಕೆ ಎಲ್ಲಾ ವ್ಯವಸ್ಥೆಯೂ ನಡೆಯುತ್ತಿದೆಯೇ, ಏನಿದು? ಇದರ ಬಗ್ಗೆ ತಾವು ಇಲ್ಲಿ ಹೇಳ ಬೇಕಾಗುತ್ತದೆ.

ಶ್ರೀ ಡಿ. ಮಂಜುನಾಥ್ :- ಈ ವಿಷಯ ಸದನದಲ್ಲಿ ಚರ್ಚೆ ಮಾಡಬೇಕಾದರೆ ಫೈನಾನ್ಸ್ ಮಿನಿಸ್ಟರ್ ಸದನದಲ್ಲಿ ಇರಬೇಕು. ತಾವು ಹೇಳುವ ಮಾತನ್ನು ನಾನು ಒಪ್ಪುತ್ತೇನೆ. ಅವರು ಮೇಲ್ಮನೆಯಲ್ಲಿ ಇದ್ದಾರಂತೆ, ಅವರು ಇಲ್ಲಿಗೆ ಬರುವುದಕ್ಕೆ ಹೇಳಿ ಕಳುಹಿಸೋಣ.

ಆದರೆ ತಾವು ಬೇರೆ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಲ್ಲಾ, ಆ ಮಾತನ್ನು ನಾನು ಅಲ್ಲಗಳೆಯುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಈ ಒಂದು ಕ್ಷಣದಲ್ಲಿ ಸರಿಪಡಿಸುತ್ತೇನೆಂದು, ಈ ಕ್ಷಣ ಒಪ್ಪಿಕೊಂಡಿದ್ದೀರಿ?

ಉಪಾಧ್ಯಕ್ಷರು :– ಮಾನ್ಯ ಯಡಿಯೂರಪ್ಪನವರೇ, ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :– ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ನಾನು ಬಹಳ ನೊಂದು ಕೃಷಿ ಸಚಿವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಿಮಗೆ ಬೇಕಾದರೆ ಮಾಹಿತಿಯನ್ನು ನಾನು ಕಳುಹಿಸಿಕೊಡುತ್ತೇನೆ. ಮಾಹಿತಿಯು ನನಗಿಂತ ನಿಮ್ಮ ಹತ್ತಿರ ಹೆಚ್ಚಿಗೆ ಇದೆ. ಈ ರೈತ ಸಂಪರ್ಕ ಕೇಂದ್ರಗಳು ಎಂದು ನಾವು ಏನು ಮಾಡಿದ್ದೇವೆ. ಅದನ್ನು ಮಾಡಿರವುದು ರೈತರ ಉಳಿವಿಗಾಗಿ, ತಾವು ಒಂದು ಮಾತನ್ನು ಹೇಳಿದ್ದೀರಿ. ಈ ಕೃಷಿ ಅಧಿಕಾರಿಗಳು ಏನಿದ್ದಾರೆ ಅವರು ವಾರಕ್ಕೆ ಒಂದು ದಿನ ಕಛೇರಿಯಲ್ಲಿದ್ದು, ಉಳಿದಂತಹ ದಿವಸಗಳಲ್ಲಿ ರೈತರ ಹೊಲಕ್ಕೆ ಹೋಗಿ ಓಡಾಟವನ್ನು ಮಾಡಿ, ಅವನ ಸಂಕಷ್ಟಗಳಿಗೆ ಸ್ಪಂದಿಸಬೇಕು. ಈ ಮಾತನ್ನು ತಾವು ಅಧಿಕಾರಿಗಳ ಸಭೆಯಲ್ಲಿ ಹೇಳಿದ್ದೀರಿ. ಒಂದು ಸುತ್ತೋಲೆಯನ್ನು ತಾವು ಕಳುಹಿಸಿರಬಹುದು ಅದರ ಬಗ್ಗೆ ನನಗೆ ಗೊತ್ತಿಲ್ಲ. ಈ ರಾಜ್ಯದಲ್ಲಿ ಆ ಭಾಗದ ಮತ್ತು ಈ ಭಾಗದ ಯಾವುದಾದರೂ ಶಾಸಕರನ್ನು ಬೇಕಾದರೂ ಕೇಳಿ ಈ ಕೃಷಿ ಇಲಾಖೆಯಲ್ಲಿರುವಂತಹ ಅಧಿಕಾರಿಗಳು ಯಾರಾದರೂ ಹೋಗಿ ಈ ರೈತ ಸತ್ತಿದ್ದಾನೆಯೇ? ಬದುಕಿದ್ದಾನೆಯೇ ಎಂದು ನೋಡಿಲ್ಲ. ಕಲ್ಪನೆ ಮಾಡಿಕೊಳ್ಳಲಿಕ್ಕೆ ಆಗದೇ ಇರುವಂತಹ ನೂರಾರು ರೋಗಗಳು ರೈತನ ಉತ್ಪನ್ನಗಳಿಗೆ ತಟ್ಟುತ್ತಿರುವಂತಹ ಸಂದರ್ಭದಲ್ಲಿ ಅದಕ್ಕೆ ಪರಿಹಾರವನ್ನು ಹುಡುಕುವ ಬಗ್ಗೆ ಕೃಷಿ ಅಧಿಕಾರಿ ಏನಾದರೂ ಓಡಾಟವನ್ನು ಮಾಡುತ್ತಿದ್ದಾನೆಯೇ, ನೀವು ಏನಾದರೂ ಅವನನ್ನು ಕೇಳಿದ್ದೀರಾ, ಬಹುಶಃ ನಿಮ್ಮ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ಅದರ ಬಗ್ಗೆ ವಿಚಾರ ಮಾಡುವುದಕ್ಕೇ ಪ್ರಯತ್ನವನ್ನು ತಾವು ಮಾಡಿದರೆ, ಕೃಷಿ ಅಧಿಕಾರಿಗಳು ಕಛೇರಿಯಲ್ಲಿಯೂ ಇರುವುದಿಲ್ಲ. ಅವರು ರೈತನ ಹೊಲಕ್ಕೂ ಕೂಡ ಹೋಗುವುದಿಲ್ಲ. ಅವರು ಬೇರೆ ಅವರದೇ ಆದ ವ್ಯವಹಾರದಲ್ಲಿ ತಲ್ಲೀನರಾಗಿರುವಂತಹ ಪರಿಸ್ಥಿತಿ ಇದೆ. ಅವರಿಗೆ ಸಂಬಳವನ್ನು ರೆಗ್ಯುಲರ್ ಆಗಿ ನಾವು ಕೊಡುತ್ತಿದ್ದೇವೆ. ಹೌದೋ, ಅಲ್ಲವೋ ಎಂಬುದರ ಬಗ್ಗೆ ತಾವು ಪರಿಶೀಲನೆಯನ್ನು ಮಾಡಬೇಕು. ಇನ್ನು ಎರಡನೇಯದಾಗಿ ಹೇಳುವುದಾದರೆ, ಈ ರೈತ ಸಂಪರ್ಕ ಕೇಂದ್ರಗಳಲ್ಲೇ ಡೂಪ್ಲಿಕೇಟ್ ಬಿತ್ತನೆ ಬೀಜಗಳು

ಅಥವಾ ಹಿಂದಿನ ವರ್ಷದಲ್ಲಿ ಖರ್ಚಾಗದೆ ಇರುವಂತಹ ಬಿತ್ತನೆ ಬೀಜಗಳನ್ನು ಪ್ಯಾಕ್ ಮಾಡಿಸಿ ಮಾರಾಟ ಮಾಡುತ್ತಿರುವಂತಹ ಉದಾಹರಣೆಗಳು ಆ ಬಗ್ಗೆ ಲೇಖನಗಳು ಪತ್ರಿಕೆಗಳಲ್ಲಿ ಬರುತ್ತಿದೆ. ಉದಾ : ಈ ಕೊಪ್ಪಳ ಜಿಲ್ಲೆಯ ಹಲವು ರೈತ ಸಂಪರ್ಕ ಕೇಂದ್ರಗಳು ಈಚೆಗೆ ಮುಂಗಾರು ಬಿತ್ತನೆ ಬೀಜವನ್ನು ವಿತರಿಸಿದ್ದು, ನೂರಾರು ಎಕರೆಯಲ್ಲಿ ಆ ಬಿತ್ತನೆ ಬೀಜವನ್ನು ಬಿತ್ತಿದ್ದು, ಅದು ಹುಟ್ಟೇ ಇಲ್ಲ. ರೈತರು ಕಣ್ಣೀರಿಟ್ಟು, ಆ ಬಗ್ಗೆ ಗೊಂದಲ ಅಲ್ಲಿ ಉಂಟಾಗಿದ್ದು ಎಲ್ಲಾ ಪತ್ರಿಕೆಗಳಲ್ಲೂ ಆ ಬಗ್ಗೆ ಪ್ರಕಟವಾಗಿದೆ. ಇದು ಇರಕಲ್‌ಗಡ ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲಿ, ಇರಕಲ್‌ಗಡ, ಕೋಟದಾಳ, ಜಿನ್ನಿಯಾಳ, ಕನಕನದೊಡ್ಡಿ, ಈ ರೀತಿಯ ಕೊಪ್ಪಳ ಜಿಲ್ಲೆಯ ಆ ಭಾಗದಲ್ಲಿ ಅಲ್ಲಿರುವಂತಹ ಸುತ್ತಮುತ್ತಲು ರೈತರು ಈ ರೀತಿಯ ಕಳಪೆ ಬಿತ್ತನೆ ಬೀಜಗಳನ್ನು ತೆಗೆದುಕೊಂಡು ಹೋಗಿ, ಅದನ್ನು ಬಿತ್ತಿದ್ದರೂ ಅದು ಹುಟ್ಟದೆ ಮೊಳಕೆಯಾಗದೆಯೇ, ಅವರು ಸಂಕಷ್ಟದಲ್ಲಿರುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಅದರ ಬಗ್ಗೆ ನಿಮಗೆ ಮಾಹಿತಿ ಬಂದಿದೆ ಎಂದು ನಾನು ಅಂದುಕೊಂಡಿದ್ದೇನೆ. ಇದರ ಬಗ್ಗೆ ತಾವು ತನಿಖೆಯನ್ನು ಮಾಡಿಸಿದ್ದೀರಾ? ನಾನು ಒಂದು ಸ್ಯಾಂಪಲ್‌ನ್ನು ತಮಗೆ ಹೇಳುತ್ತಿರುವುದು. ಈ ರೀತಿಯ ಹತ್ತಾರು ಉದಾಹರಣೆಗಳು ಇವೆ. ಕಳಪೆ ಬೀಜವನ್ನು ಸರ್ಟಿಫೈಡ್ ಸೀಡ್ಸ್ ಎಂದು ಹೇಳಿ ಪ್ಯಾಕ್ ಮಾಡಿ ಅದನ್ನು ಮಾರಾಟ ಮಾಡಿ ಮೋಸ ಮಾಡುವುದು ಒಂದು ಕಡೆ, ಇನ್ನೊಂದು ಕಡೆ ಈ ರೀತಿ ನಿಮ್ಮ ರೈತ ಸಂಪರ್ಕ ಕೇಂದ್ರಗಳಲ್ಲಿಯೇ ಈ ರೀತಿ ಘಟನೆಗಳು ನಡೆಯುತ್ತಿದೆ ಎನ್ನುವುದಾದರೆ ಇದು ನಿಮ್ಮ ಅವಗಾಹನೆಗೆ ಬಂದಿದೆಯಾ? ತಾವು ಯಾವುದಾದರೂ ರೈತ ಸಂಪರ್ಕ ಕೇಂದ್ರಗಳ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಾ? ಈ ಕಡೆಗೆ ತಾವು ವಿಶೇಷವಾದ ಗಮನವನ್ನು ಕೊಟ್ಟಿದ್ದೀರಾ? ಎಂಬುದರ ಬಗ್ಗೆ ನಾನು ಈ ಸಂದರ್ಭದಲ್ಲಿ ನಿಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ತಾವು ಸಬ್ಸಿಡಿಯ ಮೂಲಕ ಬಿತ್ತನೆ ಬೀಜವನ್ನು ಕೊಡುತ್ತಿದ್ದೀರಿ. ನಾವು ಹಾಗೂ ಮಾನ್ಯ ಸದಸ್ಯರಾದ ಉದಾಸೀಯವರು ಕುಳಿತಂಥ ಸಂದರ್ಭದಲ್ಲಿ ಸಂಬಂಧಪಟ್ಟಂತಹ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಅವರು ಟೆಲಿಫೋನ್‌ನಲ್ಲಿ ಕೇಳಿಕೊಂಡು ಕೆಲವು ಮಾಹಿತಿಗಳನ್ನು ಅವರಿಗೆ ಕೊಡುತ್ತಿದ್ದರು. ಆ ಬಿತ್ತನೆ ಬೀಜವನ್ನು ಇವತ್ತು ಸರ್ಟಿಫೈಡ್ ಸೀಡ್ಸ್ ಎಂದು ಮಾರಾಟ ಮಾಡುತ್ತಿದ್ದಾರೆ. ಅದು ಮಾರ್ಕೆಟ್‌ನಲ್ಲಿ ಅದಕ್ಕಿಂತ ಕಡಿಮೆ ಬೆಲೆಗೆ ಸಿಗುತ್ತಿದೆ. ತಾವು 25 ಪರ್ಸೆಂಟ್ ಸಬ್ಸಿಡಿ ಕೊಟ್ಟ ಮೇಲೂ ಕೂಡ ಕಡಿಮೆ ಬೆಲೆಗೆ ಸಿಗುತ್ತಿದೆ. 50 ಪರ್ಸೆಂಟ್ ಸಬ್ಸಿಡಿಯನ್ನು ಕೊಟ್ಟರೂ ಕೂಡ ರೈತರು ದುಬಾರಿ ಬೆಲೆಯನ್ನು ಕೊಟ್ಟು ಖರೀದಿಯನ್ನು ಮಾಡುತ್ತಾನೆ. ಆ ರೈತನಿಗೆ ಈ ಸರ್ಟಿಫೈಡ್ ಸೀಡ್ಸ್‌ನಿಂದ ಏನೂ ಲಾಭ ಕೂಡ ಆಗುತ್ತಿಲ್ಲ. ರೈತನು ಮೋಸ ಹೋಗುತ್ತಿದ್ದಾನೆ. ಇದರ ಬಗ್ಗೆ ಗಮನ ಕೊಡುವುದರ ಬಗ್ಗೆ ತಾವು ಪ್ರಯತ್ನವನ್ನು

ಮಾಡುತ್ತೀರಾ? ಇಡೀ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿ ಈ ಮಲ್ಟಿ ನ್ಯಾಷನಲ್ ಕಂಪನಿಗಳು ಈ ಬಿತ್ತನೆ ಬೀಜದ ಎಲ್ಲಾ ಅಧಿಕಾರವನ್ನು ಅವರು ತೆಗೆದುಕೊಂಡರು. ನಮ್ಮ ಹಕ್ಕಿಗೆ ತೊಂದರೆ ಆಗುವಂತಹ ಸಂದರ್ಭ, ಈ ಪೇಟೆಂಟ್ ಆಕ್ಟ್‌ಗೆ ತಿದ್ದುಪಡಿಯಾಗಿ ನಮ್ಮ ರೈತ ಸಮೂಹ ಸಂಕಷ್ಟದಲ್ಲಿ ಸಿಲುಕಿ ನರಳುವಂತಹ ಸಂದರ್ಭ ಬಂದಿದೆ. ಆ ಪೇಂಟೆಂಟ್ ಆಕ್ಟ್ ಕೇಂದ್ರ ಸರ್ಕಾರದಲ್ಲಿ ಜಾರಿಗೆ ಬರುವಂತಹ ಸಂದರ್ಭದಲ್ಲಿ ಏನಾದರೂ ಈ ರೈತ ಸಮೂಹಕ್ಕೆ, ಈ ಬಿತ್ತನೆ ಬೀಜದ ಪೇಟೆಂಟ್ ಆಕ್ಟ್ ಆದರೆ ಅದರ ಪರಿಣಾಮಗಳು ಏನಾಗಬಹುದು ಎಂಬುದರ ಬಗ್ಗೆ ತಾವು ಅಭ್ಯಾಸ ಮಾಡಿ ಅದನ್ನು ಬಿಗಿ ಮಾಡುವುದರ ಬಗ್ಗೆ ಏನಾದರೂ ಕ್ರಮವನ್ನು ತಾವು ತೆಗೆದುಕೊಂಡಿದ್ದೀರಾ? ಇವತ್ತು ನಮ್ಮ ಭಾಗದಲ್ಲಿಯೇ ಕೃಷಿ ಸಂಶೋಧನಾ ಕೇಂದ್ರಗಳು ಹೊಸ ಹೊಸ ತಳಿಗಳನ್ನು ವಿಜ್ಞಾನಿಗಳು ಕಂಡುಹಿಡಿದರೂ ಸಹ ಅದಕ್ಕೆ ಬೇಕಾದಂತಹ ಒಂದು ಪ್ರಚಾರ ಅದನ್ನು ಪೇಟೆಂಟ್ ಮಾಡದೆಯೇ ಅದು ಉಪಯೋಗವಾಗದೆಯೇ ಒದ್ದಾಡಿಕೊಂಡು ಕೇವಲ ಹೊರರಾಜ್ಯದ ಪ್ರೈವೇಟ್ ಸೀಡ್ಸ್ ಕಂಪನಿಗಳಿಗೆ ಅನುಕೂಲ ಮಾಡಿಕೊಡುವಂತಹ ಪ್ರಯತ್ನ ಆಗುತ್ತಿದೆ. ಇದರ ಬಗ್ಗೆ ರಾಜ್ಯದಲ್ಲಿ ಬಿಗಿ ಕ್ರಮ ತೆಗೆದುಕೊಳ್ಳುವಂತಹದ್ದರ ಬಗ್ಗೆ ಮುಂದೆ ಆಗಬಹುದೇ? ಈ ಕಡೆಗೂ ತಾವು ವಿಶೇಷವಾದ ಗಮನವನ್ನು ಕೊಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ಎರಡನೇಯದಾಗಿ ಒಂದು ಸರ್ಕಾರ ಅಂದ ಮೇಲೆ ಬೆಂಬಲ ಬೆಲೆ, ನಾನು ನಿಮ್ಮ ಹತ್ತಿರ ಮಾತನಾಡುವಂತಹ ಕಾಲದಲ್ಲಿ ತಾವು ಜೆಡಿಎಸ್ ನಲ್ಲಿದ್ದೀರಾ ಎಂದು ತಿಳಿದುಕೊಂಡು ಆ ಪ್ರಣಾಳಿಕೆಯನ್ನು ತಾವು ಓದದಿದ್ದರೆ ನಾನು ಅದನ್ನು ಇನ್ನೊಮ್ಮೆ ಓದಿ ಎಂದು ನಾನು ಹೇಳುತ್ತಿದ್ದೇನೆ. ತಾವು ಸಮ್ಮಿಶ್ರ ಸರ್ಕಾರದಲ್ಲಿದ್ದೀರಿ, ತಾವು ಏನು ಹೇಳಿದ್ದೀರಿ, ರೈತ ನಮ್ಮ ಮೂಲಾಧಾರ ಎಂದು ಹೇಳಿ, ಅತಿವೃಷ್ಟಿ ಮತ್ತು ಅನಾವೃಷ್ಟಿಯ ಸಂದರ್ಭದಲ್ಲಿ ತ್ವರಿತವಾಗಿ ನಾವು ರೈತರ ಪರವಾಗಿ ನಿಲ್ಲುತ್ತೇವೆ. ವ್ಯವಸಾಯೋತ್ಪನ್ನಗಳ ಬೆಲೆ ಕುಸಿದಂತಹ ಸಂದರ್ಭದಲ್ಲಿ ಸರ್ಕಾರವೇ ಮಾರುಕಟ್ಟೆಯನ್ನು ಪ್ರವೇಶ ಮಾಡುತ್ತದೆ. ಕೃಷಿ ಉತ್ಪನ್ನಗಳ ಬೆಲೆಯನ್ನು ಬಿತ್ತುವ ಪೂರ್ವದಲ್ಲಿಯೇ ಘೋಷಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಮಾನ್ಯ ಪಾಟೀಲ್‌ರವರೆ, ಬಿತ್ತನೆ ಮಾಡುವಂತಹ ಮುಂಚೆಯೇ, ನೀವು ಯಾವ ಬಿತ್ತನೆಯನ್ನೇ ಮಾಡಿಸಿ, ಏನು ಬೆಳೆಯನ್ನು ಬೆಳೆಯುತ್ತೀರಿ, ಬಿತ್ತನೆಗಿಂತ ಮೊದಲು ಅದರ ಬೆಲೆಯನ್ನು ನಾವು ನಿಗದಿ ಮಾಡುತ್ತೇವೆ. ಈ ಭರವಸೆಯನ್ನು ತಾವು ಚುನಾವಣೆಯ ಪ್ರಣಾಳಿಕೆಯಲ್ಲಿ ಕೊಟ್ಟಿದ್ದೀರಿ. ಇವತ್ತು ನಾವು ಸಮ್ಮೀಶ್ರ ಸರ್ಕಾರದಲ್ಲಿದ್ದೀರಿ, ಯಾವ ಪಾರ್ಟಿಯಲ್ಲಿಯಾರಿದ್ದಾರೆ. ಅನ್ನುವುದು ಮುಖ್ಯವಲ್ಲ. ಬೆಂಬಲ ಬೆಲೆಯು ಕಡಿಮೆಯಾದಾಗ ನಾವೇ ಮಾರ್ಕೆಟ್‌ಗೆ ಪ್ರವೇಶ ಮಾಡುತ್ತೇವೆಂದು ಹೆಳಿದ್ದೀರಿ, ಓ.ಕೆ. ನಾನು ತಮಗೆ ಎರಡು ಉದಾಹರಣೆಗಳನ್ನು ಕೊಡುತ್ತೇನೆ. ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಮುಸುಕಿನ ಜೋಳವನ್ನು ಬೆಳೆದಿದ್ದಾರೆ.

ಏಕೆಂದರೆ ಕಡಿಮೆ ಖರ್ಚಿನಲ್ಲಿ ಎರಡು ಹೊತ್ತು ಗಂಜಿಗೆ ದಾರಿ ಮಾಡಿಕೊಳ್ಳುವ ಒಂದು ಹೊಸ ಸ್ಥಿತಿಯಲ್ಲಿ ರೈತ ಇದ್ದಾನೆ. ನೀರಾವರಿ ಪ್ರದೇಶಗಳಲ್ಲೂ ಸಹ ರೈತ ಮುಸುಕಿನ ಜೋಳವನ್ನು ಬೆಳೆಯುತ್ತಿದ್ದಾನೆ. ನಾನು ಶಿಕಾರಿಪುರ ತಾಲ್ಲೂಕಿನಿಂದ ಬಂದವನಾಗಿದ್ದೇನೆ. ಈ ರಾಜ್ಯದಲ್ಲಿ ಹೆಚ್ಚಾಗಿ ಮುಸುಕಿನ ಜೋಳವನ್ನು ಬೆಳೆಯುತ್ತಾರೆ. ಹೋದ ವರ್ಷ ಏನಾಯಿತು? ಬಂಬಲಬೆಲೆ 515 ರೂಪಾಯಿಗಿಂತ ಜಾಸ್ತಿ ಇದ್ದರೂ ಸಹ ಅದನ್ನು ಖರೀದಿ ಮಾಡುವ ಬಗ್ಗೆ ಎಪಿಎಂಸಿಯಾರ್ಡ್‌ಗಳಲ್ಲಿ ಅವನು ಒಂದು ಒಂದೊಂದು ತಿಂಗಳುಗಟ್ಟಲೆ ಕಾಯಬೇಕಾಯಿತು. ನಾನು ಎಷ್ಟು ಸಾರಿ ಸಂಪರ್ಕ ಮಾಡಿದ್ದೇನೆಂಬುದು ಗೊತ್ತಿದೆ. ಆತನು ತಿಂಗಳುಗಟ್ಟಲೆ ಅವನು ಮಾರಾಟ ಮಾಡುವಂತಹ ಪರಿಸ್ಥಿತಿ ಬಂದಿದೆ. ಇದರ ಪರಿಣಾಮ ಏನಾಯಿತು? ನಾನು ಎಪಿಎಂಸಿಗೆ ಸಂಬಂಧಪಟ್ಟಂತಹ, ಕೃಷಿ ಇಲಾಖೆ ಸಂಬಂಧಪಟ್ಟಂತಹ ಸಚಿವರು ಎಲ್ಲರೂ ಇದ್ದೀರಿ, ಶಾಸಕರುಗಳು ನಾವು ಇದ್ದೇವೆ. 100ಕ್ಕೆ 90 ಭಾಗ ರೈತರ ಹತ್ತಿರ ಒಂದು ಕ್ವಿಂಟಾಲ್‌ಗೆ 460 ರಿಂದ 470 ರೂಗಳಿಗೆ ಖರೀದಿಯನ್ನು ಮಾಡಿ ಅವನು ಅಲ್ಲಿಗೆ ಬಂದು ಕಮೀಷನ್‌ನ್ನು ಕೊಟ್ಟು ಅವನು ಮುಂಚೆ ಜೋಳವನ್ನು ಖರೀದಿ ಮಾಡುವಂತಹ ವ್ಯವಸ್ಥೆಯನ್ನು ಮಾಡಿಕೊಂಡು ಅದರ ಲಾಭವನ್ನು ಪೂರ್ತಿ ವ್ಯಾಪಾರಸ್ಥರು ಮಾಡಿಕೊಂಡರು, ಒಂದು ಸಾರಿ ಆತನು ಎಪಿಎಂಸಿ ಮಾರ್ಕೆಟ್ ಯಾರ್ಡ್‌ಗೆ ಬಂದ ಮೇಲೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ನಾನು ಜೋಳವನ್ನು ಖರೀದಿ ಮಾಡಿದ್ದೇವೆ. ಈ ವಿಷಯ ತಮಗೆ ಗೊತ್ತಿದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಶಿಕಾರಿಪುರದಲ್ಲಿ ನಾವು ಖರೀದಿ ಮಾಡಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಅದರ ಬಗ್ಗೆ ನಾನು ಹೇಳುತ್ತೇನೆ. ನಾವು ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ ಮೇಲೆ ಮಾನ್ಯ ವಿರೋಧಪಕ್ಷದ ನಾಯಕರಿಗೆ ಕಳೆದ ವಿಧಾನಸಭೆಯಲ್ಲೂ ಕೂಡ ಅದರ ಬಗ್ಗೆ ಹೇಳಿದ್ದೇವೆ. 187 ಕೋಟಿ ರೂಪಾಯಿಗಳಷ್ಟು ನಾವು ಮುಸುಕಿನ ಜೋಳವನ್ನು ಎಫ್.ಸಿ.ಐ.ಮೂಲಕ ಸರ್ಕಾರ ಕೊಂಡಿದೆ. ತಾವು ಹೇಳುವಂತಹ ಪ್ರಕಾರ ಆಗ ಬಹಳ ಪಿಕ್ ಸೀಸನ್‌ನಲ್ಲಿ ಮಾರುಕಟ್ಟೆಗೆ ಬರುವಂತಹ ಸಂದರ್ಭದಲ್ಲಿ ಒಂದು ದಿನ ಅಥವಾ ಎರಡು ದಿನಗಳು ಲೇಟಾಗಿರಬಹುದು. ವಿನಃ ಯಾವುದೇ ರೈತನಿಗೆ ನಾವು ಮುಸುಕಿನ ಜೋಳವನ್ನು ಕೊಳ್ಳದೆಯೇ ಬಿಡಲಿಲ್ಲ. ಎಲ್ಲಾ ಮುಸುಕಿನ ಜೋಳ ಏನು 520 ರೂಪಾಯಿಗಿಂದ ಕಡಿಮೆ ಬಂದಿದ್ದರೆ ಅವರಿಗೆ 520 ರೂಪಾಯಿಗಳನ್ನು ಕೊಟ್ಟು ಸರ್ಕಾರ ಅದನ್ನು ಕೊಂಡಿದ್ದೇವೆ. ಅದನ್ನು ನಾವು ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಎಪಿಎಂಸಿ ಹಾಗೂ ಕೃಷಿ ಸಚಿವರುಗಳಿಗೆ ನೀವುಗಳು ಖರೀದಿ ಮಾಡಲಿಲ್ಲವೆಂದು ಹೇಳುತ್ತಿಲ್ಲ. ತಾವು ಬಹಳ ದೊಡ್ಡ ಪ್ರಮಾಣದಲ್ಲಿ ಖರೀದಿಯನ್ನು ಮಾಡಿದ್ದೀರಿ. ಇದರ ಬಗ್ಗೆ ನಾನು ಹೇಳುವುದು ಬೇಡ, ನೀವು ನಿಮ್ಮ ಇಲಾಖೆಯ ಯಾರನ್ನಾದರೂ ಕಳುಹಿಸಿ, ನಾನು ಏನು ಹೇಳುತ್ತಿದ್ದೇನೆಂದರೆ, ಒಬ್ಬ ರೈತ ತನ್ನ ಮುಸುಕಿನ ಜೋಳವನ್ನು ತಂದು ಎಪಿಎಂಸಿ ಯಾರ್ಡ್‌ನಲ್ಲಿಟ್ಟು 15–20 ದಿನಗಳ ಕಾಲ ಇಟ್ಟಿದ್ದು, ಅವನು ಇಟ್ಟ ದಿವಸಗಳ ಬಗ್ಗೆ ತಾವು ರೆಕಾರ್ಡ್‌ಗಳನ್ನು ವೆರಿಫೈ ಮಾಡಿ. ನಾನು ಪ್ರತಿಪಕ್ಷದ ನಾಯಕನಾಗಿ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ನಿಮ್ಮ ಮೇಲೆ ಗೂಬೆಯನ್ನು ಕೂರಿಸುವುದಕ್ಕಲ್ಲ. ನಿಮ್ಮನ್ನು ದೂರುವುದಕ್ಕಲ್ಲ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ದಯಮಾಡಿ ನಮ್ಮ ತಾಲ್ಲೂಕಿನಲ್ಲಿ ಬಹಲ ಸಿಸ್ಟಮ್ಯಾಟಿಕ್ ಆಗಿ ಇಪ್ಪತನೇ ತಾರೀಖು ಬರಬೇಕೆಂದು ಆ ಏರಿಯಾಗಳಿಗೆ ಡೇಟ್‌ಗಳನ್ನು ಫಿಕ್ಸ್ ಮಾಡಿದ್ದಾರೆ. ಈಗ ನಡೆದಿರುವ ಘಟನೆಗಳ ಬಗ್ಗೆ ಹೇಳಿದರೆ ನೀವು ಒಪ್ಪಿಕೊಳ್ಳದಿದ್ದರೆ ಅಧಿಕಾರಿಗಳನ್ನು ಕರೆಯಿಸಿ ನಾವು ಚರ್ಚೆಯನ್ನು ಮಾಡೋಣ. 15–20 ದಿನಗಳ ಕಾಲ ಆ ಚೀಲಗಳನ್ನು ತೂಕ ಮಾಡಿ ಲಿಫ್ಟ್ ಮಾಡದೇ ಇದ್ದ ಪರಿಣಾಮದಿಂದ ರೈತನು ಯಾವ ವ್ಯಾಪಾರಸ್ಥರಿಗೆ ತನ್ನ ಬೆಳೆಯನ್ನು ಮಾರಾಟ ಮಾಡಬೇಕೆಂದಿದ್ದನೋ ಅದನ್ನು 460–470ಕ್ಕೆ ಅಂದರೆ ನೂರಕ್ಕೆ ಎಪ್ಪತ್ತು ಭಾಗ ಮಾರಾಟ ಮಾಡಿ ಅವನು ಒಂದು ಲಾಭ ಮಾಡಿಕೊಂಡಿದ್ದಾನೆ. ಇದರ ಅಂಕಿ ಅಂಶಗಳನ್ನು ನಾನು ಕೊಡುತ್ತೇನೆ ಇದಕ್ಕೆ ಇನ್ನು ಮುಂದೆ ಅವಕಾಶವನ್ನು ಕೊಡಬೇಡಿ. ಎರಡನೇಯದಾಗಿ ಮುಸುಕಿನ ಜೋಳ ವಿಷಯವನ್ನು ಮರೆತುಬಿಡಿ, ಭತ್ತದ ಬಗ್ಗೆ ಚರ್ಚೆ ಮಾಡೋಣ ಒಂದೂವರೆ ತಿಂಗಳ ಹಿಂದೆ ಒಂದು ಕ್ವಿಂಟಾಲ್‌ಗೆ ಮಧ್ಯಮವರ್ಗದ ಭತ್ತಕ್ಕೆ 560–600 ರೂಪಾಯಿಗಳಿತ್ತು. ಕೇಂದ್ರ ಸರ್ಕಾರ ಬೆಂಬಲ ಬೆಲೆ ಘೋಷಣೆ ಮಾಡಿದೆ. ಭದ್ರಾವತಿ ಇರಬಹುದು, ಶಿವಮೊಗ್ಗ ಜಿಲ್ಲೆಯಿರಬಹುದು. ಅಥವಾ ಬೇರೆಬೇರೆ ಯಾವುದೇ ಅಕ್ಕಪಕ್ಕದ ಜಿಲ್ಲೆಗಳ ಪ್ಯಾಡಿಏರಿಯಾ ಆಗಿರಬಹುದು. ಇವತ್ತು 500–510 ರೂಪಾಯಿಗಳು ಒಂದು ಕ್ವಿಂಟಾಲ್‌ಗೆ ಬೆಲೆ ಬಂದಿರುವ ಸಂದರ್ಭದಲ್ಲಿ ಬೆಂಬಲ ಬೆಲೆಗೆ ಖರೀದಿ ಮಾಡಬೇಕೆಂದು ಆ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮೂರು ಬಾರಿ ಬೇಡಿಕೆಯನ್ನು ಇಟ್ಟು ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆಯಲಾಗಿದೆ. ಪತ್ರಿಕಾ ಗೋಷ್ಠಿಯನ್ನು ಸಹ ಮಾಡಿದ್ದೇವೆ. ಅವರು ಈಗ ಉತ್ತರ ಕೊಡುವ ಸಂದರ್ಭದಲ್ಲಿ, ಕರ್ನಾಟಕ ರಾಜ್ಯದಲ್ಲಿ ಒಂದು ಕಡೆಯಾದರೂ ನೀವು ಒಂದು ಕ್ವಿಂಟಾಲ್ ಅನ್ನು ಖರೀದಿ ಮಾಡಿದ್ದರೆ ಒಂದು ಉದಾಹರಣೆ ಇದ್ದರೆ ಕೊಡಿ. ಕೇಂದ್ರ ಸರ್ಕಾರ ಬೆಂಬಲ ಬೆಲೆ ಘೋಷಣೆ ಮಾಡಿದೆ. ಇದರಿಂದ ಮಾರುಕಟ್ಟೆಯಲ್ಲಿ ಒಂದು ಕ್ವಿಂಟಾಲ್‌ಗೆ 60–70 ರೂಪಾಯಿ ಕಡಿಮೆಯಾಗಿದೆ. ಬೆಂಬಲ ಬೆಲೆಯಂತೆ ನೀವು ಖರೀದಿ ಮಾಡಿದ್ದರೆ. ಈಗ ಭತ್ತದ ಬೆಲೆ

ಜಾಸ್ತಿಯಾಗುತ್ತಿತ್ತು. ರೈತನು ಉಳಿದುಕೊಳ್ಳುತ್ತಿದ್ದನು. ನೀವು ಎಷ್ಟು ಖರೀದಿ ಮಾಡಿರುವಿರಾ ಎಂಬ ಬಗ್ಗೆ ನೀವು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿ. ಈಗ ನಾನೇನು ಹೇಳಲಿಕ್ಕೆ ಹೊರಟಿದ್ದೇನೆಂದರೆ, ಇವತ್ತು ಚುನಾವಣಾ ಪ್ರಕಟಣೆಯಲ್ಲಿ ನೀವಾಗಲೀ, ನಾವಾಗಲೀ, ದೊಡ್ಡ ದೊಡ್ಡ ಘೋಷಣೆ ಮಾಡಬಹುದು, ಆದರೆ ಇದನ್ನು ನೀವು ಪುಕ್ಸಟ್ಟೆ ತೆಗೆದುಕೊಳ್ಳುವಿರಾ? ಇಷ್ಟು ದೊಡ್ಡ ಪ್ರಮಾಣದಲ್ಲಿ ಜೋಳವನ್ನು ಖರೀದಿ ಮಾಡಿದ್ದೀರಿ ಒಳ್ಳೆಯದು ಖರೀದಿ ಮಾಡಿದ ಮೇಲೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತೀರಿ ತಾನೆ? ಸ್ಟಾಕ್ ಮಾಡಿದ ನಂತರ 25–50 ರೂಪಾಯಿ ನಷ್ಟವಾಗಬಹುದು, ಅದನ್ನು ಕೇಂದ್ರ ಸರ್ಕಾರ ಕಾಂಪನ್‌ಸೇಟ್ ಮಾಡಿಕೊಡುತ್ತದೆ ಅಥವಾ ರಾಜ್ಯ ಸರ್ಕಾರ ಭರಿಸೋಣ. ಆದರೆ ಪ್ರಶ್ನೆ ಏನೆಂದರೆ, ರೈತರ ಬೆಳೆಗೆ ಬೆಂಬಲ ಘೋಷಣೆ ಆದ ಮೇಲೆ ತತ್‌ಕ್ಷಣ ಮಾರುಕಟ್ಟೆಗೆ ನೀವು ಅದನ್ನು ತರದಿದ್ದರೆ ಖರೀದಿ ಕೇಂದ್ರಗಳನ್ನು ತೆಗೆಯದಿದ್ದರೆ, ಅದರ ದುಷ್ಪರಿಣಾಮ ಏನಾಗುತ್ತದೆಂದರೆ ರೈತನು ಯಾವ ರೀತಿ ಸಂಕಷ್ಟದಲ್ಲಿ ಸಿಲುಕಿ ನರಳುತ್ತಿದ್ದಾನೆ ಅನ್ನುವುದಕ್ಕೆ ನಾನು ಈ ಪ್ಯಾಡಿಯ ಉದಾಹರಣೆಯನ್ನು ಕೊಡುತ್ತಿದ್ದೇನೆ. ಯಾವ ಸಂದರ್ಭದಲ್ಲಿಯೂ ಸಹ ರೈತನಿಗೆ ಈ ರೀತಿ ಬೆಂಬಲ ಬೆಲೆ ಘೋಷಣೆ ಮಾಡಿ ಖರೀದಿ ಮಾಡಲಿಕ್ಕೆ ನೀವು ರೆಡಿ ಇಲ್ಲ. ಅವನ ಬೆಳೆಯನ್ನು ಖರೀದಿಸಿ 15 ದಿನವಾದರೂ ಅದಕ್ಕೆ ದುಡ್ಡು ಕೊಡುವುದಿಲ್ಲ. ನಿಮ್ಮ ಚೆಕ್‌ಗಳ ದಿನಾಂಕಗಳನ್ನು ನೋಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) :– ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಕೊಟ್ಟರು, ಸ್ಪಷ್ಟವಾದ ವಿಚಾರ ಅದರಲ್ಲಿ ಪ್ರಸ್ತಾಪ ಮಾಡಿದರು. ಈ ಸೌಲಭ್ಯವನ್ನು ಸರ್ಕಾರ ಏನು ಕೊಟ್ಟಿದೆ ಅದನ್ನು ಪಡೆದುಕೊಳ್ಳಲಿಕ್ಕೆ ಕೊನೆಯ ದಿವಸ 30ನೇ ತಾರೀಖು ಇತ್ತು. ಆ ಅವಧಿಯನ್ನು ವಿಸ್ತರಣೆ ಮಾಡಬೇಕೆಂಬ ವಿಚಾರವಿದೆ. ತಾವು ಅಧ್ಯಕ್ಷ ಪೀಠದಲ್ಲಿದ್ದು ಅನುಮತಿಯನ್ನು ಕೊಟ್ಟು ರೂಲ್ ಚೇಂಜ್ ಮಾಡುತ್ತಿದ್ದೇನೆ. ಎಲ್ಲರೂ ಚರ್ಚೆಯಲ್ಲಿ ಭಾಗವಹಿಸುವಂತಾಗಲಿ ಎಂದು ಹೇಳಿರುವಿರಿ. ರೈತನ ಸಂಪರ್ಕ, ಕೇಂದ್ರ, ಬಿತ್ತನೆ ಬೀಜ, ಬೆಂಬಲ ಬೆಲೆ ಹೀಗೆ ಎಲ್ಲೆಲ್ಲೊ ಚರ್ಚೆ ವಿಷಯಾಂತರವಾಗುತ್ತಿದೆ. ಸಚಿವರು ಸಹ ಮಧ್ಯೆ ಮಧ್ಯೆ ಎದ್ದು ನಿಂತು ಉತ್ತರ ಕೊಡುತ್ತಾರೆ. ಈ ರೀತಿಯಾದರೆ ಡಿಬೇಟ್ ಏಕೆ ಆಗಬೇಕು? ಇದು ಬಹಳ ದೊಡ್ಡ ಅಪರಾಧವಾಗುತ್ತದೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಅತ್ಯಂತ ಹೆಚ್ಚಿನ ಗೌರವ ಇಟ್ಟುಕೊಂಡು ಕಳಕಳಿಯಿಟ್ಟುಕೊಂಡು ನಮ್ರತೆಯಿಂದ ತಮ್ಮಲ್ಲಿ ಬೇಡಿಕೊಳ್ಳುತ್ತೇನೆ. ಇವತ್ತು ರೈತಸಮೂಹ ಏನು ಕಷ್ಟಕ್ಕೆ ಸಿಲುಕಿ ನರಳುತ್ತಿದೆ. ಈ ಅವಕಾಶವನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಆಗಿಲ್ಲ. ಏನೆಲ್ಲಾ ಪ್ರಯತ್ನವನ್ನು ಮಾಡಿದರೂ ಕೂಡ ರೈತನಿಗೆ ತಾನು ತೆಗೆದುಕೊಂಡ ಸಾಲ ವಾಪಸ್ಸು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಈ ಸೌಲಭ್ಯ ಕೊಟ್ಟರೂ ಕೂಡ ಅವನ ಶಕ್ತಿ

ಮೀರಿದಂತಹ ಕಾರಣಗಳು ಅವನನ್ನು ಇನ್ನೂ ಕೂಡ ಬಾಕಿದಾರನನ್ನಾಗಿ ಉಳಿಸುವಂತಹ ಸ್ಥಿತಿಯಿದೆ. ರೈತ ಬಹಳ ಮಾನಕ್ಕೆ ಭಯಪಡುತ್ತಾರೆ. ಸಾಲ ತೆಗೆದುಕೊಳ್ಳುವವರಲ್ಲಿ ಎರಡು ವಿಧವಾದ ಜನರಿದ್ದಾರೆ. ಅದರಲ್ಲಿ ಸಾಲ ತೆಗೆದುಕೊಳ್ಳುವಾಗಲೇ ಗಂಟು ಮುಳುಗಿಸಬೇಕು ಎಂದು ತೆಗೆದುಕೊಳ್ಳುವವರು ಒಂದು ವರ್ಗ, ಮತ್ತೊಂದು ವರ್ಗವೆಂದರೆ ಸಾಲ ತೆಗೆದುಕೊಳ್ಳುವಾಗ ನೀತಿ ನಿಜಾಯಿತಿಯಿಂದ ಸಾಲ ವಾಪಸ್ಸು ಕಟ್ಟಬೇಕು, ರೈತ ಮಾನಕ್ಕೆ ಹೆದರಿ ತಾನು ತೆಗೆದುಕೊಂಡ ಸಾಲವನ್ನು ಕಟ್ಟಬೇಕು, ತಾನು ಋಣಮುಕ್ತನಾಗಬೇಕೆಂಬ ಬಯಕೆ ಇರತಕ್ಕವನು. ಆತನು ಋಣ ಮುಕ್ತನಾಗಲು ಅವಕಾಶವಿದೆ. ನಲವತ್ತು ಸಾವಿರ ರೂ. ಸಾಲವನ್ನು ತೆಗೆದುಕೊಂಡು ಈಗಾಗಲೇ 62 ಸಾವಿರ ರೂ. ಸಾಲವನ್ನು ಕಟ್ಟಿರುತ್ತಾನೆ. ಕಾರಣಾಂತರಗಳಿಂದ ಯಾವತ್ತು ಸಮಯಕ್ಕೆ ಸರಿಯಾಗಿ ಕಟ್ಟಲಿಕ್ಕೆ ಸಾಧ್ಯವಾಗಿಲ್ಲ. ಆತನು ಕಟ್ಟಿದ ಹಣವೆಲ್ಲಾ ಬಡ್ಡಿಗೆ ಹೋಗಿದೆ. ನಾವು ಯಾವ ವೈಜ್ಞಾನಿಕವಾದಂತಹ ತಳಹದಿಯನ್ನು ಹಾಕಿಕೊಂಡು, ರೈತನು ಅಸಲು ಪಾವತಿಸಿದರೆ ಪೂರ್ಣ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳುತ್ತಿದ್ದೇವೆ. ಅದಕ್ಕೆ ಇವರು ಒಂದು ದಿನಾಂಕವನ್ನು ನಿಗದಿ ಮಾಡಿದ್ದಾರೆ. ತಾವು ದಯಮಾಡಿ ಯೋಚನೆ ಮಾಡಿ, ಆತನ ಶಕ್ತಿಗೆ ಮೀರಿದ ಕಾರಣಗಳಿಂದಾಗಿ ಆತನು ಎಲ್ಲಾ ಪ್ರಾಮಾಣಿಕ ಪ್ರಯತ್ನಗಳನ್ನು ಪಟ್ಟರೂ ಕೂಡ ಆತನು ಸಮಯಕ್ಕೆ ಸರಿಯಾಗಿ ಸಾಲ ಕಟ್ಟಲಿಕ್ಕೆ ಆಗುತ್ತಿಲ್ಲ. ಅವನು ತೆಗೆದುಕೊಂಡಿರುವ ಮೂಲ ಧನಕ್ಕಿಂತ ಒಂದು ಪಟ್ಟು, ಎರಡು, ಮೂರು ಪಟ್ಟು ಹಣ ಕಟ್ಟಿದ್ದಾನೆ. ಅದೆಲ್ಲಾ ಬಡ್ಡಿಗೆ ಹೋಗಿದೆ. ಆತನು ಮತ್ತೆ ಅಸಲು ಕಟ್ಟುವ ಪರಿಸ್ಥಿತಿಗೆ ಬಂದಿದೆ. ಈ ವಿಷಯದ ಕಡೆಗೆ ನೀವು ಗಮನಹರಿಸಿದರೆ, ಪಕ್ಷಭೇದ ಮರೆತು ನಾವು ನೀವೆಲ್ಲರೂ ಕೂಡ ಆ ವಿಚಾರದಲ್ಲಿ ಸ್ವಲ್ಪ ಸರ್ಕಾರದ ಗಮನವನ್ನು ಸೆಳೆಯಬೇಕು. ಇವರು ಅನೌನ್ಸ್ ಮಾಡಿರುವ ಯೋಜನೆಯನ್ನು ಮತ್ತಷ್ಟು ವಿಸ್ತೃತಗೊಳಿಸಿ, ಸಮಯವನ್ನೂ ಸಹ ವಿಸ್ತರಣೆ ಮಾಡಿದರೆ ನಾವೆಲ್ಲರೂ ಕೂಡ ಅವರ ಪ್ರತಿನಿಧಿಗಳಾಗಿ ಬಂದಿದ್ದಕ್ಕೆ ಅವರ ಋಣ ತೀರಿಸಿದ ಹಾಗೆ ಆಗುತ್ತದೆ. ಅನ್ಯಥಾ ಭಾವಿಸಬಾರದು. ತಾವೆಲ್ಲರೂ ಸಹಕರಿಸಬೇಕು. ಇತರೆ ವಿಚಾರಗಳು ಕೃಷಿ ಇಲಾಖೆಯ ಬೇಡಿಕೆಗಳು ನಮ್ಮ ಮುಂದಿವೆ. ತಾವೆಲ್ಲರೂ ಸಹಕರಿಸಬೇಕು. ಅಧ್ಯಕ್ಷ ಪೀಠವು ಇದಕ್ಕೆ ಸಹಕರಿಸಬೇಕು ಎಂದು ನಾನು ವಿನಂತಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಾರಂಭದಲ್ಲಿ ಮುಖ್ಯ ಮಂತ್ರಿಗಳು ಇದ್ದಂತಹ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಟ್ಟೆ, ನಮ್ಮ ರೈತ ಪ್ರಾಮಾಣಿಕವಾಗಿದ್ದಾನೆ. ಋಣಮುಕ್ತನಾಗಲು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುತ್ತಿದ್ದಾನೆ. ಇವತ್ತು ಈ ಸವಲತ್ತು ಘೋಷಣೆ ಮಾಡಿದ ಮೇಲೂ ಸಹ ಶೇಕಡ 30 ರಷ್ಟು ರೈತರು ಸಾಲದ ಅಸಲು ಮರುಪಾವತಿ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಈ ಪರಿಸ್ಥಿತಿ

ಉದ್ಭವವಾಗಿರುವ ಬಗ್ಗೆ ತಾವು ಒಂದು ತಜ್ಞರ ಸಮಿತಿಯನ್ನು ನೇಮಿಸಿ ಅವರಿಂದ ವರದಿ ತರಿಸಿಕೊಳ್ಳಬೇಕು. ರೈತನು ಮರ್ಯಾದೆ ಉಳಿಸಿಕೊಳ್ಳಲಿಕ್ಕೆ ಸಿದ್ಧನಿದ್ದಾನೆ. ಕೃಷಿ ಕಾರ್ಯದಲ್ಲಿ ತೊಡಗಿದ್ದಾನೆ. ಆದರೆ ಅವನು ಅಸಲು ಕಟ್ಟುವಂತಹ ಸ್ಥಿತಿಯಲ್ಲಿಲ್ಲ. ಬೇರೆ ಎಲ್ಲೂ ಅವನಿಗೆ ಸಾಲ ದೊರೆಯುತ್ತಿಲ್ಲ. ಮತ್ತೆ ಮನೆ ಮಠ ಮಾರುವ ಸ್ಥಿತಿಯಲ್ಲಿದ್ದಾನೆ. ಇಂತಹ ಧಾರುಣವಾದ ಪರಿಸ್ಥಿತಿಯ ಸಂದರ್ಭದಲ್ಲಿ ಒಂದು ಪರಿಹಾರವನ್ನು ಹುಡುಕುವಂತಹ ಪ್ರಯತ್ನವಾಗಬೇಕು. ಅಂದರೆ ಕೈಗೆ ಬೆಳೆ ಸಿಗಿದಿದ್ದಾಗ ಆತನು ಇನ್ನೊಂದು ಕಡೆ ಸಾಲ ತರುತ್ತಾನೆ. ನಿಮ್ಮಲ್ಲಿ ರೈತರ ಉದ್ಧಾರ ಮಾಡಬೇಕೆನ್ನುವ ಪ್ರಮಾಣಿಕತೆಯಿದ್ದರೆ ಒಂದು ಸಾರಿ ಈ ಅವಧಿಯನ್ನು ವಿಸ್ತರಣೆ ಮಾಡಬೇಕು. ಹೋದವರ್ಷ ಇದೆ ಪರಿಸ್ಥಿತಿಯಲ್ಲಿತ್ತು. 2004–2005 ಸಾಲಿಗೂ ಸಹ ಬಡ್ಡಿ ಮನ್ನಾ ಜಾರಿಗೆ ತರಬೇಕಾದುದ್ದು ನಿಮ್ಮ ಧರ್ಮ, ಒಂದು ಸಾರಿ ನಮ್ಮ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ರಾಜ್ಯದ ರೈತರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ನಿಮಗೆ ಬಿಡುವು ಇಲ್ಲ. ನಿಮ್ಮ ಯಾವುದೋ ಒಳಕಚ್ಚಾಟ, ಬಡಿದಾಟದಲ್ಲಿ ನಾವೆಲ್ಲ ತಲ್ಲಿನರಾಗಿದ್ದೇವೆ. ರೈತರನ್ನು ಮರೆತ್ತಿದ್ದೇವೆ. ಇವತ್ತು ಕೇಂದ್ರ ಸರ್ಕಾರ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಕೊಟ್ಟಿರುವ ಸಾಲದ ಬಾಕಿಯನ್ನು ಬರಗಾಲಕ್ಕೆ ತುತ್ತಾಗಿರುವ ರೈತನಿಂದ ವಸೂಲು ಮಾಡಲು ಅವನ ಕತ್ತನ್ನು ಹಿಚುಕುತ್ತಿದೆ, ಆತನು ಹೇಗೆ ಆ ಸಾಲವನ್ನು ಕಟ್ಟಬೇಕು. ಆತ ಹೇಗೆ ಬಡ್ಡಿಯನ್ನು ಕಟ್ಟಬೇಕು. ಮನೆ ಮಠ ಹರಾಜು ಮಾಡುವಂತಹ ಸ್ಥಿತಿಗೆ ಅವನು ಬಂದಿದ್ದಾನೆ. ಆದುದರಿಂದ ಈ ಸೌಲಭ್ಯವು ಆತನಿಗೂ ಸಿಗುವ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ಹಾಗಾಗಿ ಮೂರು ಪ್ರಮುಖ ಬೇಡಿಕೆಗಳನ್ನು ಇಟ್ಟಿದ್ದೇನೆ. ಉಪಾಧ್ಯಕ್ಷರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಒಂದು ಬಸ್ಸಿನಲ್ಲಿ ಬೆಂಗಳೂರಿನಿಂದ ಶಿವಮೊಗ್ಗ ಜಿಲ್ಲೆಯವರೆಗೂ ಎಡ ಬಲ ರಸ್ತೆಯಲ್ಲಿರುವ ಹೊಲಗಳ ಕಡೆಗೆ ನೋಡುತ್ತಾ ಪ್ರಯಾಣಿಸಿದರೆ ಅಲ್ಲಿ ಕಾಣುವುದು ನುಸಿರೋಗಕ್ಕೆ ತುತ್ತಾದ ತೆಂಗಿನ ಮರಗಳು, ಎರಡು ಮೂರು ಎಕರೆ ಜಮೀನು ಇದ್ದವನೇ ಶ್ರೀಮಂತ, ಅಲ್ಲಿಯೂ ಕೂಡ ಆತ ಸರ್ವನಾಶವಾಗಿದ್ದಾನೆ. ಇವತ್ತು ಅವನಿಗೆ ಬದುಕಲಿಕ್ಕೆ ಸಾಧ್ಯವಾಗುತ್ತಿಲ್ಲ, ಆ ಸ್ಥಳದಲ್ಲಿ ಬೇರೆ ಯಾವುದೇ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಿಲ್ಲವೆಂದು ನಿಮಗೂ ಸಹ ಗೊತ್ತಿದೆ. ಪ್ರಕೃತಿ ವಿಕೋಪದಿಂದ ಅವನ ಬೆಳೆ ನಾಶವಾಯಿತು. ಅವನ ನೆರವಿಗೆ ನಾವು ಹೋಗಿದ್ದೇವೆಯೇ? ಅದಕ್ಕೆ ಏನಾದರೂ ಪರಿಹಾರ ಕೊಡುವಂತಹ ಯೋಚನೆ ಇದೆಯೇ? ಯಾವುದೇ ಪ್ರಕೃತಿ ವಿಕೋಪದಿಂದ ಒಂದು ಬಣವೆ ಸುಟ್ಟರೆ ಇವತ್ತು 500 ರೂಪಾಯಿ ಪರಿಹಾರ ಕೊಡುತ್ತೇವೆ. ಆತನ ಬೆಳೆ ನಾಶವಾದರೆ ಅವನದೇನೂ ತಪ್ಪಿಲ್ಲ. ಯಾವುದೋ ಓಬಿರಾಯನ ಕಾಲದ ಕಾನೂನುಗಳನ್ನು ಮುಂದುವರೆಸಿಕೊಂಡು ರೈತನ ಕತ್ತನ್ನು ಹಿಚುಕುವಂಥ ಈ ಸಂದರ್ಭದಲ್ಲಿ ನಾನು ಚರ್ಚೆ ಮಾಡಲಿಕ್ಕೆ ಪ್ರಾರಂಭಮಾಡಿರುವುದು, ನೀವು ಆ ಅವಧಿಯನ್ನು

ವಿಸ್ತರಣೆ ಮಾಡುವುದಷ್ಟೆ ಅಲ್ಲ. ಇವತ್ತು ಕಾಫಿ, ತೆಂಗು, ಅಡಕೆ ಬೆಳೆಗಾರರು ಎಲ್ಲರೂ ಜಮೀನು ಬೇಡವೆಂದು ನಾಲ್ಕು ನಾಲ್ಕು ಕಾರುಗಳನ್ನು ಇಟ್ಟುಕೊಂಡು ಕಾಫಿ ಬೆಳೆಯುತ್ತಿದ್ದರೋ ಅಂತಹ ವ್ಯಕ್ತಿಗಳು ಅವರ 75–80 ಸಾವಿರ ಎಕರೆಗೆ ನಾಲ್ಕರಿಂದ ಐದು ಲಕ್ಷ ರೂಪಾಯಿ ಬೆಲೆ ಬಾಳುವ ಭೂಮಿಯನ್ನು ಮಾರಾಟ ಮಾಡುವಂತಹ ಸ್ಥಿತಿಗೆ ಬಂದಿದ್ದಾರೆ. ಇದಕ್ಕೆ ಈಗ ದೀರ್ಘವಾದಂಥ ಅಭ್ಯಾಸ, ಅಧ್ಯಯನ ಮಾಡಿ ಅವನ ನೆರವಿಗೆ ಬರುವಂತಹುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅದಕ್ಕಾಗಿ ಅವರ ಪ್ರತಿನಿಧಿಯಾಗಿ ನಾವು ಇಲ್ಲಿ ಚರ್ಚಿಸಲು ಬಂದಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) :– ಕಾಫಿ ಬೆಳೆಗಾರರಿಗೆ ನಾವು ರಿಲೀಫ್ ಎಕ್ಸ್‌ಟೆಂಡ್ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಇದ್ಯಾವುದೂ ಸಹ ರೈತರನ್ನು ಉಳಿಸಲಿಕ್ಕೆ ಸಾಧ್ಯವಿಲ್ಲ. ಏನೋ ಒಂದಿಷ್ಟು ಉಪಶಮನ ಮಾಡಬಹುದೇ ಹೊರತು, ತಾತ್ಕಾಲಿಕವಾದ ಒಂದು ನೆರವು ಸಿಕ್ಕಿತು ಎಂದು ಅವನು ಸಮಾಧಾನ ಪಡಬೇಕೇ ಹೊರತು ಬೇರೇನೂ ಇಲ್ಲ. ಇದಕ್ಕಾಗಿ ನಾನು ಸರ್ಕಾರದಲ್ಲಿ ಒತ್ತಾಯಿಸುತ್ತಿದ್ದೇನೆ. ಇವೆಲ್ಲದರ ಬಗ್ಗೆ ಸಮಗ್ರವಾದ ಒಂದು ಚಿಂತನೆ ಮಾಡುವುದು ಅಗತ್ಯ. ನನ್ನ ಪ್ರಮುಖವಾದ ಬೇಡಿಕೆಯಿಷ್ಟೆ. ಬೇರೆ ನಮ್ಮ ಸದಸ್ಯರು ಮಾತನಾಡಲಿ, ಇಲ್ಲಿ ಮಾನ್ಯ ದೇಶಪಾಂಡೆಯವರು, ರಮೇಶ್ ಕುಮಾರ್ ಅವರೂ ಸಹ ಇದ್ದಾರೆ. ನಾವು ಇವತ್ತು ಸುದೀರ್ಘವಾದ ಅಧಿವೇಶನವನ್ನು ಮಾಡುತ್ತಿದ್ದೇವೆ. ಒಂದೆರಡು ದಿವಸ ರಾಜಕಾರಣವನ್ನು ಎಲ್ಲಾ ಬದಿಗೊತ್ತಿ ಯಾವ ಈ ದೇಶದ ಪ್ರಧಾನಿ ಮೊನ್ನೆ ಪ್ರಮುಖವಾದ ಸಭೆಯಲ್ಲಿ ಇಡೀ ದೇಶದ ಮುಖ್ಯಮಂತ್ರಿಗಳನ್ನು ಕರೆಯಿಸಿ ಕೃಷಿಕನ ಹಿನ್ನಡೆಯಾಗುತ್ತಿದೆ. ಇದನ್ನು ನೀವು ಗಂಭೀರವಾಗಿ ಚಿಂತನೆ ಮಾಡಬೇಕು. ಗ್ರಾಮೀಣ ಅಭಿವೃದ್ಧಿಗೆ ಧಕ್ಕೆಯಾಗುತ್ತಿದೆಯೆಂದು ಹೇಳಿದ ಮೇಲೆ ಕೇಂದ್ರ ಸರ್ಕಾರಕ್ಕೆ ಈ ಸಂಗತಿ ಗೊತ್ತಾದ ಮೇಲೆ ಅವರು ಎಲ್ಲಾ ರೀತಿಯ ನೆರವನ್ನು ಕೊಡಲಿಕ್ಕೆ ಮಾನಸಿಕವಾಗಿ ಸಿದ್ಧವಿರುವ ಸಂದರ್ಭದಲ್ಲಿ ನಾವು ಒಂದೆರಡು ದಿನ ಚರ್ಚೆ ಮಾಡಿ ಕೆಲವೊಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. ಅನಾವಶ್ಯಕವಾದ ರಾಜಕಾರಣದ ಚರ್ಚೆಗಳನ್ನು ಮಾಡದೆ ನೂರಕ್ಕೆ ಎಪ್ಪತ್ತು ಜನ ವಾಸ ಮಾಡುವಂತಹ ರೈತ ಸಮೂಹಕ್ಕೆ ಪಕ್ಷಭೇದ ಮರೆತು ಅವನಿಗೆ ಪರಿಹಾರ ಹುಡುಕುವಂತಹ ಪ್ರಾಮಾಣಿಕ ಪ್ರಯತ್ನ ಮಾಡಿ, ಚಿಂತನೆ ಮಾಡಿ ಇದರ ಬಗ್ಗೆ ಯೋಚಿಸದಿದ್ದರೆ ಏನು ಪ್ರಯೋಜನ. ಈ ಪ್ರಯತ್ನ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಏನು ಆಗಬೇಕು ಅದಕ್ಕೆ ಟಾಪ್ ಪ್ರಯಾರಿಟಿ ಯಾವುದಕ್ಕೆ ಕೊಡಬೇಕು. ಉದಾಹರಣೆಗೆ ದಾವಣಗೆರೆ, ಚಿತ್ರದುರ್ಗದಲ್ಲಿ ಜಾನುವಾರುಗಳು ವಾಪಸ್ಸು ಬಂದು ಅದೇ ಬೋರ್ ವೆಲ್ ನೀರು ಕುಡಿಯುವ ಪರಿಸ್ಥಿತಿ ಇದೆ. ಆತ ಇನ್ನೂ ಭೂಮಿಯನ್ನು ಬಿತ್ತನೆಗೆ ಹದ

ಮಾಡಿಲ್ಲ. ನೀವೆ ವಾಲಂಟರಿಯಾಗಿ ನಿನ್ನೆ ಮೊನ್ನೆ ಈ ಅವಧಿಯನ್ನು ವಿಸ್ತರಿಸಬೇಕಿತ್ತು. ಕೊನೆ ನಿಮಿಷದವರೆಗೆ ಏಕೆ ಕಾಯುತ್ತೇವೆ. ಯಾರಿಗೆ ಶಕ್ತಿಯಿದೆಯೋ ಅವರು ಸಾಲ ಕಟ್ಟಲಿ ಎಂದು ನೀವು ಕಾದಿರುತ್ತೀರಿ. ಅದನ್ನು ನೀವು ಇಲ್ಲಿ ನಾವೆಲ್ಲಾ ಬರುವ ಮುಂಚೆಯೇ ಈ ಅವಧಿ ವಿಸ್ತರಣೆ ಬಗ್ಗೆ ಹೇಳಬಹುದ್ದಿತ್ತು. ಆಗ ಚರ್ಚೆಯನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳಬಹುದಾಗಿತ್ತು. ನೀವು ಈಗ ಮೂರು ತಿಂಗಳು ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಮಾರ್ಚ್ ಕೊನೆಯವರೆಗೂ ವಿಸ್ತರಣೆ ಮಾಡಿದ್ದೇವೆಂದರೆ ಇದರಿಂದ ರೈತನಿಗೆ ಏನೂ ಆಗುವುದಿಲ್ಲ. ಈ ಚರ್ಚೆಯನ್ನು ಪ್ರಾರಂಭ ಮಾಡಿದಂಥ ಉದ್ದೇಶ ನಾವೆಲ್ಲಾ ಪ್ರತಿಪಕ್ಷದ ಶಾಸಕರೆಲ್ಲಾ ಕುಳಿತುಕೊಂಡು ಈ ರೈತ ಸಮೂಹಕ್ಕೆ ಇಂತಹ ಒಂದು ಧಾರುಣ ಸಮಯದಲ್ಲಿ ನಾಲ್ಕು ವರ್ಷ ಬರಗಾಲಕ್ಕೆ ತುತ್ತಾಗಿ ಇನ್ನೊಂದು ಬರಗಾಲಕ್ಕೆ ಹೆಜ್ಜೆ ಇಡುತ್ತಿರುವಂತಹ ಈ ಸಂದರ್ಭದಲ್ಲಿ ಶಾಶ್ವತವಾಗಿ ನಾವು ಇದಕ್ಕೆ ಪರಿಹಾರ ಹುಡುಕುವುದಕ್ಕೆ ಏನಾದರೂ ಸಾಧ್ಯವೇ? ಆ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದು ಎಲ್ಲಾ ರೈತನಿಗೂ ಅದು ಅಲ್ಪಾವಧಿ ಸಾಲ ಇರಬಹುದು. ದೀರ್ಘಾವಧಿ ಸಾಲ ಇರಬಹುದು. ವ್ಯತ್ಯಾಸ ಏನು ಇಲ್ಲ. ಆದ್ದರಿಂದ ನನ್ನ ಒತ್ತಾಯ ಇಷ್ಟೆ ಸನ್ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಈ ಅವಧಿಯನ್ನು ಇದೇ ದಿನ ಮುಂದಿನ ಮಾರ್ಚ್ ಕೊನೆಯವರೆಗೆ...

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನಾನು ತಮಗೆ ಸಹಾಯ ಮಾಡುವುದಕ್ಕೆ ಹೇಳುತ್ತಿದ್ದೇನೆ. ಈ ಎರಡು ದಿವಸದ ಚರ್ಚೆ ಮಾಡುವಾಗ ಕೆ.ಎಸ್.ಎಫ್.ಸಿಯಲ್ಲಿ ಸಾಲ ತೆಗೆದುಕೊಂಡು ಬಾಕಿ ಹಾಗೇ ಉಳಿಸಿಕೊಂಡು ಬ್ಯಾಡ್ ಡೆಟ್ಸ್ ಎಂದು ಹೊಡೆದು ಹಾಕಿರತಕ್ಕಂಥದ್ದು, ಕೆ.ಎಸ್.ಐ.ಐ.ಡಿ.ಸಿಯಲ್ಲಿ ತೆಗೆದುಕೊಂಡಿರತಕ್ಕಂಥಾದ್ದು, ಐ.ಡಿ.ಬಿ.ಐಯಲ್ಲಿ ತೆಗೆದುಕೊಂಡಿರತಕ್ಕಂಥಾದ್ದು ಇನ್ನೂ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಯಾರು ಕೋಟಿಗಟ್ಟಲೆ ಹಣ ತೆಗೆದುಕೊಂಡಿದ್ದಾರೆ ಆ ಹಣ ಯಾವುದು ಉಳಿದಿದೆ ಬಾಕಿ, ಆ ಬಾಕಿಯನ್ನು ವಸೂಲಿ ಮಾಡುವುದಕ್ಕೆ ಆಗದೇ ಇರತಕ್ಕಂಥಾದ್ದು ಅದು ಎಷ್ಟು? ಎಷ್ಟು ಕುಟುಂಬಗಳಿಗೆ ಸಂಬಂಧಪಟ್ಟಿದ್ದು? ಈ ರಾಜ್ಯದಲ್ಲಿ ರೈತ ತೆಗೆದುಕೊಂಡ ಹಣ ಎಷ್ಟು? ಅವನ ಎಲ್ಲಾ ಪ್ರಯತ್ನಪಟ್ಟರೂ ಕಟ್ಟುವುದಕ್ಕೆ ಆಗದೇ ಉಳಿದಿರತಕ್ಕ ಬಾಕಿ ಎಷ್ಟು ? ಅವನ ಕುಟುಂಬಗಳು ಎಷ್ಟು? ಎಲ್ಲಾ ಗೊತ್ತಾಗಲಿ ಇಲ್ಲಿ, ಹೌದೋ ಅಲ್ಲವೋ? ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ ಬೇರೆ ಬೇರೆ ವಾಣಿಜ್ಯ ಸಂಸ್ಥೆಗಳಿಂದ ಎಲ್ಲಿಲ್ಲಿ ದೊಡ್ಡ ಪ್ರಮಾಣದಲ್ಲಿ ಸಾವಿರಾರು ಕೋಟಿ ತೆಗೆದುಕೊಂಡಿದ್ದಾರೆ. ಯಾರು ಇವತ್ತು ವಸೂಲು ಮಾಡುವುದಕ್ಕೆ ಕೈಗೇ ಸಿಗುತ್ತಿಲ್ಲ. ಎಷ್ಟೆಲ್ಲಾ ಪಂಗನಾಮ ಹಾಕಿ, ಪ್ರತಿಷ್ಠಿತರು ಎಂದು ಹೇಳಿ, ಎಲ್ಲಾ ಸಮಾಜದಲ್ಲಿ ದೊಡ್ಡ ಮನುಷ್ಯರು ಎಂದು ಹೇಳಿ ತಿರುಗುತ್ತಿದ್ದಾರೆ. ಅವರು ಒಂದು ಕಡೆಗೆ, ತೆಗೆದುಕೊಂಡು ಮೂರು ಕಾಸಿಗೆ ಆರು ಕಾಸಿಗೆ ತಮ್ಮ ಎಲ್ಲಾ ಪ್ರಾಣ ಬಿಟ್ಟರೂ ಕೂಡ ಕಟ್ಟುವುದಕ್ಕೆ ಆಗದೆ

ಮಾನಕ್ಕೆ ಹೆದರಿ ಭಯ ಪಟ್ಟುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತ ಒಂದು ಕಡೆಗೆ ಈ ಎರಡು ಚಿತ್ರ ಬರಲಿ, ಎಲ್ಲಾ ಫಿಗರ್ಸ್ ಬರಲಿ ಸದನದಲ್ಲಿ ತಾವು ಹೇಳಿದಂತೆ ಎರಡು ದಿವಸ ವಿಶೇಷವಾಗಿ ಅದನ್ನೇ ಚರ್ಚೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವೆಲ್ಲಾ ನೋಡಿರುತ್ತೀರಿ, ನಾನು ಮೊನ್ನೆ ಬರಬೇಕಾದರೆ ನೋಡಿದೆ. ಔಟ್ ಲುಕ್‌ನಲ್ಲಿ ಜುಲೈ 2005 "The Death of the Indian Farmer ಅಂತ ಬರೆದರು Trapped in a vicious cycle of crop failure, high debt and penury, the Indian farmer's future is an endless night" ಅಂತ ಬರೆಯುತ್ತಾನೆ. ಬರೆಯುತ್ತಾ ಅಲ್ಲಿಯ ಕೆಲವು ಎಕ್ಸ್‌ಪರ್ಟ್ಸ್ ಈ ದೇಶದ ಅನೇಕ ಭಾಗಗಳಿಗೆ ಬಂದು ರೈತನ ಪರಿಸ್ಥಿತಿಗಳೇನಿದೆ ಎನ್ನುವುದನ್ನು ತಿಳಿದುಕೊಳ್ಳುವಂಥ ಪ್ರಯತ್ನ ಮಾಡಿದ್ದಾರೆ. ಆ ರೀತಿ ಪ್ರಯತ್ನ ಮಾಡಿದಾಗ, ನಮ್ಮ ಮೈಸೂರು ಜಿಲ್ಲೆಯಲ್ಲಿ ಬೇರೆ ಎಲ್ಲೂ ಇಲ್ಲ. ಮೈಸೂರು ಜಿಲ್ಲೆಯಲ್ಲಿ ಕೆಂಚಕುಪ್ಪೆ ಎಂದು ಮೈಸೂರಿಗೆ ಹೋಗುವ ರಸ್ತೆಯಲ್ಲಿದೆ. ಅವನ ಹೆಸರು ಸಿದ್ದರಾಮಯ್ಯ ಎಂದು ಆ ಎಕ್ಸ್‌ಪರ್ಟ್ ಬಂದು ಅವನನ್ನು ಇಂಟರ್‌ವ್ಯೂ ಮಾಡಿದ್ದಾರೆ. ಅವನು ಹೇಳುತ್ತಾನೆ, ನನ್ನ ಹತ್ತಿರ ಆರು ಎಕರೆ ಹೊಲ ಇದೆ, ನಾನು ಏನು ಇನ್ವೆಸ್ಟ್ ಮಾಡಿದ್ದೇನೆ. ಅದರಲ್ಲಿ 25 ಪರ್ಸೆಂಟ್ ಸಹ ನನ್ನ ಕೈಗೆ ಬಂದಿಲ್ಲ ಎಂದು He says, 45 years old Siddaramaiah, who owns 6 acres of land in Kenchikuppe village on the way to Mysore, I invest Rs. 20,000 but recover only Rs. 12,000. This Rs. 8000 is a recurring debt. When it becomes too big, we sell a bit of land The Banks have become very strict. We have to plead with the local MLA of Zilla/Taluk Panchayat President and the Politician ಎಂದು ಅವನು ಹೇಳುತ್ತಾನೆ. ನನ್ನ ಹತ್ತಿರ ಜಮೀನು ಇದೆ, ನಾನು ಇಪ್ಪತ್ತು ಸಾವಿರ ಇನ್‌ವೆಸ್ಟ್ ಮಾಡಿದ್ದೆ ಬಂದದ್ದು ಹನ್ನೆರಡು ಸಾವಿರ, ಎಂಟು ಸಾವಿರ ಲಾಸ್ ಆಯಿತು, ನನ್ನ ಪೀಸ್ ಆಫ್ ಲ್ಯಾಂಡನ್ನು ಮಾರಾಟ ಮಾಡಿದೆ. ಈ ಕೃಷಿ ಇನ್ನು ನಮಗೆ ಸಾಧ್ಯವಿಲ್ಲ. ಇದು ಎಕ್ಸ್‌ಪರ್ಟ್ಸ್ ಬಂದು ಇಡೀ ದೇಶದಲ್ಲಿ ಎಲ್ಲರನ್ನೂ ಸಮೀಕ್ಷೆ ಮಾಡಿ ಕರ್ನಾಟಕದ ಬಗ್ಗೆ ಬಂದಿರುವಂಥ ವರದಿಯನ್ನು ನಾನು ಹೇಳಿದ್ದೇನೆ. ಅದಕ್ಕೇ ನಾನು ಪ್ರಾರಂಭದಲ್ಲಿ ಹೇಳಿದಂಥದ್ದು ತಾತ್ಕಾಲಿಕವಾಗಿ ಅವರಿಗೆ ಏನೋ ಒಂದು ಪರಿಹಾರವನ್ನು ಕೊಟ್ಟು ಉಳಿಸುತ್ತೇನೆಂದರೆ ಆಗುವುದಿಲ್ಲ. ಸಮಗ್ರವಾಗಿ ಚಿಂತನೆ ಮಾಡಿ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕೃಷಿ ಇವತ್ತು ಸ್ಟೇಟ್ ಸಬ್ಜೆಕ್ಟ್ ಎಂದು ನಾವು ಹೇಳಿದರೂ ಸಹ ಇವತ್ತು ಕೇಂದ್ರ ಸರ್ಕಾರದ ಸಹಾಯವಿಲ್ಲದೆಯೇ ನಾವು ಯಾವುದೇ ಈ ಸಮಸ್ಯೆಯನ್ನು ಬಗೆಹರಿಸಲು ಆಗುವುದಿಲ್ಲ. ಇದಕ್ಕೆ ಗಂಭೀರವಾದಂಥ

ಚಿಂತನೆಯಾಗಬೇಕೆಂದು ನಾನು ನನ್ನ ಭಾಷಣವನ್ನು ಪ್ರಾರಂಭ ಮಾಡಿದೆ. ಅದಕ್ಕಾಗಿ ನಾನು ಇವತ್ತು ಸರ್ಕಾರಕ್ಕೆ ಇಷ್ಟೇ ಒತ್ತಾಯ ಮಾಡುವಂಥದ್ದು ದಯಮಾಡಿ ನಾವೇನು ಇವತ್ತು ಆ ಕಡೆ ಈ ಕಡೆ ಆಡಳಿತ ಪಕ್ಷ ವಿರೋಧ ಪಕ್ಷವೆಂದು ಭೇಧ ಭಾವವನ್ನು ಇಟ್ಟುಕೊಳ್ಳದೇನೇ ರೈತ ಸಮೂಹಕ್ಕೆ ನೆರವು ಸಿಗಬೇಕೆಂದು ನಾವೇನು ಹೇಳುತ್ತಿದ್ದೇವೆ ಇವತ್ತು 31.3.2004ಕ್ಕೆ ಶೇಕಡ 30 ಪರ್‌ಸೆಂಟ್ ಮಾತ್ರ ರೈತರು ಸಾಲ ಅಸಲು ಮರುಪಾವತಿ ಮಾಡಿದ್ದಾರೆ. ಆದ್ದರಿಂದ ಅವನಿಗೆ ಆ ಶಕ್ತಿ ಇಲ್ಲ ಇದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಇದ್ದರೂ, ಮಧ್ಯದಲ್ಲಿ ಎರಡು ಇಲ್ಲವೆ ಮೂರು ತಿಂಗಳು ಎಂದು ಅವಧಿ ಕೊಟ್ಟರೆ ಅವನು ಕೃಷಿ ಕಾರ್ಯದಲ್ಲಿ ತೊಡಗಿರಬೇಕಾದರೆ ಅವನು ದುಡ್ಡನ್ನು ಕಟ್ಟುವುದಿಲ್ಲ. ಸಾಯೋಣ ಬಿಡಪ್ಪಾ ನನಗಂತೂ ದುಡ್ಡಿಲ್ಲ. ಏನೋ ಕೃಷಿ ಕೆಲಸದಲ್ಲಿ ತಲ್ಲೀನನಾಗಿರೋಣವೆಂದು ಅವನು ಯೋಚನೆ ಮಾಡುತ್ತಾನೆ. ಇಂಥ ಸಮಯದಲ್ಲಿ ಮುಂದಿನ ಮಾರ್ಚ್ ಕೊನೆಯವರೆಗೆ ಅವನ ಬೆಳೆ ಬಂದು ಅಸಲು ಕಟ್ಟಲು ಅವಕಾಶ ಮಾಡಿಕೊಡುವವರೆಗೆ ಈ ಅವಧಿಯನ್ನು ವಿಸ್ತರಣೆ ಮಾಡಬೇಕು. ಇದು ಮೊದಲನೆಯದು, 01–04–2004 ರಿಂದ 31–03–2005 ರವರೆಗೆ. ಅದೇ ಪರಿಸ್ಥಿತಿ ರೈತನದ್ದು, ಅದಕ್ಕೆ ನೀವೇನೂ ಕನ್ಸೇಷನ್ ಅನೌನ್ಸ್ ಮಾಡಿಲ್ಲ. ಅವನಿಗೂ ಸಹ ಈ ಬಡ್ಡಿ ಮನ್ನಾ ಯೋಜನೆಯನ್ನು ಜಾರಿಗೆ ತಂದು ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು. ರಾಷ್ಟ್ರೀಕೃತ ಬ್ಯಾಂಕುಗಳಿಂದ ಶೇಕಡ 30 ರಿಂದ 35 ಜನ ನಮ್ಮ ರೈತರ ಸಾಲ ಪಡೆದಿರುವುದರಿಂದ ಅಲ್ಲೂ ಸಹ ಅವನು ಬೀದಿ ಪಾಲಾಗಿದ್ದಾನೆ. ಹೇಗೋ ಬೇರೆ ಕಡೆ ಅವನು ಸಾಹುಕಾರಿ ಸಾಲ ತಂದರೆ ಕೈಮುಗಿದು ವಿನಂತಿ ಮಾಡಬಹುದು. ಇಲ್ಲಿ ಏನೂ ಇಲ್ಲ. ರಾಷ್ಟ್ರೀಕೃತ ಬ್ಯಾಂಕ್‌ನವರು ಅವನ ಮುಖವನ್ನು ಎತ್ತಿ ನೋಡಲು ಸಿದ್ಧರಿಲ್ಲ. ಆ ರೀತಿ ಕಿರುಕುಳ ಇರುವಂಥ ಈ ಸಂದರ್ಭದಲ್ಲಿ ದಯಮಾಡಿ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತನ್ನಿ. ಅವನ ಸಾಲದ ಮೇಲಿರುವ ಬಡ್ಡಿಯನ್ನು ಸಂಪೂರ್ಣ ಮನ್ನಾ ಮಾಡುವುದರ ಕಡೆ ನೀವು ಭರವಸೆಯನ್ನು ಕೊಡಬೇಕು. ರಾಜ್ಯದ ರೈತರಿಗೆ ನಾವು ಇದ್ದೇವೆ ನಿಮ್ಮ ಪರವಾಗಿ, ಆಕಸ್ಮಾತ್ ಕೇಂದ್ರ ಸರ್ಕಾರ ಭರಿಸದಿದ್ದರೆ ನಾವು ಬೇಕಾದರೆ ಭರಿಸುತ್ತೇವೆ. ಕೇಂದ್ರ ಸರ್ಕಾರವನ್ನು ನಾವು ಕನ್‌ವಿನ್ಸ್ ಮಾಡುತ್ತೇವೆ ಎಂದು ಈ ಮಾತನ್ನು ತಾವು ಹೇಳಬೇಕು. ಯಾರು ಪ್ರಾಮಾಣಿಕವಾಗಿ ಸಹಕಾರಿ ಸಂಘದ ಸಾಲವನ್ನು ಕಟ್ಟಿದ್ದಾನೋ, ಬಡ್ಡಿ ಕಟ್ಟಿದ್ದಾನೋ ಆ ಬಡ್ಡಿಯನ್ನು ವಾಪಸ್ ಕೊಡಬೇಕು. ಕೊನೆಯದಾಗಿ ನಾಳೆಯಿಂದಲೇ ಇದು ಎಫೆಕ್ಟ್ ಆಗುವ ರೀತಿ ರೈತನ ಪಂಪ್‌ಸೆಟ್‌ಗಳ ಮೇಲೆ ಇವತ್ತೇನು ಶೇಕಡ 24 ಪರ್‌ಸೆಂಟ್ ಬಡ್ಡಿ ಹಾಗಿ ಅವನು ಕಂತು ಕಟ್ಟಿದರೆನೇ ಬಡ್ಡಿ ಚಕ್ರಬಡ್ಡಿ ಎಲ್ಲಾ ಸೇರಿಸಿ ಬಡ್ಡಿ ಹಾಕುವಂಥ ಒಂದು ಮಾನವೀಯತೆ ವಿರುದ್ಧವಾಗಿ, ರೈತರನ್ನು ಉದ್ಧಾರ ಮಾಡುತ್ತೇವೆಂದು ಅವನನ್ನು ಶೋಷಣೆ ಮಾಡುವಂಥ ನೀತಿಯನ್ನೇನು

ಕೆ.ಪಿ.ಟಿ.ಸಿ.ಎಲ್. ಅನುಸರಿಸುತ್ತಿದೆ. ತತ್ ಕ್ಷಣ ಅದನ್ನು ನಿಲ್ಲಿಸಿ ಅವನು ವರ್ಷಕ್ಕೆ ಒಮ್ಮೆ ಹಣ ಪಾವತಿ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ನಾಶನು ಮತ್ತೊಮ್ಮೆ ಬಹಳ ವಿನಯದಿಂದ ಸರ್ಕಾರಕ್ಕೆ ಒತ್ತಾಯ ಮಾಡಲು ಇಚ್ಛೆ ಪಡುತ್ತೇನೆ. ಯಾವುದಾದರೂ ಒಂದು ಕಾರಣಕ್ಕೆ ಈ ಬೇಡಿಕೆಯನ್ನು ಈಡೇರಿಸಲು ಮೀನಾ ಮೇಷ ಮಾಡದೆ, ಚೌಕಾಸಿ ಮಾಡದೆ ಅದು ಮಾಡುತ್ತೇವೆ. ಇದು ಆಗುವುದಿಲ್ಲ. ಅದು ಹೇಗೆ ಸಾಧ್ಯವಾಗುತ್ತದೆ ಎಂದು ಹೇಳದೆ ರೈತನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ನೀವು ಚರ್ಚೆ ಮಾಡಿ ನಾವು ಕೇಳಿರುವಂಥ ನ್ಯಾಯವಾದ ಈ ಬೇಡಿಕೆಗಳನ್ನು ಈಡೇರಿಸುವಂಥದ್ದರ ಕಡೆ ನೀವು ವಿಶೇಷವಾದ ಗಮನವನ್ನು ಕೊಡಬೇಕು, ಬಹುಶಃ ಅದು ಆಗಲಿಲ್ಲವೆಂದರೆ ರೈತ ಸಮೂಹ ನಮ್ಮನ್ನೂ ಕ್ಷಮಿಸುವುದಿಲ್ಲ. ನಾವೂ ಪ್ರತಿಪಕ್ಷದಲ್ಲಿ ಕುಳಿತು ಇಲ್ಲಿ ಕೆಲಸ ಮಾಡಲು ಸಾಧ್ಯವಾಗದೆ ಇರುವಂಥ ಉಸಿರುಕಟ್ಟುವಂಥ ಒಂದು ಪರಿಸ್ಥಿತಿ ಬರುತ್ತದೆ. ಇವತ್ತು ಏನಾಗಿದೆ, ಒಂದು ರೀತಿ ಏಕಪಾತ್ರ ಅಭಿನಯ, ನಾನು ನೊಂದು ಕೊನೆಗೆ ಒಂದು ಮಾತನ್ನು ಹೇಳಲು ಇಚ್ಛೆಪಡುತ್ತೇನೆ. ಸನ್ಮಾನ್ಯ ದೇವೇಗೌಡರು ರೈತರ ಪರವಾಗಿ ಹೋರಾಟ ಮಾಡುವಂಥ ವ್ಯಕ್ತಿ ಎಂದು ಅವರ ಬಗ್ಗೆ ನನಗೆ ಗೌರವವಿದೆ, ಮಾಜಿ ಪ್ರಧಾನಿ ಅವರು, ಅವರು ಏನು ಹೇಳಿದರು, ಬಹಳ ಗಂಭೀರವಾಗಿ ಈ ಸದನದಲ್ಲಿರುವ 224 ಜನರೂ ಚಿಂತನೆ ಮಾಡಬೇಕಾಗಿರುವಂಥ ಸಂದರ್ಭ ಇದು, ಅವರು ಹೇಳಿದ್ದಾರೆ, ದರಿದ್ರನಾರಾಯಣ ಸಮಾವೇಶದಲ್ಲಿ 45 ಸಾವಿರ ಎಕರೆ ಭೂ ಕಬಳಿಕೆಯಾಗಿದೆ. ಹದಿನಾರೂವರೆ ಸಾವಿರ ಕೋಟಿ ರೂ ಸರ್ಕಾರದ ಬೊಕ್ಕಸಕ್ಕೆ ಬರುವ ಹಣ ಬಂದಿಲ್ಲ. ನನಗೆ ಅವಕಾಶ ಸಿಕ್ಕಿದರೆ ಈ ಹಣವನ್ನು ಸರ್ಕಾರದ ಬೊಕ್ಕಸಕ್ಕೆ ತುಂಬಿ ಈ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುತ್ತೇನೆ ಎಂದು ಹೇಳಿದಂಥ ಮಾತು ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಎಲ್ಲಾ ಕಡೆ ಬಂದಿದೆ. ಅಂದರೆ ಇವತ್ತು ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದಕ್ಕೆ ಯಾರೋ ಹಿಡಿಯಷ್ಟು ಜನ ಸರ್ಕಾರದ ಖಜಾನೆಯನ್ನು ಲೂಟಿ ಮಾಡುವಂಥ ಹಗಲು ದರೋಡೆಗೆ ಇದೊಂದು ನಿದರ್ಶನ ಅಷ್ಟೆ. ಬಳ್ಳಾರಿಯಲ್ಲಿ ಮ್ಯಾಂಗನೀಸ್ ಕದ್ದು ಹೋಗುತ್ತಿದೆಯಲ್ಲಾ ಕಾನೂನು ಬಾಹಿರವಾಗಿ ಸಾಗಾಣಿಕೆಯಾಗುತ್ತಿದೆಯಲ್ಲಾ ಅದನ್ನು ತಡೆದರೆ ಈ ರಾಜ್ಯದ ರೈತನ ಸಾಲ ಮನ್ನಾ ಮಾಡಲು ಬೇಕಾದಂಥ ವ್ಯವಸ್ಥೆಯನ್ನು ಎರಡು ಮೂರು ವರ್ಷದಲ್ಲಿ ಮಾಡಬಹುದು. ಒಂದು ಕಡೆ ಲೂಟಿ ನಡೆಯುತ್ತಿದೆ. ಇನ್ನೊಂದು ಕಡೆ ರೈತರ ರಕ್ಷಣೆಗೆ ಬರುವುದಕ್ಕೆ ನಮ್ಮ ಹತ್ತಿರ ಹಣ ಇಲ್ಲವೆಂದು ಕೈಎತ್ತಿಕೊಂಡು ನಾವು ನಿಂತಿದ್ದೇವೆ. ಇದು ಆಗುವುದಿಲ್ಲ. ಅದಕ್ಕೋಸ್ಕರ ನಾನು ಒತ್ತಾಯ ಮಾಡುತ್ತಿರುವಂಥದ್ದು, ಈ ನ್ಯಾಯಬದ್ಧವಾದ ಬೇಡಿಕೆಯನ್ನು ಈಡೇರಿಸುವುದಕ್ಕೋಸ್ಕರ ನೀವು ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳಿ, ಬೇಕಾದರೆ

ಕೆಲವು ಕಾರ್ಯಕ್ರಮಗಳನ್ನು ಬದಿಗೊತ್ತಿ. ನಾಲ್ಕು ತಿಂಗಳಾಯಿತು. ಬಜೆಟ್‌ನ್ನು ಮಧ್ಯದಲ್ಲಿ ಪಾಸ್ ಮಾಡಿಕೊಂಡು, ಅಭಿವೃದ್ಧಿ ಕಾರ್ಯಕ್ಕೆ ಗಮನ ಕೊಟ್ಟಿದ್ದೀರಾ? ಸರ್ಕಾರಿ ನೌಕರರಿಗೆ ಸಂಬಳ ಮತ್ತು ವರ್ಗಾವಣೆ ಬಿಟ್ಟರೆ ಇನ್ನೇನಾದರೂ ನೀವು ಮಾಡಿದ್ದೀರಾ? ಇವತ್ತು ರಾಜಕಾರಣ ಮಾಡಬಾರದು, ಆ ದಕ್ಕಿನಲ್ಲಿ ಪ್ರಾಮಾಣಿಕವಾಗಿ ನಮ್ಮ ಬೇಡಿಕೆಗಳು ಈಡೇರಬಹುದು ಎಂದು ರಾಜ್ಯದ ರೈತ ಇವತ್ತು ಏನು ಚರ್ಚೆಯಾಗುತ್ತಿದೆ ನಾಳೆ ನಮಗೆ ಯಾವ ರೀತಿಯ ನೆರವು ಸಿಗಬಹುದು ಎಂದು ಕಾತುರತೆಯಿಂದ ಬೆಂಗಳೂರಿನ ಕಡೆ ವಿಧಾನಸೌಧದ ಕಡೆ ನೋಡುತ್ತಿದ್ದಾನೆ. ಇಂಥ ಸಂದರ್ಭದಲ್ಲಿ ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಈ ನ್ಯಾಯಯುತವಾದಂಥ ಬೇಡಿಕೆಯನ್ನು ರಾಜ್ಯದ ರೈತರ ಹಿತವನ್ನು ಗಮನಿಸಿ ಈಡೇರಿಸಬೇಕು. ಇವತ್ತು ನೀವೇನು ನಮ್ಮ ಜನತಾದಳ ಪರಿವಾರದ ಶಾಸಕರು ಬಹಳಷ್ಟು ಜನರು ಇಲ್ಲಿ ಇದ್ದಿದ್ದರೆ ದೇವೇಗೌಡರಿಗೆ ಸಂಬಂಧಪಟ್ಟಂತ ಶಾಸಕರು ಅನೇಕ ವಿಷಯಗಳನ್ನು ನಾವು ಹೇಳಬಹುದಿತ್ತು. ಅವರು ಬೇರೆ ಮೀಟಿಂಗನ್ನು ಮಾಡುತ್ತಿರಬಹುದು. ಅವರದ್ದೇ ಆದ ಕಾರಣಕ್ಕಾಗಿ ಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ನೀವೇನು ಭರವಸೆಯನ್ನು ಕೊಟ್ಟಿದ್ದೀರಿ ಈ ರಾಜ್ಯದ ರೈತರ ಪರವಾಗಿ ಜನತಾ ದಳದ ಚುನಾವಣಾ ಪ್ರಣಾಳಿಕೆ ನಮ್ಮ ಆರ್ಥಿಕ ಸಾಮಾಜಿಕ ರಾಜಕೀಯ ಕಾರ್ಯಕ್ರಮಗಳ ಪ್ರಥಮ ಆದ್ಯತೆ, ಅಂತಿಮ ಲಕ್ಷ್ಮ ರೈತರು ಮತ್ತು ಗ್ರಾಮೀಣ ಪ್ರದೇಶಗಳಿಗೆ ಸಾಲದ ಸುಳಿಯಲ್ಲಿ ಸಿಲುಕಿ ಸೊರಗುತ್ತಿರುವವರು, ಆತ್ಮಹತ್ಯೆಗೆ ಶರಣಾಗುತ್ತಿರುವವರು, ಅನಿಶ್ಚಿತ ಮಳೆಯೊಂದಿಗೆ ಜೂಜಾಡುತ್ತರುವರು.

ಮೂವತ್ತು ಸಾವಿರ ಹಳ್ಳಿಗಳ ಏಳಿಗೆ ನಮ್ಮ ಮೊದಲ ಗಮನ, ಈ ಮಾತನ್ನು ನೀವು ಹೇಳಿದ್ದೀರಿ, ಬಹಳ ಸಂತೋಷ, ಇವತ್ತು ಸಮ್ಮಿಶ್ರ ಸರ್ಕಾರವಿದೆ. ಇವತ್ತು ಕಾಂಗ್ರೆಸ್ ಇರಲಿ, ಜೆಡಿಎಸ್ ಇರಲಿ, ಈ ರಾಜ್ಯದ ರೈತನಿಗೆ ನೆರವು ಕೊಡುವ ಪ್ರಶ್ನೆ ಬಂದಾಗ ಇದಕ್ಕೆ ಯಾರು ಅಡ್ಡಿ ಮಾಡುವುದಕ್ಕೆ ಸಾಧ್ಯವಿಲ್ಲ. ಈ ರೀತಿ ದೊಡ್ಡ ದೊಡ್ಡ ಮಾತುಗಳನ್ನು ಹೇಳಿ, ಇವತ್ತು ಅಧಿಕಾರಕ್ಕೆ ಬಂದು ಸಮ್ಮಿಶ್ರ ಸರ್ಕಾರವನ್ನು ನೀವು ರಚನೆ ಮಾಡಿದ ಮೇಲೆ, ಇವತ್ತು ರಾಜ್ಯದ ರೈತನ ನೆರವಿಗೆ ಬರಬೇಕಾದ್ದು ನಿಮ್ಮ ಆದ್ಯಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ನೀವು ಆ ಕಡೆ ಮನಸ್ಸು ಮಾಡಿಲ್ಲ. ಇವತ್ತು ನಾನೇನು ನಿಮ್ಮ ಹತ್ತಿರ ಹೇಳಬೇಕಾಗಿರುವಂತಹದ್ದು? ಅತಿವೃಷ್ಟಿ ಮತ್ತು ಅನಾವೃಷ್ಟಿಯ ಸಂದರ್ಭದಲ್ಲಿ ರೈತರ ಪರ ತ್ವರಿತವಾಗಿ ನಿಲ್ಲುತ್ತೇವೆ ಎಂದು ಈಗ ಏನಾಗಿದೆ? ನಾಲ್ಕು ವರ್ಷದಿಂದ ಬರಗಾಲ, ಅವನು ಹೇಗೆ ಅಸಲು ಕಟ್ಟುತ್ತಾನೆ, ಹೇಗೆ ಅವನು ಕೃಷಿ ಕೆಲಸದಲ್ಲಿ ಮತ್ತೆ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ. ಇದರ ಬಗ್ಗೆ ತಾವು ಯಾವತ್ತೋ ಚಿಂತನೆ ಮಾಡಿದ್ದೀರಿ? ಬಿತ್ತನೆ ಸಂದರ್ಭದಲ್ಲಿಯೇ ರೈತನ ಬೆಳೆಗೆ ವೈಜ್ಞಾನಿಕವಾಗಿ ಒಂದು ಬೆಲೆಯನ್ನು ನಿಗದಿ ಮಾಡುತ್ತೇವೆ

ಎಂದು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನೀವು ಹೇಳಿದ್ದೀರಿ. ಅದು ನಮ್ಮ ಕರ್ತವ್ಯ ತಾನೆ? ಇವತ್ತಿನ ಒಂದು ಪರಿಸ್ಥಿತಿಯನ್ನು ಹವಮಾನದಲ್ಲಿ, ಮಳೆ ಕಡಿಮೆಯಾಗುತ್ತಿರುವಂತಹ ಸಂದರ್ಭದಲ್ಲಿ, ಕಡಿಮೆ ನೀರಿನಲ್ಲಿ ಹೆಚ್ಚು ಬೆಳೆಯನ್ನು ಬೆಳೆಯುವುದು ಹೇಗೆ? ಅವನು ಬೆಳೆದಂತಹ ಬೆಳೆಗೆ ಸರಿಯಾದ ವೈಜ್ಞಾನಿಕ ಬೆಲೆ ಕೊಟ್ಟು ಅವನನ್ನು ಉಳಿಸುವುದು ಹೇಗೆ? ಪ್ರಕೃತಿ ವಿಕೋಪದಿಂದ ಬೆಳೆ ನಾಶವಾದರೆ ಅವನಿಗೆ ಪರಿಹಾರ ಕೊಡುವುದು ಹೇಗೆ? ಇದರ ಬಗ್ಗೆ, ಸರ್ಕಾರ, ನಾವು ನೀವು ಒಟ್ಟಾಗಿ ಕುಳಿತು ಚಿಂತನೆ ಮಾಡಿ ಅದಕ್ಕೆ ಒಂದು ಪರಿಹಾರವನ್ನು ಹುಡುಕದೇ ಇದ್ದರೆ, ಕೇವಲ ಅಸಲು ಕಟ್ಟುವಂತಹ ಅವಧಿಯನ್ನು ಮಾರ್ಚ್ ಕೊನೆಯವರೆಗೆ ವಿಸ್ತರಣೆ ಮಾಡುವುದರಿಂದ ರೈತನ ಜೀವನದಲ್ಲಿ ಹೊಸ ಬೆಳಕನ್ನು ನಾವೇನೂ ಕಾಣುವುದಕ್ಕಾಗುವುದಿಲ್ಲ. ಅದಕ್ಕೆ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂತೆ, ಈ ದೇಶದಲ್ಲಿ ಯಾರು ಲೂಟಿ ಮಾಡುವಂತಹ ಜನ ಯಾರಿದ್ದಾರೆ ಅಂತಹವರಿಂದ ಸಾವಿರಾರು ಕೋಟಿ, ಹತ್ತಾರು ಸಾವಿರ ಕೋಟಿ ಲೂಟಿಯಾಗುತ್ತದೆ. ಅದರ ವಿವರವನ್ನು ಕೊಟ್ಟರೆ ಬಹುಶಃ ರಾಜ್ಯದ ರೈತ ಬಡ್ಡಿಗೆ ತೆಗೆದುಕೊಂಡು ನಮ್ಮ ಬೆನ್ನತ್ತಬಹುದು. ಅಷ್ಟು ದೊಡ್ಡ ಪ್ರಮಾಣದಲ್ಲಿ ಬೇರೆ ಸಮೂಹಕ್ಕೆ ನಾವು ಕನ್ಸೇಷನ್ ಕೊಟ್ಟಿದ್ದೇವೆ. ಅವರ ರಕ್ಷಣೆಗೆ ಹೋಗಿದ್ದೇವೆ, ಆದರೆ ನಾವು ರೈತರನ್ನು ಮರೆತಿದ್ದೇವೆ. ಈ ಹಿನ್ನೆಲೆಯಲ್ಲಿ ಈ ವಿಧಾನಮಂಡಲದ ಒಳಗಡೆ ನಾವು ಬರುವುದಕ್ಕೆ ಕಾರಣನಾದ ನಮ್ಮ ಮಾಲೀಕನಾದ ಈ ರೈತನಿಗೆ, ಈ ಬೇಡಿಕೆಗಳನ್ನು ಈಡೇರಿಸುವುದರ ಮೂಲಕ ಅವನ ಜೀವನದಲ್ಲಿ ಹೊಸ ಬೆಳಕನ್ನು ಕೊಡುವುದಕ್ಕೆ ತಾವು ಒಂದು ನಿರ್ಧಾರವನ್ನು ಕೈಗೊಳ್ಳಬೇಕು. ಈ ಒತ್ತಾಯವನ್ನು ತಾವು ಈಡೇರಿಸಿ ರೈತ ಸಮೂಹವನ್ನು ಉಳಿಸಬೇಕೆನ್ನುವ ಒತ್ತಾಯವನ್ನು ಮಾಡಿ, ಉಳಿದೆಲ್ಲಾ ಮಾನ್ಯ ಸದಸ್ಯರು ನಿಲುವಳಿ ಸೂಚನೆಯ ಮೂಲಕ ಅನೇಕ ಪ್ರಮುಖ ವಿಷಯಗಳನ್ನು ಮಾತನಾಡುವವರಿದ್ದಾರೆ. ಅವರಿಗೂ ಕೂಡ ತಮ್ಮ ವಿಚಾರಗಳ ಮೇಲೆ ಬೆಳಕನ್ನು ಚೆಲ್ಲಲ್ಲು ಅವಕಾಶವಾಗುತ್ತದೆ. ಇಷ್ಟು ಸಮಯ ಮಾತನಾಡಲು ನನಗೆ ಅವಕಾಶಕೊಟ್ಟ ತಮಗೆ ವಂದಿಸುತ್ತೇನೆ. ದಯಮಾಡಿ, ಈ ಬೇಡಕೆಯನ್ನು ಈಡೇರಿಸಬೇಕು ಇಲ್ಲದಿದ್ದರೆ ಅನಿವಾರ್ಯವಾಗಿ ಪ್ರಾರಂಭದ ದಿವಸದಿಂದಲೇ ಈ ಸದನ ರಣರಂಗವಾಗುವುದಕ್ಕೆ ಅವಕಾಶ ಮಾಡಿ ಕೊಡಬೇಡಿ ಎನ್ನುವ ಒತ್ತಾಯವನ್ನು ಆಡಳಿತಪಕ್ಷದ ಸದಸ್ಯರಲ್ಲಿ ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸಿದ್ಧರಾಮಯ್ಯನವರನ್ನು ಅಭಿನಂದಿಸುವುದು ಈ ಸಂದರ್ಭದಲ್ಲಿ ನನ್ನ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ಜಡ್ಡು ಹಿಡಿದಿದ್ದಂಥ ವ್ಯವಸ್ಥೆಗೆ ಕನಿಷ್ಟ ಬಡ್ಡಿ ಸುಸ್ತಿ ಬಡ್ಡಿ ವಜಾ ಮಾಡಿ, ರೈತರಿಗೆ ಒಂದು ಚೇತೋಹಾರಿಯಾದಂತಹ ವಾತಾವರಣವನ್ನು ನಿರ್ಮಾಣ

ಮಾಡಿದರು. ಅದಕ್ಕೆ ಆಯವ್ಯಯದಲ್ಲಿ ಹಣವನ್ನು ಕೂಡ ಇಟ್ಟರು. ಅದು ಸಂಪೂರ್ಣವಾಗಿ ಈ ತಾರೀಖಿನೊಳಗೆ ಬಳಕೆಯಾಗಲೀ ಎಂಬುದು ನಮ್ಮ ಭಾವನೆ. ನಾವೇನು ಬಹಳ ಆಸೆಯನ್ನು ಇಟ್ಟುಕೊಂಡು, ಯಾರು ಈ ದೇಶದ ರೈತ ದುಡಿದು ಬೇರೆಯವರನ್ನು ಸಾಕುತ್ತಾನೆಂದು ತಿಳಿದುಕೊಂಡಿದ್ದೇವು ಅವನು ಇವತ್ತು ದಯನೀಯ ಸ್ಥಿತಿಗೆ ಬಂದು ಹೋಗಿಬಿಟ್ಟಿದ್ದಾನೆ. ಅವನಿಗೆ ಅಸಲು ತಂದು ಕಟ್ಟು ಅಂದರೆ ಕಟ್ಟುವ ಸ್ಥಿತಿಯಲಿಲ್ಲ. ಸತತವಾಗಿ ಮೂರ್‍ನಾಲ್ಕು ವರ್ಷ ಬರಗಾಲದ ಬವಣೆಗೆ ಸಿಕ್ಕಿದವನು, ಹೇಗಾದರೂ ಮಾಡಿ ಸಾಲ ತೀರಿಸಬೇಕು, ಅಸಲನ್ನು ಎಲ್ಲಾದರೂ ಹೊಂಚಿ ಕಟ್ಟಬೇಕೆಂದು ಬಹಳ ಆಸೆಯನ್ನು ಇಟ್ಟು ಕೊಂಡಿದ್ದಾನೆ. ನಾವು ಕಣ್ಣಿನಲ್ಲಿ ನೋಡುತ್ತಿದ್ದೇವೆ. ಮನೆಯಲ್ಲಿ ಏನೇನು ಸಿಗುತ್ತದೆ ಅದನ್ನು ಅಡವಿಡುತ್ತಿದ್ದಾನೆ. ಏನಾದರೂ ಮಾಡಿ 30ನೇ ತಾರೀಖಿನೊಳಗೆ ಅಸಲು ತೀರಿಸಬೇಕೆಂದು, ಆದರೂ ಇದು ಮಿತಿಮೀರಿಬಿಟ್ಟಿದೆ, ಇವತ್ತೇನು ಗಡವು ಕೊಟ್ಟಿದ್ದೀರಿ, ಈ ವಾರದಲ್ಲಿ ನೀವೇನಾದರೂ ಈ ರಾಜ್ಯದಲ್ಲಿ ಸಮೀಕ್ಷೆ ಮಾಡಿಸಿ ಬಿಟ್ಟರೆ, ಇವತ್ತು ಏನೇನು ಸಿಗುತ್ತದೆಯೋ ಅದನ್ನು ತೆಗೆದುಕೊಂಡು ಬಂದು, ಅಡವಿಟ್ಟು ಅಸಲು ಕಟ್ಟುವುದಕ್ಕೆ ಆತ ಪ್ರಯತ್ನ ಮಾಡುತ್ತಿದ್ದಾನೆ. ಆದರೂ ಅವನು ಇವತ್ತು ಅಶಕ್ತ, ಶಕ್ತಿಹೀನನಾಗಿ ಬಿಟ್ಟಿದ್ದಾನೆ. ಮತ್ತೆ ನಾವೇನು ಆಯವ್ಯಯದಲ್ಲಿ ಒಂದಿಷ್ಟು ಹಣವೆಂದು ಇಟ್ಟಿದ್ದೇವೆ ಶೇಕಡ 25, 30 ರಷ್ಟು ಮಾತ್ರ ರೈತರು ಇವತ್ತು ಸ್ಪಂದಿಸಿರುವುದರಿಂದ ಅದರ ಪೂರ್ಣ ಬಳಕೆ ಇವತ್ತು ಆಗುವುದಿಲ್ಲ. ಇದು ಸ್ಪಷ್ಟ ಅದಕ್ಕೆ ಅನೇಕ ಕಾರಣಗಳಿವೆ. ಈ ಕಾರಣಗಳನ್ನೆಲ್ಲಾ ನಾನು ಈಗ ಮಾತನಾಡುತ್ತೇನೆ. ನಾವು ಇವತ್ತು ನೇರವಾಗಿ ಅವನ ಸಹಾಯಕ್ಕೆ ಬರಬೇಕು. ನಾನು ಮಾನ್ಯ ದೇಶಪಾಂಡೆಯವರನ್ನು ಅಭಿನಂದಿಸುತ್ತೇನೆ. ಏಕೆಂದರೆ ಅವರು ಒಂದು ಅರ್ಜಿಯನ್ನೋ ಮೆಮೊರ್‍ಯಾಂಡಮನ್ನೋ ಸನ್ಮಾನ್ಯ ಉಪಮುಖ್ಯಮಂತ್ರಿಯವರಿಗೆ ಇದನ್ನು ಮುಂದಕ್ಕೆ ಹಾಕಬೇಕೆಂದು ನಮಗಿಂತ ಮೊದಲೇ ಕೊಟ್ಟಿದ್ದಾರೆ. ನಾನು ನೋಡಿದೆ. ಆದರೆ ನನಗೆ ಒಂದು ಕ್ಷಣ ಅನ್ನಿಸಿತ್ತು. ಇವರು ಒಬ್ಬ ಕ್ಯಾಬಿನೆಟ್ ಮಿನಿಸ್ಟರ್ ಆಗಿ ಅರ್ಜಿ ಕೊಡುತ್ತಾರಾ, ಮೆಮೊರ್‍ಯಾಂಡಮ್ ಕೊಡುತ್ತಾರಾ? ಇವರೇ ಸಹಕಾರ ಸಚಿವರಾಗಿ ಒಂದು ಕ್ಯಾಬಿನೇಟ್ ನೋಟ್ ಕಳುಹಿಸುವಂತಹ ಒಂದು ತೀರ್ಮಾನ ತೆಗೆದುಕೊಂಡು ನಮಗೆ ಹೇಳಲಿಲ್ಲ. ಅಂತ ವ್ಯವಸ್ಥೆ ಏನಿದೆಯೋ ನನಗೆ ಗೊತ್ತಿಲ್ಲ ನಾನು ಮಂತ್ರಿಯಾಗಿದ್ದವನಲ್ಲ, ಅವರಿಗೆ ಗೊತ್ತು. ಅದರಲ್ಲೂ ಇವತ್ತು ಸಹಕಾರ ಸಚಿವರು, ಅವರು ಇವತ್ತು ನಮ್ಮ ಎದುರಿಗೆ ಕುಳಿತ್ತಿದ್ದಾರೆ. ಈ ಸಾಲ ತೀರಿಸಲಾಗದಂತಹ ಸ್ಥಿತಿಯನ್ನು ಸಹಕಾರ ಇಲಾಖೆಯೂ ಕೂಡ ನಿರ್ಮಾಣ ಮಾಡಿದೆ, ನೀವು, ಬ್ಯಾಂಕ್‌ಗಳಿಗೆ ಸಹಕಾರ ಸಂಘಗಳಿಗೆ ಸೂಚನೆ ಕೊಟ್ಟಿದ್ದೆ. ಮೇ 14, ಮೇ 15ನೇ ತಾರೀಖಿನಲ್ಲಿ, ಈ ತರಹದ ಲೋನ್‌ಅವನ್ನು ಅಸಲು ಕಟ್ಟಿಸಿಕೊಂಡು ಬಡ್ಡಿ ಬಿಡಿ ಎಂದು ಸರ್ಕ್ಯೂಲರ್ ಕೊಟ್ಟಿದ್ದು. ಸೂಚನೆ ಕೊಟ್ಟವರು,

ಏಪ್ರಿಲ್ ಒಂದರಿಂದ ಎಷ್ಟು ದಿವಸ ಲೇಟ್ ಆಗಿ ಕಟ್ಟಿದ್ದಾನೆ ಅಷ್ಟು ದಿವಸಕ್ಕೆ ಬಡ್ಡಿ ತೆಗೆದುಕೊಳ್ಳಿ ಎಂದು ಸೂಚನೆ ಕೊಟ್ಟಿರಿ, ಬ್ಯಾಂಕ್‌ಗಳಲ್ಲಿ ತೆಗೆಸಿ ನೋಡಿ, ಪಿಎಲ್‌ಡಿ ಬ್ಯಾಂಕ್‌ನಲ್ಲಿ ಲೆಕ್ಕಾಚಾರ ಮಾಡಲಾರದಂತಹ ಸ್ಥಿತಿ ನಿರ್ಮಾಣ ಮಾಡಿದಿರಿ. ನಾನು ಮೇ 20ನೇ ತಾರೀಖು 25ನೇ ತಾರೀಖು ಕಟ್ಟುವುದಕ್ಕೆ ಹೋದರೆ ಇಷ್ಟು ವಜಾ ಆಗಿದೆ ಏಪ್ರಿಲ್ ಒಂದರಿಂದ ಮೇ ಇಪ್ಪತ್ತೈದರವರೆಗೆ ಬಡ್ಡಿ ಕಟ್ಟಿ ಎಂದು ಹೇಳುತ್ತಾರೆ. ಜೂನ್ ಮೂವತ್ತರವರೆವಿಗೂ ನೀವು ಆದೇಶ ಕೊಟ್ಟು, ಜೂನ್ ಮೂವತ್ತರ ಒಳಗೆ ಯಾರು ಸಾಲ ಕಟ್ಟುತ್ತಾರೆ. ಅವರ ಅಸಲು ಕಟ್ಟಿದರೆ ಬಡ್ಡಿ ಬಿಡುತ್ತೇವೆಂದು ಶಾಸನಸಭೆಯಲ್ಲಿ ಹೇಳಿದ ಸರ್ಕಾರ ಏಪ್ರಿಲ್ ಒಂದರಿಂದ ಜೂನ್ ಯಾವ ತಾರೀಖಿನಲ್ಲಿ ಕಟ್ಟುತ್ತೀರಿ ಅಲ್ಲಿಯವರೆಗೆ ಮತ್ತೆ ಬಡ್ಡಿ ಹಾಕುತ್ತೇವೆ ಎಂದು ಹೇಳಿದ್ದಿರಿ. ನಾನು ಮನನೊಂದು ಹೇಳಬೇಕಾಗುತ್ತದೆ ಮತ್ತೆ ಇಲ್ಲಿ ನಾವು ಸ್ಪಷ್ಟವಾಗಿ ಎಲ್ಲಾ ರೀತಿಯ ಕೃಷಿ ಸಾಲಗಳ ಮೇಲಿನ ಬಡ್ಡಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೀರಾ ಎಂದು ಕೇಳಿದ್ದೆವು. ತಾವು ಸೂಚನೆ ಕೊಟ್ಟಿರಿ. ಫಾರಂ ಹೌಸ್‌ಗೆ ಬರುವುದಿಲ್ಲ, ತೆಂಗು ಅಭಿವೃದ್ಧಿ ಮಂಡಳಿಗೆ ಬರುವುದಿಲ್ಲ. ಫೌಲ್ಟ್ರಿಗೆ ಬರುವುದಿಲ್ಲ. ರಾಜ್ಯದಲ್ಲಿ ಏನು ನೆಡೆಯುತ್ತಿದೆ ಎಂಬುದು ಗೊತ್ತಾಗುವುದಿಲ್ಲ ನೀವು ಕೊಟ್ಟಿದ್ದನ್ನು ನಿಮ್ಮ ಅಧಿಕಾರಿಗಳು ನಮಗೆ ತಲುಪಿಸುವುದಕ್ಕಾಗಲಿಲ್ಲ. ಪ್ರತಿ ದಿವಸ ಪ್ರಶ್ನೆ ನಮಗೆ ಏಕೆ, ನಾನು ಫಾರಂ ಹೌಸ್‌ಗೆ ಪಿಎಲ್‌ಡಿ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡಿದ್ದೇನೆ. ಕ್ಯಾಟಲ್ ಶೆಡ್ ಅಂದರೆ ಮನ್ನಾವಾಗುತ್ತದೆ. ಫಾರಂ ಹೌಸ್ ಅಂದರೆ ಮನ್ನಾವಾಗುವುದಿಲ್ಲವೆಂದು ಪ್ರತಿ ದಿವಸ ನನಗೆ ಪ್ರಶ್ನೆ. ತೆಂಗು ಅಭಿವೃದ್ಧಿ ಸ್ಕೀಂಗೆ ಸಾಲ ತೆಗೆದುಕೊಂಡರೆ ಬಡ್ಡಿ ಮನ್ನಾವಿಲ್ಲ. ಇದನ್ನು ಯಾರು ಮಾಡಿದ್ದು. ಏಕೆ ಮಾಡಿದ್ದು? ನೀವು ವಾಹನ ಕೊಂಡುಕೊಳ್ಳುವುದಕ್ಕೆ ಟ್ರಾಕ್ಟರ್ ಬಿಟ್ಟು ಬೇರೆ ಮನ್ನಾವಿಲ್ಲ. ಇದನ್ನು ಯಾರು ಮಾಡಿದ್ದು, ಏಕೆ ಮಾಡಿದ್ದು? ನೀವು ವಾಹನ ಕೊಂಡುಕೊಳ್ಳುವುದಕ್ಕೆ ಟ್ರಾಕ್ಟರ್ ಬಿಟ್ಟು ಬೇರೆ ಕೊಟ್ಟಿದ್ದರೆ ನಾವೇನೂ ಕೇಳುತ್ತಿರಲಿಲ್ಲ. ಅರೆ ಅವನು ದನ ಕಟ್ಟಿಕೊಳ್ಳುವುದಕ್ಕೆ ಒಂದು ಕೊಟ್ಟಿಗೆ ಕಟ್ಟಿಕೊಂಡಿದ್ದಾನೆ. ಅದರ ಮೇಲೆ ಬಡ್ಡಿ ಮನ್ನಾ ಮಾಡಿದ್ದಾರೆಂದು ನಾವು ತಿಳಿದುಕೊಂಡು ಹೇಳಿದರೆ, ನೀವು ಗೊಂದಲಗಳನ್ನು ಸೃಷ್ಟಿ ಮಾಡಿ, ಇದ್ಯಾವುದಕ್ಕೂ ಉತ್ತರವನ್ನು ಕೊಡಲಿಲ್ಲ. ನಾನು ಸನ್ಮಾನ್ಯ ರಿಜಿಸ್ಟಾರ್‌ರವರಿಗೆ ಅವತ್ತೇ ನಾನು ಪತ್ರ ಬರೆದೆ, ಈ ಗೊಂದಲಗಳನ್ನು ನಿರ್ಮಾಣ ಮಾಡಿದ್ದೀರಿ, ಇದಕ್ಕೆ ಯಾರು ಕಾರಣ, ಏಪ್ರಿಲ್ ಒಂದರಿಂದ ಬಡ್ಡಿ ಜಾರ್ಜ್ ಮಾಡಿ ಎಂದು ನಿಮಗೆ ಯಾರು ಹೇಳಿದರು, ಏನು ಉದ್ದೇಶ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) :- ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಏನು ವಿಷಯ ಪ್ರಸ್ತಾಪ ಮಾಡಿದರು, ಆ ಒಂದು ಪರಿಸ್ಥಿತಿ ನಿರ್ಮಾಣವಾಗಿದ್ದು ನಿಜ, ನಾವೇನು ಹೇಳಿದ್ದೇವೆಂದರೆ, ದಿನಾಂಕ : 31-03-2005ಕ್ಕೆ

ಯಾರ loans over due ಆಗಿದ್ದಾವೆ. ಅವರು ಏಪ್ರಿಲ್ ಒಂದರಿಂದ ಜೂನ್ ಮೂವತ್ತರವರೆಗೆ ತಮ್ಮ ಅಸಲನ್ನು ಮರುಪಾವತಿ ಮಾಡಿದರೆ ಬಡ್ಡಿ, ದಂಡದ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ್ದೇವೆ. ತಾವು ಹೇಳಿದಂತೆ, ಕೆಲವು ನಮ್ಮ ರೈತರು ಮೇ 1, ಮೇ 5, ಮೇ 10, ಮೇ 25ರವರೆಗೆ ಕೊಡುವವರು ಇದ್ದಾಗ, ಅಸಲನ್ನು ಮರುಪಾವತಿ ಮಾಡಿದಾಗ ಸಹಕಾರಿ ಸಂಘಗಳು ಏಪ್ರಿಲ್ ಒಂದನೇ ತಾರೀಖಿನಿಂದ ಪ್ರಿನ್ಸಿಪಲ್ ಜೊತೆ ಇಂತಹ ತಾರೀಖಿನವರೆಗೆ ಬಡ್ಡಿ ಕೊಡಿ ಎಂದು ಇನ್‌ಸಿಸ್ಟ್ ಮಾಡಿದ್ದು ನಿಜ. ಈ ವಿಚಾರ ನಮ್ಮ ಗಮನಕ್ಕೆ ಬಂದ ನಂತರ, ಹಣಕಾಸಿನ ಸಚಿವರೊಡನೆ ಚರ್ಚೆ ಮಾಡಿ, ಈಗಾಗಲೇ ನಾವು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ, ಏನೆಂದರೆ ಏಪ್ರಿಲ್‌ನಿಂದ ಜೂನ್‌ವರೆಗೆ ಕೇವಲ ಅಸಲನ್ನು ವಸೂಲ್ಮಾಡಬೇಕು ಬಡ್ಡಿ ತೆಗೆದುಕೊಳ್ಳಬಾರದು, ಒಂದು ವೇಳೆ ಬಡ್ಡಿಯನ್ನು ತೆಗೆದುಕೊಂಡರೆ ಅದು ರೀಫಂಡ್ ಆಗಬೇಕು ಅಥವಾ ಮುಂದೆ ಅವರ ಅಕೌಂಟ್‌ನಲ್ಲಿ ಅಡ್ಜಸ್ಟ್ ಮಾಡಿ ಎಂದು ಹೇಳಿದ್ದೇವೆ. ಪುನಃ ನಾನು ರಿಪ್ಲೈ ಕೊಡುವಾಗ ನಾನು ಆ ಬಗ್ಗೆ ಬೆಳಕನ್ನು ಚೆಲ್ಲುತ್ತೇನೆ.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಹೇಳುವುದೇನೆಂದರೆ, ಈಗ ದಿನಾಂಕ: 31–03–2004 ರವರೆಗೆ ಮಾತ್ರ ಬಡ್ಡಿ ಮನ್ನಾವಾಗಿರುವುದು. ಸರ್ಕಾರದ ಆದೇಶ ಸಂ: ಸಿಎಂಡಬ್ಲ್ಯೂ / 109/ಸಿಎಲ್‌ಎಸ್/04, ಬೆಂಗಳೂರು, ಇದರಲ್ಲಿ ದಿನಾಂಕ : 31–03–2004ಕ್ಕೆ ಪಾವತಿಸಲು ಬಾಕಿ ಉಳಿದಿರುವ ಬಡ್ಡಿ ಅಸಲು ಎಂದರೆ, ಇವತ್ತು ಪಾವತಿ ಮಾಡಬೇಕಾದರೆ ಒಂದು ವರ್ಷ ಮೂರು ತಿಂಗಳು ಅಸಲು ಬಡ್ಡಿಯನ್ನು ಅವನು ಪಾವತಿ ಮಾಡಬೇಕಾಗುತ್ತದೆ. ನೀವು ಕೊಟ್ಟಿರುವ ಸುತ್ತೋಲೆಯೇ ಹಾಗೆ ಇದೆ. ಒಂದು ವರ್ಷ ಮೂರು ತಿಂಗಳೆಂದು ಸ್ಪಷ್ಟವಾಗಿದೆ. ಇದರಲ್ಲಿ ಮತ್ತೆ ಏನು ಮಾಡಿದ್ದಾರೆಂದರೆ ಮಾಧ್ಯಮಿಕ ಸಾಲ, ಮಾಧ್ಯಮಿಕ ಪರಿವರ್ತಿತ ಸಾಲಕ್ಕೆ ಮಾತ್ರ ಸಂಬಂಧಿಸಿದೆಯೇ ಹೊರತು, ಇದು ಬೆಳೆ ಸಾಲಕ್ಕೆ ಇಲ್ಲ. ಬಡ್ಡಿ ಮನ್ನಾವೆಂದರೆ, ಈ ಅಸಲು ಬಡ್ಡಿ ಮನ್ನಾ ಮಾಡುವುದಕ್ಕೆ ಅಸಲಿನಷ್ಟೇ ಬಡ್ಡಿಯನ್ನು ತುಂಬಿದ್ದರೆ, ಬಡ್ಡಿ ಮನ್ನಾ ಏನಿದೆಯಲ್ಲಾ ನೀವು ತಪ್ಪು ಸುತ್ತೋಲೆಯನ್ನು ಹೊರಡಿಸಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಈಗ ಅವರು ಒಪ್ಪಿಕೊಂಡಿದ್ದಾರೆ, ನಾವು ಏಪ್ರಿಲ್ ಒಂದರಿಂದ ರೈತ ಕಟ್ಟುವವರೆಗೆ ಬಡ್ಡಿ ನಿಲ್ಲಿಸಲಾಗಿದೆ ಎಂದು ಹೇಳಲಾಗುತ್ತಿದೆ. ನಿನ್ನೆಯವರೆಗೆ ನಾನು ಹಾನೆಸ್ಟ್ ಆಗಿ ಮಾತನಾಡುತ್ತೇನೆ ನಮಗೆ ಮಾಹಿತಿ ಇಲ್ಲ. ನಿನ್ನೆಯ ದಿವಸ ಕೂಡ ನಮ್ಮನ್ನು ರೈತರು ಕೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ :– ನಿನ್ನೆ ಪತ್ರಿಕೆಯಲ್ಲಿ ನನ್ನ ಸ್ಟೇಟ್‌ಮೆಂಟ್ ಬಂದಿದೆ ನೋಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಿಮ್ಮ ಸ್ಟೇಟ್‌ಮೆಂಟ್ ಅನ್ನು ಬ್ಯಾಂಕ್‌ನವರು, ಸಹಕಾರ ಸಂಘದವರು ಯಾರು ಗಣನೆಗೆ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಒಬ್ಬ ಜವಾಬ್ದಾರಿ ಸಚಿವನಾಗಿ ನಾನು ನಿಮಗೆ ಭರವಸೆಯನ್ನು ಕೊಟ್ಟಿದ್ದೇವೆ. ಏಪ್ರಿಲ್ 1, 2005 ರಿಂದ ಮೂವತ್ತು ಜೂನ್‌ವರೆಗೆ ರೈತರು ಪ್ರಿನ್ಸಿಪಲ್ ಅಷ್ಟನ್ನೇ ಕೊಡಬೇಕು. ಅದರ ಮೇಲೆ ಬಡ್ಡಿ ವಸೂಲ್ಮಾಡಿದರೆ ತಪ್ಪು, ಅದನ್ನು ರೀಫಂಡ್ ಮಾಡುತ್ತೇವೆ ಅಥವಾ ಅಡ್ಜೆಸ್ಟ್ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಹೇಳಿದ್ದೀರಿ, ನಿಮ್ಮಿಂದ ಸರ್ಕ್ಯುಲರ್ ಇಲ್ಲದಿದ್ದರೆ ಅಧಿಕಾರಿಗಳು ಅದನ್ನು ಅಧಿಕೃತವಾಗಿ ಒಪ್ಪುವುದಿಲ್ಲ ನಿಮ್ಮ ಪೇಪರ್ ಸ್ಟೇಟ್‌ಮೆಂಟನ್ನು ಅಧಿಕೃತವಾಗಿ ಅವರು ಒಪ್ಪುವುದಿಲ್ಲ ಬಿಡಿ. ಅದು ಪ್ರಶ್ನೆ ಬಂದಿರತಕ್ಕದ್ದು.

ಶ್ರೀ ಆರ್.ವಿ. ದೇಶಪಾಂಡೆ :- ನಾಲ್ಕೈದು ದಿವಸಗಳ ಹಿಂದೆ ಹಣಕಾಸಿನ ಸಚಿವರ ಜೊತೆ ಒಂದು ಸಭೆಯಾಗಬೇಕಾಗಿತ್ತು. ಕೆಲವು ಕಾರಣದಿಂದ ಮಾಡಲಿಕ್ಕೆ ಆಗಲಿಲ್ಲ. ಈಗಾಗಲೇ ನಾನು ಹಣಕಾಸು ಸಚಿವರ ಜೊತೆ ಮಾತನಾಡಿದ್ದೇನೆ. ಅವರೂ ಸಹ ಇದಕ್ಕೆ ಒಪ್ಪಿಕೊಂಡಿದ್ದಾರೆ. ಹಾಗಾಗಿ ನಾನು ಓರಲ್ ಸೂಚನೆ ಕೊಟ್ಟಿದ್ದೇವೆ. ರೈಟಿಂಗ್‌ನಲ್ಲಿ ಸರ್ಕ್ಯುಲರ್ ಕೊಡುತ್ತೇವೆ. ಈ ಹಣ ವಸೂಲಿಯಾದರೆ ಅದನ್ನು ರಿಫಂಡ್ ಕೊಡುತ್ತೇವೆ ಅಥವಾ ಅಡ್ಜೆಸ್ಟ್ ಮಾಡುತ್ತೇವೆ ಎಂದು ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ಭರವಸೆ ಕೊಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅದನ್ನು ನಾವು ಒಪ್ಪುತ್ತೇವೆ. ನಾವು ತಡವಾಗಿ ರಿಪೇಮೆಂಟ್ ಮಾಡಲಿಕ್ಕೆ, ರೈತರು ಹೋಗಿ ಬ್ಯಾಂಕಿನಲ್ಲಿ ಹಣ ಕಟ್ಟಲಿಕ್ಕೆ ಇದನ್ನೆಲ್ಲಾ ಗೊಂದಲ ನಿರ್ಮಾಣ ಮಾಡಿತು. ಪರಿಸ್ಥಿತಿ ಹೇಗೆ ಬಂತು ಸಾರ್? ಮೇ 15ಕ್ಕೆ ನಿಮ್ಮ ಸರ್ಕ್ಯುಲರ್ ಎಲ್ಲಾ ಕಡೆ ಹೋಗಿರುವುದು, ಪಿಎಲ್‌ಡಿ ಬ್ಯಾಂಕಿಗೆ ಮತ್ತು ವಿಎಸ್‌ಎಸ್‌ಎಂಗಳಿಗೆ ಮೇ 15ಕ್ಕೆ ಮೊದಲ ಸರ್ಕ್ಯುಲರ್ ಹೋಗಲೇ ಇಲ್ಲ. ಏಪ್ರಿಲ್ ಮೇ ಜೂನ್ ತಿಂಗಳಲ್ಲಿ ಯಾವುದೇ ಕ್ರಾಪ್ ಹಾರ್ವೆಷ್ಟ್ ಆಗುವ ಸೀಸನ್‌ನಲ್ಲ, ನಮಗೆ ಯಾವುದೇ ಕ್ರಾಪೂ ಇರಲಿಲ್ಲ. ನಾವು ಯಾವ ಬೆಳೆ ಬೆಳೆದು ದುಡ್ಡು ತಂದು ನಾವು ಆ ಸಾಲ ತೀರಿಸಬೇಕಾಗಿತ್ತು? ವಿವೇಚನೆಯಿರುವ ಸರ್ಕಾರವಾಗಿದ್ದರೆ ಒಂದು ಬ್ರಿಡ್ಜ್ ಲೋನ್ ಕೊಡಬಹುದಾಗಿತ್ತು. ಅಥವಾ ಆ ಹಣವನ್ನೇ ರೀಸ್ಟ್ರಕ್ಚರ್ ಮಾಡಬಹುದಾಗಿತ್ತು. ಮಾನ್ಯ ರಮೇಶ್‌ಕುಮಾರ್ ಹೇಳಿದ್ದನ್ನು ನಾನು ಒಪ್ಪುತ್ತೇನೆ. ಇವತ್ತು ಕೆಎಸ್‌ಎಫ್‌ಸಿಯಲ್ಲಿ ರೀಸ್ಟ್ರಕ್ಚರ್ ಮಾಡಿಕೊಡುತ್ತೀರಿ, ಇವತ್ತು ಬೇರೆಬೇರೆ ಎಲ್ಲಾ ಕಡೆ ಲೋನನ್ನು ರೀಸ್ಟ್ರಕ್ಚರ್ ಮಾಡಿಕೊಡುತ್ತೀರಿ. ಕೇಂದ್ರ ಸರ್ಕಾರವೇ ರಾಜ್ಯ ಸರ್ಕಾರಕ್ಕೆ ಬ್ರಿಡ್ಜ್‌ಲೋನ್ ಕೊಡುತ್ತದೆ. ನೀವು ಈ ಸಾಲ ತೀರಿಸಿ ಇನ್ನು ಮುಂದೆ 6 ಪರ್ಸೆಂಟ್‌ಗೆ ಸಾಲ ಪಡೆಯಬೇಕೆಂದು ಏನು ಮಾಡಿದ್ದೀರಿ. ಈ ಸಾಲ

ತೀರಿಸಲಿಕ್ಕೆ ನಾವೊಂದು ವಿಶೇಷ ಸಾಲ ಕೊಡುತ್ತೇನೆ ಅಂತ ಹೇಳಬೇಕಾಗಿತ್ತು. ತಾವೇನೂ ಮಾಡಲಿಲ್ಲ. ಏಕಾಏಕಿ 10, 12, 13 ವರ್ಷಗಳಿಂದ ನಿಂತಿದ್ದ ಸಾಲವನ್ನು ವಾಪಸ್ಸು ಕಟ್ಟಿ, ಇದರ ಮೇಲೆ ನಿಮ್ಮ ಭೂಬ್ಯಾಂಕ್‌ಗಳು ಗೊಂದಲವನ್ನು ನಿರ್ಮಾಣ ಮಾಡಿತು. ಅವರು ಹೇಳಿದಂತೆ ಅಸಲಿಗಿಂತ ಬಡ್ಡಿ ಜಾಸ್ತಿ ಕಟ್ಟಿರುವವರಿಗೆ ಏನು ಮಾಡುತ್ತೀರಿ? ಅವರು ಬೇರೆ ಬೇರೆ ಸ್ಕೀಂಗಳು ನಿರೂಪಣೆ ಮಾಡಿಬಿಟ್ಟರು. ಅವರದ್ದು ಡೆಡ್‌ಲೈನ್ ಯಾವಾಗಲೋ ಅಂತ ಗೊತ್ತಿಲ್ಲ. ಅವರು ಕೆಲವು ಹೇಳಿದ್ದಾರೆ. ನಾವು 2004ನೇ ಇಸವಿಯದು ಬಡ್ಡಿ ಕಟ್ಟಿದ್ದೇನೆ ಅಂತ ಹೀಗೆ ವಿಶೇಷವಾಗಿ ಬ್ಯಾಂಕ್‌ಗಳು ಅವರವರದೇ ಆದ ಯೋಜನೆಗಳನ್ನು ಅನೌನ್ಸ್ ಮಾಡಿದ್ದವು. ನಾನು ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಪಿಎಲ್‌ಡಿ ಬ್ಯಾಂಕಿನಿಂದ ಕಳೆದ ವರ್ಷ ಒಂದು ಸರ್ಕ್ಯುಲರ್ ಹೋಯಿತು. ನಿಮ್ಮ ಲೋನ್ ಪೈಕಿ ನೀವೇನು ರಿಪೇಮೆಂಟ್ ಮಾಡಿದ್ದೀರಿ ಅದನ್ನು ನಾವು ಸಸ್ಪೆನ್ಸ್‌ನಲ್ಲಿಟ್ಟಿರುತ್ತೇವೆ. ಸರ್ಕಾರದ ತೀರ್ಮಾನವಾಗುವವರೆಗೆ ಜಮಾ ತೆಗೆದುಕೊಳ್ಳುವುದಿಲ್ಲ ಹಣ ಕೊಟ್ಟಿರಿ ಅಂತ ಎಲ್ಲರ ಹತ್ತಿರ ತೆಗೆದುಕೊಂಡರು. ಏಕಾಏಕಿ ಜೂನ್ ಜುಲೈನಲ್ಲಿ ಅದನ್ನು ಜಮಾ ಮಾಡಿಕೊಂಡು ಬಿಟ್ಟರು. ಯಾರಿಗೂ ನೋಟಿಸ್ ಇಲ್ಲ. ಪಿಎಲ್‌ಡಿ ಬ್ಯಾಂಕಿನಲ್ಲಿ ಸಸ್ಪೆನ್ಸನಲ್ಲಿಟ್ಟಿದ್ದು ಯಾಕೆ? ಆನಂತರ ಅಡ್ಜಸ್ಟ್ ಮಾಡಿದ್ದು ಯಾಕೆ ಎಂಬುದು ಗೊತ್ತಿಲ್ಲ. ಅವರೆಲ್ಲಾ ಇವತ್ತು ನಮ್ಮ ಹತ್ತಿರ ಬರುತ್ತಾರೆ. ನೋಡ್ರಿ ಹೋದವರ್ಷ ಜೂನ್ ಜುಲೈನಲ್ಲಿ ನಾವು ಸಸ್ಪೆನ್ಸ್‌ನಲ್ಲಿಡುತ್ತೇವೆ. ಅಂದಿದ್ದಕ್ಕೆ ಕಟ್ಟಿದೇವು. ಅದೆಲ್ಲಾ ಈಗ ಬಡ್ಡಿಗೆ ಜಮಾ ಆಗಿಬಿಟ್ಟಿದೆ, ನಮ್ಮ ಮನೆಗಳು ಹಾಳಾದವು ಅಂತ: ಸಾರ್, ಬಜೆಟ್ ಆಗಲಿ ಅಂತ ಕಾದಿದ್ದಾರೆ. ಬಜೆಟ್‌ನಲ್ಲಿ ನೀವು ಹೇಳಲಿಲ್ಲ. ಇಟ್ಟು ಕೊಂಡಿದ್ದ ಹಣವನ್ನು ನೋಟೀಸಿಲ್ಲದೆ. ಮಾನ್ಯ ದೇಶಪಾಂಡೆಯವರೇ, ತೆಗೆಸಿ ನೋಡಿ ಪಿಎಲ್‌ಡಿ ಬ್ಯಾಂಕಿನದು, ಸಸ್ಪೆನ್ಸಲಿಡುತ್ತೇವೆ ಅಂತ ಹೇಳಿದ್ದು ಯಾಕೆ? ತಕ್ಷಣ ಅದನ್ನು ಅಡ್ಜಸ್ಟ್ ಮಾಡಕೊಂಡಿದ್ದು ಯಾಕೆ? ಇವರೆಲ್ಲಾ ಕೇಳುತ್ತಿದ್ದಾರೆ ನನ್ನ 10 ಸಾವಿರ ರೂಗಳನ್ನು ಅಸಲಿಗೆ ತೆಗೆದುಕೊಂಡು ಅದನ್ನು ಅಸಲಿಗೆ ವಜಾ ಮಾಡಿಕೊಂಡು ಉಳಿದ ಹಣವನ್ನು ಹೇಳಿ ಕಟ್ಟುತ್ತೇವೆ ಅಂತ ಕೇಳಿದರೆ ನಿಮ್ಮ ಸರ್ಕಾರದಿಂದ ಉತ್ತರವಿಲ್ಲ. ಸಂಸ್ಥೆಗಳಿಂದ ಉತ್ತರವಿಲ್ಲ. ಈ ಗೊಂದಲಗಳೆಲ್ಲಾ ಇದ್ದಾಗ ಏಕಾಏಕಿ ತೀರಿಸಿಬಿಟ್ಟಿವಿ. ಯಾವ ಸ್ಥಿತಿಗೆ ಜನ ಬಂದಿದ್ದಾರೆ. ಅಂದರೆ 3,4,5 ಪರ್ಸೆಂಟ್ ಕಟ್ಟಿ ಸುಸ್ತಿ ಬಡ್ಡಿ ಉಳಿಸಿಕೊಳ್ಳಬೇಕು ಅಂದರೆ ಎಲ್ಲೂ ಹಣ ಸಿಗುತ್ತಾ ಇಲ್ಲ. ಇವತ್ತು ಗ್ರಾಮೀಣ ಪ್ರದೇಶದಲ್ಲಿ ಯಾವ ಸ್ಥಿತಿ ನಿರ್ಮಾಣವಾಗಿದೆ ಅಂದರೆ ನಾನು ಏನನ್ನು ಅಡ ಇಡುತ್ತೇನೆ ಅಂದರೂ ದುಡ್ಡು ಕೊಡುವವರು ದಿಕ್ಕಿಲ್ಲ. ಇವತ್ತು ಆಗಲೇ 30ನೇ ತಾರೀಖು, ಇಂತಹ ಸ್ಥಿತಿಯನ್ನು ನಾವ್ಯಾಕೆ ನಿರ್ಮಾಣ ಮಾಡಿದೆವು? ಜನಗಳದು ಕುತ್ತಿಗೆ ಹಿಡಿದ್ದೇವೆ, ಸಹಕಾರ ಕ್ಷೇತ್ರ ಮಾಡುತ್ತೇವೆ, ಯಾವ ದಗಲ್ಬಾಜಿ ಕೆಳಗೆ ಜನ ಸಿಕ್ಕಬಾರದು, ನಾವು ಸಮರ್ಪಕವಾಗಿ ಬಡ್ಡಿ ಇರುವ ಸಾಲ ಕೊಡುತ್ತೇವೆ ಅಂತ ಹೇಳಿ

ಅವರನ್ನು ಇವತ್ತು ತಳ್ಳುತ್ತಿದ್ದೇವೆ. ರಿನ್ಯೂವಲ್ಸ್ ಹೇಗಾಗುತ್ತದೆ ಎಂಬುದು ಗೊತ್ತಿಲ್ಲ. ಆ ಮೇಲೆ ವಿಎಸ್ಎಸ್ಎಲ್‌ಗಳು, ನಾನು ಇಲ್ಲಿ ನಿಂತು ಮಾತನಾಡುವಾಗ ಬಹಳ ಆಸೆ ಇಟ್ಟು ಕೊಂಡಿದ್ದೆ ನನ್ನದೂ ಸೊಸೈಟಿ ಸಾಲ ಉಳಿಯುತ್ತದೆ ಅಂತ.

ಉಪಾಧ್ಯಕ್ಷರು : ಊಟದ ನಂತರ ಮುಂದುವರೆಸಿ.

ಸದನವನ್ನು ಭೋಜನ ವಿರಾಮಕ್ಕೆಂದು ಮಧ್ಯಾಹ್ನ 2 : 30ರವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 : 30ಕ್ಕೆ ಮುಂದೂಡಲ್ಪಟ್ಟೂ ಮತ್ತೆ 2 : 30 ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಮತ್ತೆ ಸದನವು ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಂಡಿತು)

(ಶ್ರೀ ಎನ್. ವೈ. ಗೋಪಾಲಕೃಷ್ಣರವರು)

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

4. <u>ನಿಯಮ 69ರ ಮೇರೆಗೆ ಚರ್ಚೆ</u>

ವಿಷಯ : ರೈತರ ಸಾಲ ಮರುಪಾವತಿ ಅವಧಿಯನ್ನು ಮಾರ್ಚ್ 2006ರವರೆಗೆ ವಿಸ್ತರಿಸುವ ಬಗ್ಗೆ :

ಮಾನ್ಯ ಉಪಾಧ್ಯಕ್ಷರು :– ಮಾನ್ಯ ಮಾಧುಸ್ವಾಮಿಯವರೆ ತಮ್ಮ ಮಾತನ್ನು ಮುಂದುವರೆಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) :– ಮಾನ್ಯ ಉಪಾಧ್ಯಕ್ಷರೆ, ಬಡ್ಡಿ ಮನ್ನಾ ಯೋಜನೆಯನ್ನು ಏತಕ್ಕಾಗಿ ಮುಂದೂಡಬೇಕೆಂದು ನಾನು ಇಲ್ಲಿ ಮಾತನಾಡುತ್ತೇನೆ. ನಾನು ಈಗಾಗಲೇ ಹೇಳಿದಂತೆ, ಒಂದು ರೈತ ಸಂಕಷ್ಟದಲ್ಲಿರುವುದು, ಇನ್ನೊಂದು ಪರಿಸ್ಥಿತಿ, ನಾವೆಲ್ಲ ನಿರೀಕ್ಷೆ ಮಾಡಿದ್ದೇವು. ಈ ವರ್ಷವಾದರೂ ಒಳ್ಳೆಯ ಮಳೆಬೆಳೆ ಆಗಬಹುದು ಎಂದು. ಕಳೆದ ವರ್ಷಗಳಿಗೆ ಹೋಲಿಸಿಬಿಟ್ಟರೆ ಈ ವರ್ಷ ಕೂಡ ಮುಂಗಾರು ಬಹಳ ವಿಫಲವಾಗಿದೆ. ಯಾವುದೇ ರೀತಿಯಲ್ಲಿ ರೈತರಿಗೆ ಮಾರುಕಟ್ಟೆಯಿಂದ ಹಣ ಬರತಕ್ಕ ಪರಿಸ್ಥಿತಿ ನಿರ್ಮಾಣ ಆಗಲಿಲ್ಲ. ನ್ಯಾಯವಾಗಿ ನಾವು ಮಾತನಾಡಬೇಕೆಂದರೆ, ಈ ವರ್ಷದ್ದನ್ನೂ ಸೇರಿಸಿ ಸರ್ಕಾರ ಇನ್ನೊಂದು ಅಧಿಸೂಚನೆಯನ್ನು ಹೊರಡಿಸಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಉಪಾಧ್ಯಕ್ಷರೆ, ಸಹಕಾರಿ ಸಚಿವರು ಇಲ್ಲ ಇಲ್ಲಿ, ಹಣಕಾಸು ಮಂತ್ರಿಗಳು ಇಲ್ಲ. ನಾವು ಬಡ್ಡಿ ಮನ್ನಾದ ವಿಸ್ತರಣೆಯ ಬಗ್ಗೆ ಮಾತನಾಡುತ್ತಿದ್ದೇವೆ. ಮುಖ್ಯಮಂತ್ರಿಗಳಿಲ್ಲ, ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಇಲ್ಲ.

ಇದರ ಪರಿಸ್ಥಿತಿ ಏನು? ಇದು ಮೊದಲನೆಯ ದಿವಸ, ಅಧಿಕಾರಿಗಳು ಇಲ್ಲ, ಅವರು ಯಾವಾಗಲೂ ಬರುವುದೇ ಇಲ್ಲ. ಅಧಿಕಾರಿಗಳಿಗೆ ಸದನವೆಂದರೆ ಲೆಕ್ಕವೇ ಇಲ್ಲ. ಏಕೆಂದರೆ ರಾಜ್ಯದ ಮುಖ್ಯ ಕಾರ್ಯದರ್ಶಿಯವರೇ ಬರವಣಿಗೆಯಲ್ಲಿ ಬರೆದುಬಿಟ್ಟಿದ್ದಾರೆ. ನಾನು ಬರತಕ್ಕಂಥ ಅವಶ್ಯಕತೆ ಇಲ್ಲವೆಂದು ಅವರು ಬರೆದು ಬಿಟ್ಟಿದ್ದಾರೆ. ಹಾಗಾಗಿ ಇನ್ನು ಸಣ್ಣ ಅಧಿಕಾರಿಗಳನ್ನು ಮಾತನಾಡುವಂತೆಯೇ ಇಲ್ಲ. ಇವತ್ತಿನ ಪರಿಸ್ಥಿತಿ ನೋಡಿ, ಇವತ್ತು ಮೊದಲನೆಯ ದಿವಸ, ಬಹಳ ಮುಖ್ಯವಾದ ವಿಚಾರದ ಚರ್ಚೆ ನಡೆಯುತ್ತಿದೆ. ವಿರೋಧಪಕ್ಷದ ಮುಖಂಡರುಗಳು ಮಾತನಾಡುತ್ತಿದ್ದಾರೆ. ಆ ಇಲಾಖೆಗೆ ಸಂಬಂಧಪಟ್ಟಂಥ ಮಂತ್ರಿಯಾದರೂ ಇರಬೇಕಲ್ಲ? ನಾವು ಯಾರಿಗೆ ಹೇಳುವುದು? ವಿಚಾರವನ್ನು ಯಾರಿಗೆ ಹೇಳಬೇಕು? ಈಗ ಸಹಕಾರಿ ಸಚಿವರು ಬಂದರು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ಎರಡೂವರೆ ಗಂಟೆಗೆ ಸದನ ಸೇರಬೇಕಾಗಿತ್ತು, ಇವತ್ತು ಮೊದಲನೆಯ ದಿನ, ನಾವು ಕೋರಂಗೋಸ್ಕರ ಅರ್ಧ ಗಂಟೆ ಕಾದದ್ದಾಯಿತು. ಇದು ಒಳ್ಳೆಯ ಸೂಚನೆಯಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಇದು ಒಳ್ಳೆಯ ಸೂಚನೆಯಲ್ಲ. ಇದನ್ನು ಎಷ್ಟು ಸಲ ಹೇಳಬೇಕು. ಮಂತ್ರಿಗಳು ಎಷ್ಟೋಂದು ಜನರಿದ್ದಾರೆ. ಏನಾದರೂ ಸಮ್ಮಿಶ್ರ ಸರ್ಕಾರದಲ್ಲಿ ತೀವ್ರವಾದಂಥ ಗದ್ದಲ, ಗೊಂದಲ ಅಥವಾ ಏನಾದರೂ ಹೊಂದಾಣಿಕೆ ಸಾಮರಸ್ಯ ಇಲ್ಲದೇ ಇರತಕ್ಕದ್ದು, ಏನು ಪರಿಸ್ಥಿತಿಯಾಗಿದೆ. ಅದನ್ನಾದರೂ ಕೇಳಿದರೆ ಸಂತೋಷಪಡೋಣ. ನಾವು ಏನಾಗಿದೆಯೆಂದು, ಇಲ್ಲ. ಸದನವನ್ನಾದರೂ ಮುಂದೂಡಿ, ಮೊದಲನೆಯ ದಿವಸ, ನಮ್ಮ ಶಾಸಕರು ನಮ್ಮ ಜವಬ್ದಾರಿ ಏನು, ಶಾಸನ ಸಭೆ, ಶಾಸಕರ ಜವಾಬ್ದಾರಿ ಏನು, ಇಂಥ ಪ್ರಾಮುಖ್ಯವಾಗಿ ರೈತರ ಬಗ್ಗೆ ಚರ್ಚೆಯಾಗಿರುವುದು, ಇವತ್ತು ಮೊದಲನೆಯ ದಿವಸ ಇದೆ, ಬಡ್ಡಿ ಮನ್ನಾ ಮುಂದುವರೆಸತಕ್ಕ ಚರ್ಚೆ ನಡೆಯುತ್ತಿದೆ. ನಿಲುವಳಿ ಸೂಚನೆ ತಂದಿದ್ದಾರೆ. ಈ ಸಂದರ್ಭದಲ್ಲಿ ಯಾರಿಗೂ ಬೇಕಾಗಿಲ್ಲವೆಂದರೆ ಏನು ಪ್ರಶ್ನೆ ಇದು, ಎಲ್ಲಿದ್ದಾರೆ? ಸಚಿವರುಗಳು ಎಷ್ಟು ಜನರಿದ್ದಾರೆ. ತಾವು ಹೇಳಿ ದಯಮಾಡಿ, ಖಂಡಿತವಾಗಿ ನಾವು ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರಿ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯ ಮೂಲಕ ಇದನ್ನು ಪ್ರಸ್ತಾಪ ಮಾಡಿದಾಗ ಮುಂಜಾನೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಹಿರಿಯ ಸಚಿವರುಗಳು ಇಲ್ಲಿ ಕುಳಿತಿದ್ದೆವು. ಈಗ ಎರಡೂ ಮನೆ ನಡೆಯುತ್ತಿದೆ, ಕೆಲವು ಮಿನಿಸ್ಟರ್ಸ್ ಇಲ್ಲಿದ್ದಾರೆ, ಕೆಲವರು ಅಲ್ಲಿಗೆ ಹೋಗಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ನಾನು ಬಂದಿದ್ದೇನೆ, ತಾವು

ಹೇಳಿ reply debate ಗೆ ಏನೂ ಫಾರ್ಮರ್ಸ್ ಕನ್‌ಸರ್ನ್ಡ್ ಇದೆ, ಅದನ್ನು ನಾವೂ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :– ತಾವು ಬಂದಿದ್ದೀರಿ, ಬಂದಿಲ್ಲವೆಂದು ಹೇಳುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ :– ಸರ್ಕಾರಕ್ಕೆ ತೊಂದರೆ ಇಲ್ಲ. ಸರ್ಕಾರ ಸುಭದ್ರವಾಗಿದೆ, ಮುಂಜಾನೆಯಿಂದ ಎಲ್ಲಾ ಮಂತ್ರಿಗಳೂ ಸದನದಲ್ಲಿದ್ದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಮ್ಮನ್ನು ಉರುಳಿಸಲು ಅಲ್ಲ ನಾವು ಇಲ್ಲಿ ಇರುವುದು, ನೀವು ಸರ್ಕಾರ ನಡೆಸತಕ್ಕ ವಿಧಾನದ ಬಗ್ಗೆ ನಾವು ಮಾತನಾಡುತ್ತಿರುವುದು ಅಷ್ಟೆ. ನಿಮ್ಮ ಸರ್ಕಾರ ಇರಬೇಕೆಂದು ಬಯಸತಕ್ಕವರು. ನಿಮ್ಮ ಸರ್ಕಾರ ಭದ್ರವಾಗಿರಲಿ ಎಂದು ಆಸೆ ಪಡತಕ್ಕವರು, ನಮಗಂತೂ ಉರುಳಿಸತಕ್ಕ ಶಕ್ತಿ ಇಲ್ಲ. ಈಗ, ಅದಕ್ಕೋಸ್ಕರ ನೀವು ನಮ್ಮ ಮೇಲೆ ಸವಾರಿ ಮಾಡಲು ಬಂದಿದ್ದೀರೆಂದು ಕಾಣುತ್ತಿದೆ. ಏಕೆಂದರೆ ಇಲ್ಲಿ ಯಾರು ಉರುಳಿಸುವವರು ಇಲ್ಲ. ನಾವು ಉರುಳಿಸುವುದಿರಲಿ ನೀವೇ ಒಂದು ದಿವಸ ಉರುಳಿಸಿಕೊಳ್ಳುತ್ತೀರಿ. ನಿಮ್ಮ ಸರ್ಕಾರವನ್ನು ನೀವೇ ಉರುಳಿಸಿಕೊಂಡು ಬಿಡುತ್ತೀರಿ. ಅದು ಬೇರೆ ವಿಚಾರ, ಆದರೆ, ಎರಡೂವರೆಗೆ ಸದನ ಸೇರಬೇಕೆಂದು ಹೇಳೀ ಮೂರು ಗಂಟೆಯಾದರೂ ಕೋರಂ ಆಗಲಿಲ್ಲವೆಂದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :– ಮಾನ್ಯ ಉಪಾಧ್ಯಕ್ಷರೆ, ನಾವು ಈ ಕಾರ್ಯಕಲಾಪವನ್ನು ದೂರದರ್ಶನ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಲೈವ್ ತೋರಿಸಬೇಕೆಂದು ಚರ್ಚೆಯಾಗುತ್ತಿದೆ. ಮೊದಲನೆಯ ದಿವಸ, ಆಡಳಿತ ಪಕ್ಷದ ಸದಸ್ಯರು, ಅಧಿಕಾರಿಗಳ ಗ್ಯಾಲರಿಯನ್ನು ತೋರಿಸಿದರೆ ಈ ರಾಜ್ಯದ ಐದೂಕಾಲು ಕೋಟಿ ಜನರು ಏನು ತಿಳಿದುಕೊಳ್ಳಬೇಕು. ನಾವು ಚುನಾಯಿತ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆ.. ಸರ್ಕಾರ ಮಂತ್ರಿಮಂಡಲ ಇದೆ. ಹತ್ತಾರು ವಿಷಯಕ್ಕೆ ನಾವು ಯಾವುದೋ ಒಂದು ನಿಲುವಳಿ ಸೂಚನೆ ಕಳುಹಿಸಿ, ಅದಕ್ಕೆ ಸಂಬಂಧಪಟ್ಟ ಹತ್ತಾರು ವಿಷಯಗಳನ್ನು ಹೇಳಿದಾಗ ಸಂಬಂಧಪಟ್ಟ ಸಚಿವರ ಗಮನಕ್ಕೆ ಅದು ಹೋಗುತ್ತದೆ. ಅಧಿಕಾರಿಗಳ ಗಮನಕ್ಕೆ ಹೋಗುತ್ತದೆ. ಅದರ ಮೂಲಕ ರಾಜ್ಯದ ರೈತ ಸಮೂಹಕ್ಕೆ ಶ್ರೀ ಸಾಮಾನ್ಯನಿಗೆ ನ್ಯಾಯ ಸಿಗುತ್ತದೆ ಎಂದು ಇಲ್ಲಿ ಚರ್ಚೆ ಮಾಡುತ್ತೇವೆ. ಮೊದಲನೆಯ ದಿವಸವೇ, ಈ ರೀತಿ ನಾನು ಇದ್ದೇನೆ. ಅಧಿಕಾರಿಗಳು ಯಾರೋ ಒಬ್ಬಿಬ್ಬರು ಇದ್ದಾರೆ. ಈ ರೀತಿ ಏನಾದರೂ ನೀವೇ ಅದಕ್ಕೆ ಸಮಾಧಾನ ಮಾಡಿಕೊಳ್ಳುವುದಾದರೆ ಎಷ್ಟರಮಟ್ಟಿಗೆ ರಾಜ್ಯದ ಜನರು ನಮ್ಮ ನಿಮ್ಮ ಬಗ್ಗೆ ಯೋಜನೆ ಮಾಡಬಹುದು ಎಂಬ ಬಗ್ಗೆ ಸ್ವಲ್ಪ ಯೋಚನೆ ಮಾಡಿ. ಹತ್ತಾರು ಬಾರಿ ಇದನ್ನು ಪ್ರಸ್ತಾಪ ಮಾಡಿದ್ದೇವೆ. ಸ್ಪೀಕರ್‌ರವರು ಹೇಳಿದ್ದಾರೆ. ನೀವೆಯೇ ಅವರಿಗೆ ಸೂಚನೆ

ಕೊಡುತ್ತೇವೆ. ಮತ್ತೆ ಇದು ಮರುಕಳಿಸದಂತೆ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇವೆಂದು ಹೇಳಿದ್ದೀರಿ. ಇಷ್ಟೆಲ್ಲಾ ಆದ ಮೇಲೆ ಈ ವ್ಯವಸ್ಥೆಗಳು ಹೀಗೆಯೇ ಮುಂದುವರೆದರೆ ಮುಂದೆ ಎಲ್ಲಿ ಹೋಗಬಹುದು? ಬಹುಶಃ ಅಧಿಕಾರಿಗಳಿಗೆ ಯಾರದ್ದೂ ಭಯವಿಲ್ಲ. ನಾವು ಹೇಗೆ ಮಾಡಿದರೂ ನಡೆಯುತ್ತದೆ ಎನ್ನುವಂಥ ಪರಿಸ್ಥಿತಿಯಲ್ಲಿದ್ದಾರೆ. ಯಾವತ್ತೂ ಅಷ್ಟೆ. ಹಾಗೆ ನೋಡಿದರೆ ಸಮ್ಮಿಶ್ರ ಸರ್ಕಾರದ ಬಗ್ಗೆ. ಪ್ರತಿಪಕ್ಷದ ಬಗ್ಗೆ ಸ್ವಲ್ಪ ಭಯವಾದರೂ ಇರಬೇಕಾಗಿತ್ತು. ತಮಗೆ ಒಂದು ವಿಷಯವನ್ನು ಹೇಳಬಯಸುತ್ತೇನೆ ಮಾನ್ಯ ದೇಶಪಾಂಡೆಯವರೆ, ಇದು ಸಮಯ ಹೌದೋ ಅಲ್ಲವೋ ಗೊತ್ತಿಲ್ಲ. ಒಂದು ಪತ್ರಕ್ಕೂ ಅಧಿಕಾರಿಗಳಿಂದ ಇದುವರೆಗೆ ಉತ್ತರ ಕೇಳಲಿಲ್ಲ. ನಾವು ದೂರವಾಣಿಯ ಮೂಲಕ ಸಾರ್ವಜನಿಕ ವಿಷಯಕ್ಕೆ ಸಂಪರ್ಕ ಮಾಡಿದರೆ ಈಗ ಬಾ, ಆಗ ಬಾ, ಅಲ್ಲಿದ್ದಾರೆ. ಇಲ್ಲಿದ್ದಾರೆ ಮತ್ತೆ ಇನ್ನೊಂದು ಸಾರಿ ದೂರವಾಣಿಯಲ್ಲಿ ಸಂಪರ್ಕ ಮಾಡಿದಂಥ ಒಂದು ಉದಾಹರಣೆ ವಿರೋಧ ಪಕ್ಷದ ನಾಯಕನಾಗಿ ನನ್ನ ಅನುಭವಕ್ಕೆ ಬಂದಿಲ್ಲ. ಈ ಪರಿಸ್ಥಿತಿಗಳು ಆಗುತ್ತಾ ಹೋದರೆ, ತಮಗೂ ಅನುಭವವಿದೆ, ವಿರೋಧಪಕ್ಷದಲ್ಲಿ ಇದ್ದೀರಿ. ಇವತ್ತು ಆಡಳಿತ ಪಕ್ಷದಲ್ಲಿ ಇದ್ದೀರಿ. ಇದರ ಪರಿಣಾಮ ಏನಾಗುತ್ತದೆ ರಾಜ್ಯದ ಜನರ ಮೇಲೆ, ಇಷ್ಟೊಂದು ಜ್ವಲಂತ ಸಮಸ್ಯೆಗಳು, ನೂರಾರು ಜನರನ್ನು ಕಿತ್ತು ತಿನ್ನುತ್ತಿದೆ. ಈ ಸಮಯದಲ್ಲಿ ಈ ರೀತಿಯ ಅಟೆನ್‌ಡೆನ್ಸ್ ಇದೆ, ನಾನು ಇದ್ದೇನೆ. ನೀವು ಆ ಮನೆಗೆ ಹೋಗಿದ್ದೀರಿ ನಾವು ನೋಡಿದ್ದೇವೆ, ಆದರೆ ಉಳಿದವರಿಗೇನಾಗಿದೆ? ಇದು ಸರಿಯೇ? ವಾಪಸ್ ತಿರುಗಿ ನೋಡಿ ನಿಮ್ಮ ಬೆನ್ನ ಹಿಂದೆ, ಈ ಸದನ ನಡೆಸಬೇಕಾದದ್ದು ರೂಲಿಂಗ್ ಪಾರ್ಟಿಯ ನಿಮ್ಮ ಜವಾಬ್ದಾರಿ, ನಾವು ಹೀಗೆ ವಿರೋಧಪಕ್ಷದಲ್ಲಿ ಕುಳಿತುಕೊಂಡು ಈ ಸದನ ನಡೆಸತಕ್ಕ ದುಸ್ಥಿತಿಗೆ ನೀವು ಬಂದಿದ್ದೀರಾ ಎನ್ನುವುದಾದರೆ, ಇನ್ನು ಮೊದಲನೆಯ ದಿವಸವೇ ಆದರೆ ಮುಂದೆ ಏನಾಗಬಹುದು ತಾವು ಯೋಚನೆ ಮಾಡಿ. ಮಾನ್ಯ ಉಪಾಧ್ಯಕ್ಷರೆ, ತಾವು ಸರಿಯಾದ ಸೂಚನೆ ಕೊಡಲು ಪ್ರಯತ್ನ ಮಾಡಬೇಕೆಂದು ಅನ್ನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಬೆಳಿಗ್ಗೆ ಸಹ ನಾನು ಒಂದು ಬಹಳ ಪ್ರಮುಖವಾದ ಪ್ರಶ್ನೆಯನ್ನು ಇಲ್ಲಿ ಎತ್ತಿದ್ದೆ. ಮಾನ್ಯ ಸಿದ್ದರಾಮಯ್ಯನವರು, ಉಪಮುಖ್ಯಮಂತ್ರಿಗಳು ಬೆಳಿಗ್ಗೆಯಿಂದಲೂ ಬಂದಿಲ್ಲ. ಈಗ ಮಾನ್ಯ ಮಂಜುನಾಥ್‌ರವರು ಆ ಸದನದಲ್ಲಿದ್ದಾರೆಂದು ಹೇಳಿದರು. ಮತ್ತೆ ಮಾನ್ಯ ದೇಶಪಾಂಡೆಯವರೂ ಆ ಸದನದಲ್ಲಿದ್ದಾರೆಂದು ಹೇಳಿದರು. ಸಂತೋಷ. ಆದರೆ, ಈ ಸದನಕ್ಕೆ ಅವರು ಬೆಳಿಗ್ಗೆ ಬರಲೇಬೇಕಾಗಿತ್ತು. ಅವರು ಯಾವತ್ತೂ ಸದನಕ್ಕೆ ತಪ್ಪಿಸಿಕೊಳ್ಳತಕ್ಕವರಲ್ಲ. ಮತ್ತು ಸದನ ಹೊಸದಾಗಿ ಪ್ರಾರಂಭವಾದ ತಕ್ಷಣ ಪ್ರತಿ ದಿನ ಬಂದು ಕುಳಿತುಕೊಳ್ಳತಕ್ಕದ್ದು, ಮತ್ತು ಇವತ್ತು ಬಹಳ ಪ್ರಾಮುಖ್ಯವಾದ ವಿಚಾರವಿರುವಾಗ ಅವರು ಬಂದು

ಕುಳಿತುಕೊಳ್ಳುತ್ತಿದ್ದರು. ಇದರ ಬಗ್ಗೆ ನಾನು ಪ್ರಾರಂಭದಲ್ಲೇ ಹೇಳಿದಾಗ ಇಬ್ಬರೂ ಸಚಿವರು ಆ ಸದನದಲ್ಲಿದ್ದಾರೆಂದು ಹೇಳಿದರು. ಅಂದರೆ ಈ ಸದನಕ್ಕೆ ಅವರು ಏಕೆ ಬರಲಿಲ್ಲ? ಕಾರಣವೇನು? ಯಾರಾದರೂ ಹೇಳಬೇಕಲ್ಲ? ಅದರ ಬಗ್ಗೆ ಯಾರಾದರೂ ಪ್ರಾಮಾಣಿಕವಾಗಿ ಹೇಳಬೇಕಲ್ಲಾ? ಯಾರು ಇದರ ಬಗ್ಗೆ ಹೇಳಲು ತಯಾರಾಗಿಲ್ಲವೆಂದರೇನು? ಈ ಸದನಕ್ಕೆ ಬಾರದೆ ಇರಲು ಕಾರಣವೇನು? ಅವರ ಬಗ್ಗೆ ಬಹಳ ಗೌರವವನ್ನು ಇಟ್ಟುಕೊಂಡಿರುವ ನಾನು ಅವರು ಸದನಕ್ಕೆ ಬರಬೇಕು ಎಂದು ಅಪೇಕ್ಷೆ ಪಡುವವನು, ಅವರನ್ನು ನಾನು ಸ್ವಾಗತ ಮಾಡುತ್ತೇನೆ, ಅಂಥ ಒಳ್ಳೆಯ ರಾಜಕಾರಣಿ ಬರಬೇಕು, ಅದರ ಬಗ್ಗೆ ಎರಡನೆಯ ಅಭಿಪ್ರಾಯವಿಲ್ಲ. ಕಾರಣವೇನು? ಯಾವ ಉದ್ದೇಶಕ್ಕೋಸ್ಕರ ಹೊರಗಡೆ ಇದ್ದಾರೆ? ಸದನ ಇಲ್ಲದಿದ್ದರೆ ನನ್ನದೇನಿಲ್ಲ. ನೀವು ಸಚಿವ ಸಂಪುಟ ಸಭೆಗೆ ಬರದಿದ್ದರೂ ನನ್ನದೇನೂ ತಕರಾರು ಇಲ್ಲ. ಈ ಸದನ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಹಳ ಪ್ರಾಮುಖ್ಯ ಸಿದ್ದರಾಮಯ್ಯನವರು ಇಲ್ಲಿಗೆ ಬರಬೇಕು. ಆದರೆ ಅವರ ಸ್ನೇಹಿತರೆಲ್ಲಾ ಕೂತಿದ್ದಾರೆ. ನಮ್ಮ ಮಾನ್ಯ ಸಿಂಧ್ಯಾರವರು ಇದ್ದಾರೆ. ಸಂಧಾನಕ್ಕೋಸ್ಕರ ಒಂದು ವಾರದಿಂದ ಬಹಳ ಶ್ರಮಪಡುತ್ತಿರತಕ್ಕವರು, ಮಾನ್ಯ ಪ್ರಕಾಶ್‌ರವರು ಹಗಲೂ ರಾತ್ರಿ ಸಂಧಾನಕ್ಕೆ ಶ್ರಮ ಪಡುತ್ತಿರತಕ್ಕವರು, ಒಂದು ಗುಂಪು ವಿಶ್ವನಾಥ್, ರೇವಣ್ಣನವರು ಅವರನ್ನು ಕಾಂಗ್ರೆಸ್‌ಗೆ ಸೇರಿಸುವುದಕ್ಕೆ ದೆಹಲಿಯಲ್ಲಿ ಅವರದೊಂದು ಗುಂಪು, ಆದರೆ ಸಿದ್ಧರಾಮಯ್ಯನವರು ಏನೂ ಬಾಯಿ ಬಿಟ್ಟಿಲ್ಲ. ಈ ಸಂದರ್ಭದಲ್ಲಿ ಇಂಥ ಒಂದು ಪ್ರಕ್ಷುಬ್ಧವಾದ ಪರಿಸ್ಥಿತಿ ವಿಷಮವಾದ ಪರಿಸ್ಥಿತಿ ರಾಜ್ಯದಲ್ಲಿ ಉದ್ಭವವಾಗಿದೆ. ಇದು ಸಮ್ಮಿಶ್ರ ಸರ್ಕಾರದ ಮೇಲೆ ಪರಿಣಾಮ ಬೀರುತ್ತಿದೆ. ಆದ್ದರಿಂದ ಈ ಸದನ ಆರಂಭವಾದಾಗ ತಾವು ಏನಾದರೂ ಹೇಳಬೇಕು. ಏನಾದರೂ ಕೋಲಾರದ ಧ್ವನಿ ನಿಮಗೆ ಅಪಾಯವಾಗಿದೆಯೇ? ಪಕ್ಷದಲ್ಲಿ ಒಡಕಾಗಿದೆಯೇ? ಏನಾಗಿದೆ ಎನ್ನತಕ್ಕದ್ದನ್ನು ಹೇಳಬೇಕು, ಅಥವಾ ಅವರನ್ನು ಹೊರಕ್ಕೆ ಕಳುಹಿಸತಕ್ಕ ಪಿತೂರಿಯನ್ನೇನಾದರೂ ತಾವು ನಡೆಸಿದ್ದೀರಾ ಏನಾದರೂ ಒಂದು ಆಗಬೇಕಲ್ಲಾ ಈ ಸದನದ ಮುಂದೆ, ಈ ಸದನ ಬಹಳ ಪ್ರಾಮುಖ್ಯ. ಆದ್ದರಿಂದ ಮಾನ್ಯ ಸಿದ್ದರಾಮಯ್ಯನವರನ್ನು ನಾನು ಅತ್ಯಂತ ಕಳಕಳಿಯಿಂದ ಸ್ವಾಗತ ಮಾಡುತ್ತೇನೆ. ನಿಮ್ಮದು ಏನೇ ಭಿನ್ನಾಭಿಪ್ರಾಯಗಳಿದ್ದರೂ ಸದನಕ್ಕೆ ಬರಬೇಕೆಂದು ನಾನು ಅತ್ಯಂತ ಪ್ರೀತಿ ವಿಶ್ವಾಸದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇದು ಶೋಭೆ ತರತಕ್ಕದ್ದಲ್ಲ. ಇದರ ಬಗ್ಗೆ ಸರ್ಕಾರ ನೀವು, ಕಾಂಗ್ರೆಸ್‌ನವರಿದ್ದೀರಿ. ನಿಮಗೆ ಅದು ಸಂಬಂಧವಿಲ್ಲ. ಅವರಿಗೆ ಸಂಬಂಧ ಇರತಕ್ಕದ್ದು ಮತ್ತು ನೇರವಾಗಿ ಸಿಂಧ್ಯಾರವರಿಗೆ ಸಂಬಂಧವಿರತಕ್ಕದ್ದು, ಹೇಳಿ ಈ ಸದನದಲ್ಲಿ, ಹೇಳಿ ಏನು ಹೇಳುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಇವರ ಸಂಬಂಧ ಅವರಿಗೆ ಮಾತ್ರವಲ್ಲ ಇರುವುದು. ಅವರು ಈ ರಾಜ್ಯದ ಉಪಮುಖ್ಯಮಂತ್ರಿಗಳು, ಹಣಕಾಸು ಮಂತ್ರಿಗಳು, ಸಂವಿಧಾನ

ಬದ್ಧವಾಗಿ ರಚನೆಯಾಗಿರತಕ್ಕ ಮಂತ್ರಿಮಂಡಲದ ಸದಸ್ಯರು ಅವರು, ಅವರು ಒಬ್ಬರಿಗೆ ಸಂಬಂಧ ಇರಲು ಸಾಧ್ಯವಿಲ್ಲ. ಅದಕ್ಕಿಂತ ಬಹಳ ಮುಖ್ಯವಾಗಿ ಇವತ್ತಿನ ಅಜೆಂಡಾದಲ್ಲಿ ಅವರದ್ದೇ ಇರತಕ್ಕದ್ದು ಮೊದಲನೆಯದು ಕರ್ನಾಟಕ ಸರ್ಕಾರದ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸಬೇಕೆಂದು ಇರತಕ್ಕದ್ದು. ಅಜೆಂಡಾದಲ್ಲಿ ಇರತಕ್ಕದ್ದು ಮಾನ್ಯ ಸಿದ್ಧರಾಮಯ್ಯನವರದ್ದೇ. ಅವರೇ ಇವತ್ತು ಪತ್ತೆ ಇಲ್ಲ ಅದಕ್ಕೆ ನಾವು ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ :– ತಾವು ಹೇಳಿದ್ದು ಅಜೆಂಡಾದಲ್ಲಿ ಇದೆ. ಆದರೆ ಅದು ಇನ್ನೂ reach ಆಗಿಲ್ಲ. Adjournment motion move ಮಾಡಿದ್ದೀರಿ. ಅದು ಮುಗಿದು ಅಜೆಂಡಾ ಅಲ್ಲಿಗೆ reach ಆಗುವಷ್ಟರಲ್ಲಿ ಅವರು ಇಲ್ಲಿರುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಅಜೆಂಡಾ ರೀಚ್ ಆಗದಿದ್ದರೂ, ಅಜೆಂಡಾ ಪ್ರಕಾರ ಅವರು ಇಲ್ಲೇ ಇರಬೇಕಲ್ಲಾ ?

ಶ್ರೀ ಆರ್.ವಿ. ದೇಶಪಾಂಡೆ :– ಮಾನ್ಯ ಉಪ ಮುಖ್ಯಮಂತ್ರಿಗಳ ಬಗ್ಗೆ ನಾನು ಹೇಳಿದ್ದೇನೆ. ಅವರು ಮುಂಜಾನೆ ಮೇಲ್ಮನೆಯಲ್ಲಿದ್ದರು ಎಂದು ನನಗೆ information ಬಂದಿತ್ತು. ತಾವು ಹೇಳಿದಂತೆ, ಮಾನ್ಯ ಉಪ ಮುಖ್ಯಮಂತ್ರಿಗಳು ಅಜೆಂಡಾ ಬಂದಾಗ, ಅವರೇ ಇಲ್ಲಿದ್ದು ಅದನ್ನು ಮೂವ್ ಮಾಡಬೇಕಲ್ಲಾ? ಅವರೇ ಬಂದು ಅದನ್ನು ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ದೇಶಪಾಂಡೆಯವರೆ, ಅವರು ಮೇಲ್ಮನೆಯಲ್ಲು ಇಲ್ಲ. ಪಕ್ಕದ್ಮನೆಯಲ್ಲೂ ಇಲ್ಲ. ಅವರು ಯಾವ ಮನೆಯಲ್ಲೂ ಕಾಣುತ್ತಿಲ್ಲ. ನಾನು ನೋಡಿದ್ದೇನೆ. ನೀವೆಲ್ಲರೂ ಸೇರಿ ಎಲ್ಲೋ ಒಂದು ಕಡೆ ಏನೋ ಮುಚ್ಚಿಡುತ್ತಿದ್ದೀರಿ. ದಯವಿಟ್ಟು ಈ ಸದನಕ್ಕೆ ಈ ಸದನಕ್ಕೆ ಸತ್ಯ ಹೇಳಿ. ನಿಮ್ಮಲ್ಲಿ ಏನು ನಡೆದಿದೆ? ನಿಮ್ಮ ಸರ್ಕಾರದಲ್ಲಿ ಏನು ನಡೆದಿದೆ ?

ಶ್ರೀ ಆರ್. ವಿ. ದೇಶಪಾಂಡೆ :– ಮಾನ್ಯ ಸಿದ್ಧರಾಮಯ್ಯನವರನ್ನು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಮುಚ್ಚಿಡಲಿಕ್ಕಾಗುತ್ತದೆಯೇ? ಆಗುವುದಿಲ್ಲ. ಅದು ಸಾಧ್ಯವಿಲ್ಲ. ಅದು ಹೇಗೆ ಸಾಧ್ಯವಾಗುತ್ತದೆ ?

ಶ್ರೀ ವಾಟಾಳ್ ನಾಗರಾಜ್ :– ಅವರ ಮೇಲೆ ನನಗಿರುವ ಆಸೆ, ಪ್ರೀತಿ ಮತ್ತು ಅಭಿಮಾನದಿಂದ ಮಾನ್ಯ ಸಿದ್ಧರಾಮಯ್ಯನವರು ಸದನಕ್ಕೆ ಬರಬೇಕು ಎಂದು ನಾನು ಹೇಳುತ್ತಿದ್ದೇನೆ. ಈ ಸದನ ಯಾವುದೋ ಪಕ್ಷದ ಸದನವಲ್ಲ. ಅವರು ಯಾವುದಾದರೂ ಪಕ್ಷದ ಸಭೆಗೆ ಕರೆದಾಗ ಬಾರದೆ ಇರಲಿ. ಆದರೆ ಈ ಸದನ ಯಾವುದೇ ಪಕ್ಷಕ್ಕೆ ಸೇರಿದ್ದಲ್ಲ. ಆದುದರಿಂದ ಈ ಸದನಕ್ಕೆ ಬರುವುದನ್ನು ಯಾರು ಕೂಡ ತಪ್ಪಿಸಿಕೊಳ್ಳಬಾರದು ಎಂಬುದು

ನನ್ನ ವಾದ. ಈ ಬಗ್ಗೆ ಮಾನ್ಯ ಸಿಂಧ್ಯಾರವರು ಉತ್ತರ ಕೊಡಬೇಕು. ಕಳೆದ 3–4 ದಿವಸಗಳಿಂದ ನೀವು ಮತ್ತು ಮಾನ್ಯ ಪ್ರಕಾಶ್‌ರವರು ನಡೆಸುತ್ತಿರತಕ್ಕಂಥ ಸಂಧಾನದ ಬಗ್ಗೆ ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ನಿಮ್ಮ ಸಂಧಾನ ಮುರಿದು ಬಿತ್ತೇ ಅಥವಾ ಹೊಂದಾಣಿಕೆ ಆಯಿತೇ ಎಂಬುದನ್ನು ಸ್ವಲ್ಪ ದಯವಿಟ್ಟು ತಾವು ಸದನಕ್ಕೆ ತಿಳಿಸಬೇಕು. ಮಾನ್ಯ ಸಿಂಧ್ಯಾರವರೆ, ತಾವು ಏಕೆ ಮೌನವಾಗಿ ಕುಳಿತಿದ್ದೀರಿ? ದಯವಿಟ್ಟು ಮೌನ ಬೇಡ,

ಉಪಾಧ್ಯಕ್ಷರು :– ಮಾನ್ಯ ಮಾಧುಸ್ವಾಮಿಯವರೆ, ತಾವು ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಒಬ್ಬರೇ ಅಲ್ಲ. ಸಂವಿಧಾನ ಮತ್ತು ಪಾರ್ಲಿಮೆಂಟರಿ ಸಿಸ್ಟಮ್ ಅನ್ನು ಒಪ್ಪಿಕೊಂಡಿರುವಂತಹವರು, ಶಾಸನ ಸಭೆ ನಡೆಯಬೇಕಾದರೆ, ಘನತೆ ಗೌರವ ಇರುವಂತಹ ಸಚಿವರು ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಏನು ಮಾಡುತ್ತಿದ್ದೇವೆ? ಯಾವ ಕಾರಣಕ್ಕಾಗಿ ನಾವು ಇಲ್ಲಿ ಬರುವುದಕ್ಕಾಗುವುದಿಲ್ಲವೆಂದು ತಮಗಾದರೂ ಹೇಳಿ ಹೋಗಬೇಕು. ಇಡೀ ವ್ಯವಸ್ಥೆಯಲ್ಲಿ ಇದು ಶ್ರೇಷ್ಠವಾದಂತಹ ಮನೆ ಎಂಬುದು ಅವರ ತಲೆಯಲ್ಲಿ ಇರಬೇಕು. ಇಲ್ಲಿ ಮಾತನಾಡುವವರೆಲ್ಲಾ. ಏನೋ ಮಾತಿಗೋಸ್ಕರ ಬರುತ್ತಾರೆ. ಆಡಿಕೊಂಡು ಹೋಗುತ್ತಾರೆ. ಯಾರೋ ಬರೆದುಕೊಂಡು ಹೋಗುತ್ತಾರೆ. ಅದನ್ನು ನಾವು ಓದುತ್ತೇವೆ ಎನ್ನುವಂತಹ ಭಾವನೆ ಪಾರ್ಲಿಮೆಂಟರಿ ವ್ಯವಸ್ಥೆಗೆ ಗೌರವ ತರುವುದಿಲ್ಲ. ನಾನು ಮಾನ್ಯ ಸಿದ್ಧರಾಮಯ್ಯನವರ ಒಬ್ಬರ ಬಗ್ಗೆ ಮಾತ್ರ ಇಲ್ಲಿ ಮಾತನಾಡುತ್ತಿಲ್ಲ. 15 ದಿವಸಗಳ ಮೊದಲು ನೋಟೀಸ್ ಕೊಟ್ಟಿರುತ್ತಾರೆ. ಸಚಿವ ಸಂಪುಟ ಇಂತಹ ದಿವಸ ಶಾಸನ ಸಭೆ ನಡೆಯಬೇಕೆಂದು ನಿರ್ಣಯ ಮಾಡಿರುತ್ತದೆ. ಹೀಗಿರುವಾಗ ನಿಜವಾಗಿಯೂ ಯಾರಾದರೂ ಗೌರವಸ್ಥ ಮತ್ತು ಸ್ವಾಭಿಮಾನ ಇರುವಂತಹ ಮಂತ್ರಿಗಳು ಇದ್ದರೆ. ಅವರು ಇಲ್ಲಿಗೆ ಬಂದು ಕುಳಿತುಕೊಳ್ಳಬೇಕು. ಇಲ್ಲದಿದ್ದರೆ ಅವರು ರಾಜೀನಾಮೆ ಕೊಟ್ಟು ಹೋಗಬೇಕು. Tax payer ದುಡ್ಡಿನಲ್ಲಿ ಮೋಜು ಮಾಡುವುದಕ್ಕೆ ಇವರೆಲ್ಲ ಇಲ್ಲಿ ಮಂತ್ರಿಗಳಾಗುತ್ತಾರೆಯೇ Chief Whip ಎಲ್ಲಿದ್ದಾರೆ? ಅವರ ಕೆಲಸವೇನು? ವರ್ಷದಲ್ಲಿ 30–40 ದಿವಸಗಳ ಕಾಲ ಕೆಲಸ ಮಾಡುವುದಕ್ಕೆ. ವರ್ಷವೆಲ್ಲಾ ಅಡ್ಡಾಡುವಂತಹ ಅನುಕೂಲಗಳನ್ನೆಲ್ಲಾ ಇವತ್ತು ಸೃಷ್ಟಿ ಮಾಡಿ ಕೊಟ್ಟಿದ್ದೇವೆ. ಶಾಸನ ಸಭೆ ಆರಂಭವಾದರೂ ಇವತ್ತು ವಿಪ್‌ಗಳೇ ಸದನದಲ್ಲಿ ಇಲ್ಲವಲ್ಲಾ? ನಾವು ಯಾರಿಗೆ ಹೇಳಬೇಕು? ನಾವು ಇಲ್ಲಿ ನಾಲ್ಕು ಜನ ಅರ್ಧ ಗಂಟೆಗಳ ಕಾಲ ಕುಳಿತುಕೊಂಡು, ನೀವು assembly ಅನ್ನು start ಮಾಡುತ್ತೀರೋ, ಇಲ್ಲವೋ ಎಂದು ಕಾಯಬೇಕೇ? ಇದು ವಿರೋಧಪಕ್ಷದವರ ಕೆಲಸವೇ? ರೂಲಿಂಗ್ ಪಾರ್ಟಿಯವರಿಗೆ ತಾವು ಸದನಕ್ಕೆ ಬರಬೇಕೆಂಬ ಜವಾಬ್ದಾರಿ ಬೇಡವೇ? ತಾವು ಸದನಕ್ಕೆ ಬರಬೇಕು, ಒಂದು

ಕೋರಂ ಕೊಡಬೇಕು. ಶಾಸನ ಸಭೆಗಳಲ್ಲಿ ಸರಿಯಾದ ಸಮಯಕ್ಕೆ ಕಾರ್ಯಕಲಾಪಗಳು ಆರಂಭವಾಗುವಂತೆ ನೋಡಿಕೊಳ್ಳಬೇಕೆಂಬ ಜವಾಬ್ದಾರಿ ಅವರಿಗೆ ಇರಬೇಡವೇ? ಇದನ್ನೆಲ್ಲಾ ನಾವು ಕಾಡಿ, ಬೇಡಿ, ಅತ್ತು, ಗೋಗರೆದು ಮಾಡಿಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿದೆ. ಅದನ್ನು ನಾವು ಜನತೆಗೆ ಬಿಟ್ಟು ಬಿಡುತ್ತೇವೆ. ಏನೋ ನಮ್ಮ ಗ್ರಹಚಾರ. ಇದು ಏಕೆ ಈ ಸ್ಥಿತಿಗೆ ಬಂತೋ ಗೊತ್ತಿಲ್ಲ. ಅವರ ಆಂತರಿಕ ಕಲಹವೋ ಅಥವಾ ಇಡೀ ಶಾಸನ ಸಭೆಯ ವ್ಯವಸ್ಥೆಯ ಮೇಲೆಯೇ ನಂಬಿಕೆ ಹೋಗಿದೆಯೋ? ಇಲ್ಲಿಗೆ ಬರುವುದು ಟೈಮ್ ವೇಸ್ಟ್ ಎಂದು ಅವರು ಭಾವಿಸಿಕೊಂಡಿದ್ದಾರೋ? ಏನೋ ಗೊತ್ತಿಲ್ಲ. ನಾವು ನಮ್ಮ ಕಾರ್ಯವನ್ನು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಸಿಂಧ್ಯಾರವರೆ, ನಾವು ಇಷ್ಟು ಹೇಳಿದರೂ, ತಾವು ಇನ್ನೂ ಏಕೆ ಮೌನವಾಗಿ ಕುಳಿತ್ತಿದ್ದೀರಿ? ದಯವಿಟ್ಟು ಏನು ನಡೆದಿದೆ ಎಂಬುದನ್ನು ಹೇಳಿ....

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ....

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಪಾಟೀಲರು, ತಾವು ಕಾಂಗ್ರೆಸ್ ಪಕ್ಷದ ವಕ್ತಾರರು. ದಯವಿಟ್ಟು ತಮ್ಮ ವಕಾಲತ್ತು ಅವರಿಗೆ ಬೇಡಿ. ತಾವು ಯಾರ ಪಕ್ಷದ ಪರವಾಗಿ ವಕಾಲತ್ತು ಮಾಡುತ್ತಿದ್ದೀರೋ ಗೊತ್ತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :– ನಾನು ಉತ್ತರ ಹೇಳಲಿಕ್ಕೆ ಹೊರಟಿಲ್ಲ. ಈಗ ಒಳ್ಳೆಯ ವಿಷಯದ ಬಗ್ಗೆ ಚರ್ಚೆ ನಡೆದಿದೆ. ಮಾನ್ಯ ವಾಟಾಳ್‌ರವರು ಪ್ರಸ್ತಾಪಿಸಿರುವ ವಿಷಯಕ್ಕೆ ಬೇಕಾದರೆ ಒಂದಷ್ಟು ಟೈಮ್ ಕೊಟ್ಟು, ಅದರ ಮೇಲೆ ಬೇರೆ ಕಡೆ ಚರ್ಚೆಗೆ ಅವಕಾಶ ಮಾಡಿಕೊಡಿ. ಅದಕ್ಕೆ ನಾವು ಬೇಡ ಎನ್ನುವುದಿಲ್ಲ. ರೈತರ ಪರವಾದಂತಹ ಚರ್ಚೆ ನಡೆದಿದೆ. ದಯವಿಟ್ಟು ಅದನ್ನು ಪ್ರಾರಂಭ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾವು ಚರ್ಚೆಯನ್ನು ಪ್ರಾರಂಭ ಮಾಡುತ್ತೇವೆ. ಅದನ್ನು ಕೇಳಲಿಕ್ಕೆ ಯಾರೂ ಇಲ್ಲವೆಂದೇ ನಾವು ಹೇಳುತ್ತಿದ್ದೇವೆ.

ಶ್ರೀ ಆರ್. ರಾಮಲಿಂಗಾರೆಡ್ಡಿ :– ನಾವು ಇಲ್ಲೇ ಇದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ರಾಮಲಿಂಗಾರೆಡ್ಡಿಯವರೆ, ತಾವು ಬೆಳಿಗ್ಗೆಯಿಂದ ಈ ಕಡೆಯೇ ತಲೆ ಹಾಕಿಲ್ಲ. ತಾವು ಈಗ ತಾನೇ ಬಂದು ನಾವು ಇಲ್ಲೇ ಇದ್ದೇವೆ ಎಂದು ಹೇಳಿದರೆ ಹೇಗೆ? ಮಾನ್ಯ ಕೃಷಿ ಮಂತ್ರಿಗಳೂ ಸಹ ಈಗ ಬರುತ್ತಿದ್ದಾರೆ. ಮಾನ್ಯ ಕೃಷಿ

ಮಂತ್ರಿಗಳು ತಾವು ರೈತರ ಪರವಾಗಿದ್ದೇವೆಂದು ಹೇಳುತ್ತಾರೆ. ಆದರೆ ರೈತರ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಅವರು ಮುಕ್ಕಾಲು ಗಂಟೆ ತಡವಾಗಿ ಬಂದಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ :– ಈಗ ಬಡ್ಡಿ ಮನ್ನಾ ಮಾಡುವ ಬಗ್ಗೆ ಚರ್ಚೆಯಾಗುತ್ತಿದೆ. ಅದಕ್ಕೆ ಮಾನ್ಯ ಸಹಕಾರ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಸಚಿವರೆ, ಕೃಷಿ ಸಾಲದ ಮೇಲಿನ ಬಡ್ಡಿ ಮನ್ನಾ ವಿಷಯವಿದು.

ಉಪಾಧ್ಯಕ್ಷರು :– ಮಾನ್ಯ ಶ್ರೀರಾಮರೆಡ್ಡಿಯವರೆ, ಈಗ ಎಲ್ಲರೂ ಬಂದಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಕೃಷಿ ಸಚಿವರೆ, ಹಿಂದೆ ಇದರ ಬಗ್ಗೆ ನೀವು ಹತ್ತು ಸಲ ಎದ್ದು ನಿಂತು ಉತ್ತರ ನೀಡಿದ್ದೀರಿ, ಆದರೆ ಈಗ ಅದಕ್ಕೂ ನನಗೂ ಸಂಬಂಧವಿಲ್ಲವೆಂದು ಹೇಳುತ್ತಿದ್ದೀರಲ್ಲಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಇತರ ಗೌರವಾನ್ವಿತ ಸದಸ್ಯರು ಪ್ರಸ್ಥಾಪಿಸಿರತಕ್ಕಂತಹ ವಿಚಾರದಲ್ಲಿ ಸತ್ಯಾಂಶ ಇದೆ. 2:30 ಗಂಟೆಗೆ ಸದನ ಸೇರಬೇಕಾಗಿತ್ತು. ಮಂತ್ರಿಗಳು ಬರುವುದರಲ್ಲಿ ಸ್ವಲ್ಪ ತಡವಾಗಿದೆ. ಅಧಿಕಾರಿಗಳೂ ಸಹಿತ ಸಮಯಕ್ಕೆ ಸರಿಯಾಗಿ ಬರಬೇಕಾಗಿತ್ತು. ಅವರು ಇನ್ನೂ ಬಂದಿಲ್ಲ. ಅವರಿಗೆ ಬರುವುದಕ್ಕೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ನೋಡಿ, ತಾವು ಮಾನ್ಯ ಸಿದ್ಧರಾಮಯ್ಯನವರ ಬಗ್ಗೆ ಪ್ರಸ್ತಾಪಿಸುತ್ತಿದ್ದಂತೆ ಅವರೇ ಸದನಕ್ಕೆ ಬರುತ್ತಿದ್ದಾರೆ. ಇದಕ್ಕೆಲ್ಲಾ ಉತ್ತರ ಅವರ ಬರುವಿಕೆಯಿಂದಲೇ ಸಿಕ್ಕಿದೆ. ಇಷ್ಟೋತ್ತು ಅವರು ವಿಧಾನ ಪರಿಷತ್ತಿನಲ್ಲಿ ಉತ್ತರವನ್ನು ಕೊಡುತ್ತಿದ್ದರು. ಅವರು ಅಲ್ಲಿ ಉತ್ತರವನ್ನು ಕೊಟ್ಟು ಈಗ ತಾನೇ ವಿಧಾನ ಸಭೆಗೆ ಬಂದಿದ್ದಾರೆ. ತಾವು ಅವರನ್ನು ಸ್ವಾಗತ ಮಾಡಿ, ನಾವೂ ಅವರನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಸಿಂಧ್ಯಾರವರು ಮಾತನಾಡುವಾಗ ಮಾನ್ಯ ವಾಟಾಳ್ ನಾಗರಾಜ್ ಮತ್ತು ಮಾನ್ಯ ವಿರೋಧ ಪಕ್ಷದ ಇತರ ನಾಯಕರು ಮಾತನಾಡಿರುವುದರಲ್ಲಿ ಸತ್ಯಾಂಶ ಇದೆ ಎಂದು ಹೇಳಿದರು. ಮಾನ್ಯ ವಾಟಾಳ್‌ರವರು ಹೇಳಿರುವುರು ಸತ್ಯಾಂಶದಿಂದ ಕೂಡಿದೆ ಎನ್ನುವುದಾದರೆ, ಇವರಲ್ಲಿ ಬಿಕ್ಕಟ್ಟು ಇರುವುದು ಸತ್ಯವೆಂದು ಅವರು ಒಪ್ಪಿಕೊಂಡಂತಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಮಂಜುನಾಥ್‌ರವರು ಬೆಳಿಗ್ಗೆಯೇ ಒಪ್ಪಿದ್ದಾರೆ. ನೀವು ಈಗ ಕೇಳುತ್ತಿದ್ದೀರಲ್ಲಾ?

ಉಪಾಧ್ಯಕ್ಷರು :- ಮಾನ್ಯ ಸಿದ್ಧರಾಮಯ್ಯನವರು ಬೇಕು ಎಂದು ಕೇಳಿದ್ದು ಮಾನ್ಯ ವಾಟಾಳ್ ನಾಗರಾಜ್‌ರವರು ಮಾತ್ರ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಮ್ಮೆಲ್ಲರ ಪರವಾಗಿ ಮಾನ್ಯ ವಾಟಾಳ್‌ರವರು ಕೇಳಿದರು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಸಿದ್ದರಾಮಯ್ಯನವರು ಸದನಕ್ಕೆ ಬಂದಿದ್ದು ಬಹಳ ಒಳ್ಳೆಯದಾಯಿತು. ಬಹಳ ಸಂತೋಷ. ನೀವು ಏಕೆ ಸದನಕ್ಕೆ ಬರಲಿಲ್ಲ ಎಂಬ ವಿಷಯವೇ ನಮ್ಮಲ್ಲಿ ತೀವ್ರ ಸಂಶಯಕ್ಕೆ ಎಡೆಮಾಡಿಕೊಟ್ಟಿತ್ತು. ಒಂದು ವಾರದಿಂದ ನಡೆಯುತ್ತಿರುವ ಘಟನೆಗಳಿಗೆ ಸರಿಯಾಗಿ ಇದು ನಮ್ಮಲ್ಲಿ ಭಾರಿ ಸಂಶಯವನ್ನು ಹುಟ್ಟು ಹಾಕಿತ್ತು. ತಮ್ಮನ್ನು ಸನದಕ್ಕೆ ನಾವು ಸ್ವಾಗತ ಮಾಡುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ :- ಯಾವಾಗಲೂ ನನ್ನ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಈ ತರಹದ್ದೇ ಕಳಕಳಿಯನ್ನು ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ಅವರಿಗೆ ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರೂ ಸಹ ನನ್ನ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದಾರೆ. ನಾನು ಕೌನ್ಸಿಲ್‌ನಲ್ಲಿ ಇದ್ದಾಗಲೇ, ತಾವಿಬ್ಬರೂ ಮಾತನಾಡುವುದು ನನಗೆ ಅಲ್ಲಿ ಕೇಳಿಸುತ್ತಿತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಬೆಳಿಗ್ಗೆಯಿಂದ ತಾವು ಸದನಕ್ಕೆ ಬರಲಿಲ್ಲ ಎಂಬ ಬಗ್ಗೆ ನಾವು ಕೇಳುತ್ತಿದ್ದರೆ, ನೀವು ಈ ರೀತಿ ಹೇಳುತ್ತೀರಲ್ಲಾ ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವು ಆ ಮಾತನ್ನು ಹೇಳಿದಾಗ, ಕೌನ್ಸಿಲ್ ಅಲ್ಲಿ ಸೇರಿರಲೇ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಬೆಳಿಗ್ಗೆಯಿಂದ ಮಾನ್ಯ ಸಿದ್ಧರಾಮಯ್ಯನವರು ಎಲ್ಲಿ ಎಂದು ನಾವು ಹುಡುಕುತ್ತಿದ್ದರೆ, ನೀವು ಈಗ ಇಲ್ಲಿಗೆ ಬಂದು ಹೀಗೆ ಹೇಳಿದರೆ ಹೇಗೆ?

ಶ್ರೀ ಸಿದ್ಧರಾಮಯ್ಯ :- ನೀವು ಹೇಳುವುದು ಇನ್ನೂ ಏನಾದರೂ ಇದೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾವು ಗಾಬರಿಯಾಗಿ ಬೆಳಿಗ್ಗೆಯಿಂದ ನಿಮಗಾಗಿ ಹುಡುಕುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಶ್ರೀರಾಮರೆಡ್ಡಿಯವರು ಗಾಬರಿ ಆಗಬೇಕಾದಂತಹದ್ದು ಏನು ಇಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಕರ್ನಾಟಕದಲ್ಲಿ

ಬಿರುಗಾಳಿಯೇ ಎದ್ದು ಬಿಟ್ಟಿದೆ ಎಂದು ಹೇಳಿದರು. ಇಲ್ಲಿ ಬಿರುಗಾಳಿಯೇ ಇಲ್ಲ. ಬಿರುಗಾಳಿಯಾದರೂ ಬಂದರೆ ಮಳೆ ಚನ್ನಾಗಿ ಬರುತ್ತದೆ ಆದರೆ, ಅದು ಬರುತ್ತಿಲ್ಲ. ಬಿರುಗಾಳಿಯೂ ಇಲ್ಲ, ಯಾವ ಗಾಳಿಯೂ ಇಲ್ಲ. ಆದ್ದರಿಂದ, ಅದರ ಬಗ್ಗೆ ನೀವು ಆಷ್ಟೊಂದು ಆತಂಕ ಪಟ್ಟುಕೊಳ್ಳತಕ್ಕಂಥದ್ದು, ಭಯ ಪಟ್ಟುಕೊಳ್ಳತಕ್ಕಂಥದ್ದು, ಸಂಶಯ ಪಟ್ಟುಕೊಳ್ಳತಕ್ಕಂಥದ್ದು, ಹೆದರಿಕೊಳ್ಳತಕ್ಕಂಥದ್ದು ಯಾವುದೂ ಮಾಡಬೇಕಾದಂತಹ ಅಗತ್ಯ ಇಲ್ಲ. ಈಗ ಆಷಾಢ ಗಾಳಿ ಪ್ರಾರಂಭವಾಗುತ್ತಿದೆ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಬಿರುಗಾಳಿಯನ್ನು ಸೃಷ್ಟಿ ಮಾಡಬೇಡಿ ಎಂದಷ್ಟೇ ನಾವು ನಿಮಗೆ ಹೇಳುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ :- ಯಾವುದೂ ಇಲ್ಲ. ನನ್ನ ವೈಯಕ್ತಿಕ ರಾಜಕೀಯದ ಬಗ್ಗೆ ನೀವೆಲ್ಲಾ ಇಷ್ಟೊಂದು ಕಾಳಜಿ ವಹಿಸಿದ್ದೀರಲ್ಲಾ. ಅದಕ್ಕೋಸ್ಕರ ನಿಮಗೆಲ್ಲಾ ನನ್ನ ಅಭಿನಂದನೆಗಳು, ಬಹಳ ಸಂತೋಷ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಸದನ ಪ್ರಾರಂಭವಾದಾಗಲೇ ನಾವು ನಿಮಗೆ ಧನ್ಯವಾದಗಳನ್ನು ಹೇಳಿದ್ದೆವು.

ಶ್ರೀ ಸಿದ್ಧರಾಮಯ್ಯ :- ಸರ್ಕಾರಕ್ಕೆ ಯಾವುದೇ ತೊಂದರೆಗಳಿಲ್ಲ. ಸಾರ್ವಜನಿಕವಾಗಿ ಯಾವುದೇ ತೊಂದರೆಗಳಿಲ್ಲ. ಆದ್ದರಿಂದ ಯಾವುದೇ ಆತಂಕ ಪಟ್ಟುಕೊಳ್ಳಬೇಕಾದಂತಹ ಅಗತ್ಯ ಇಲ್ಲ. ಈಗ ಯಾವುದೋ ಒಂದು ವಿಚಾರದ ಬಗ್ಗೆ ತಾವು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ. ಕೌನ್ಸಿಲ್‌ನಲ್ಲಿ ಇವತ್ತು ನನಗೆ ಸಂಬಂಧಪಟ್ಟಂತಹ ಪ್ರಶ್ನೆಗಳಿಗೆ ಉತ್ತರ ಕೊಡುವುದಿತ್ತು. ಇಲ್ಲಿಯವರೆಗೂ ಅಲ್ಲಿದ್ದೆ. ನೀವು ಬಹಳ ನನ್ನ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದ್ದೀರಿ ಎಂದು ತಿಳಿದು ಬಂದ ಮೇಲೆ, ನಾನು ಊಟವನ್ನೂ ಸಹ ಮಾಡದೆ ಇಲ್ಲಿಗೆ ಓಡಿ ಬಂದೆ. ನಿಮ್ಮ ಆತಂಕವನ್ನು ನಿವಾರಣೆ ಮಾಡುವ ಸಲುವಾಗಿ ನಾನು ಇಲ್ಲಿಗೆ ಬಂದೆ.

ಶ್ರೀ ಅಂಜನ ಮೂರ್ತಿ :- ನಿಮ್ಮ ಬಗ್ಗೆ ಕೇವಲ ಆತಂಕವಲ್ಲ. ಪ್ರೀತಿಯೂ ಕೂಡ ಇದೆ.

ಶ್ರೀ ಸಿದ್ಧರಾಮಯ್ಯ : ನನ್ನ ಬಗ್ಗೆ ಅವರಿಗೆ ಬಹಳ ಅಭಿಮಾನ ಇದೆ, ಪ್ರೀತಿ ಇದೆ, ವಿಶ್ವಾಸ ಇದೆ. ಸ್ನೇಹ ಇದೆ ಎಲ್ಲಾ ಇದೆ. ಆ ಕಾರಣಕ್ಕೋಸ್ಕರವೇ ಯಾರಿಗೆ ಪ್ರೀತಿ ಮತ್ತು ವಿಶ್ವಾಸ ಇರುತ್ತದೋ, ಅವರಿಗೆ ಯಾವಾಗಲೂ tension ಆಗುತ್ತಿರುತ್ತದೆ. ಇನ್ನು ಮೇಲೆ ಆ ಸಂಶಯವನ್ನು ಇಟ್ಟುಕೊಳ್ಳಬೇಕಾದಂತಹ ಅಗತ್ಯ ಇಲ್ಲ. ನಿಮ್ಮ ಎದುರಿಗೆ ನಾನು ಕಲ್ಲು ಗುಂಡಿನಂತೆ ನಿಂತಿರುವುದರಿಂದ..

ಶ್ರೀ ವಾಟಾಳ್ ನಾಗರಾಜ್ :– ನೀವು ಒಳ್ಳೆಯ ಉತ್ತರವನ್ನೇ ಕೊಟ್ಟಿರಿ. ನಿಮ್ಮಿಂದ ನನಗೆ ಇದೇ ಉತ್ತರದ ನಿರೀಕ್ಷಣೆ ಇತ್ತು. 'ನಾನು ಕಲ್ಲು ಗುಂಡಿನಂತೆ ಇದ್ದೇನೆ' ಎನ್ನುವ ಉತ್ತರ ಬರಲಿ ಎಂದು ನಾನು ಕಾದಿದ್ದೆ, ಅದು ಬಂತು, ಒಳ್ಳೆಯದೇ ಆಯಿತು.

ಶ್ರೀ ಸಿದ್ಧರಾಮಯ್ಯ :– ನಿಮ್ಮ ಊರಿನ ಗಾದೆಯನ್ನೇ ನಾನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಯಾರೂ ಕೂಡ ನನ್ನ ಬಗ್ಗೆ ಸಂಶಯ ಇಟ್ಟುಕೊಳ್ಳಬೇಕಾಗಿಲ್ಲ. ಮಾನ್ಯ ಉಪಾಧ್ಯಕ್ಷರೆ, ಈ ಬಡ್ಡಿ ಮನ್ನಾ, ಸುಸ್ತಿ ಬಡ್ಡಿ ಮನ್ನಾ ಮಾಡುವುದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾವು ಇನ್ನೂ ಅದರ ಬಗ್ಗೆ ಮಾತನಾಡುತ್ತಲೇ ಇದ್ದೇವೆ.

ಶ್ರೀ ಸಿದ್ಧರಾಮಯ್ಯ :– ತಾವು ಇನ್ನೂ ಮಾತನಾಡುತ್ತಿದ್ದೀರಾ? ಹಾಗಾದರೆ ಅದನ್ನು ಮುಂದುವರೆಸಿ.

ಉಪಾಧ್ಯಕ್ಷರು :– ಮಾನ್ಯ ಮಾಧುಸ್ವಾಮಿಯವರೆ, ತಾವು ಚರ್ಚೆಯನ್ನು ಬೇಗ ಮುಗಿಸಿ ಬಿಟ್ಟರೆ, ಅದಕ್ಕೆ ಅವರು ಈಗಲೇ ಉತ್ತರವನ್ನೂ ಸಹ ಕೊಟ್ಟು ಬಿಡುತ್ತಾರೆ. ವಿಷಯ ಅರ್ಜೆಂಟ್ ಇರುವುದರಿಂದ ಅದರ ಬಗ್ಗೆ ಅವರು ಇವತ್ತೇ ಉತ್ತರ ಕೊಟ್ಟು ಬಿಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇವತ್ತು ಅದರ ಬಗ್ಗೆ ಅವರು ಉತ್ತರ ಕೊಡಲೇಬೇಕು ಎಂಬ ಕಾರಣಕ್ಕಾಗಿಯೇ ನಾವು ಈ ವಿಷಯವನ್ನು adjournment motion ಅಡಿಯಲ್ಲಿ ಪ್ರಸ್ತಾಪಿಸಿದ್ದೇವೆ.

ಶ್ರೀ ಸಿದ್ಧರಾಮಯ್ಯ :– ಅದು adjournment motion ಅಡಿಯಲ್ಲಿ ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅದು ಏಕೆ ಬರುವುದಿಲ್ಲ ?

ಶ್ರೀ ಸಿದ್ಧರಾಮಯ್ಯ :– ನೀವು ಪ್ರಸ್ತಾಪಿಸಿದ್ದರಲ್ಲಿ ಸಾರ್ವಜನಿಕರ ಹಿತದೃಷ್ಟಿ ಇರಬಹುದು. But ಅದು adjournment motion ವ್ಯಾಪ್ತಿಗೆ ಬರುವುದಿಲ್ಲ. This is a committed programme. ಇದು ಬಜೆಟ್‌ನಲ್ಲಿ ಒಪ್ಪಿಗೆ ಆಗಿರುವಂತಾದ್ದು. 'ಜೂನ್ ಒಳಗೆ ಅಸಲು ಕಟ್ಟಿದರೆ, ನಾವು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆ' ಎಂದು ಹೇಳಿರುವುದು ಅಸೆಂಬ್ಲಿಯಲ್ಲಿ ಅಪ್ರೂವ್ ಆಗಿದೆ'. ಇದು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರತಕ್ಕಂಥದ್ದು ಆಗಿದೆ. ಯಾವ ಒಂದು benefit ಇದೆಯೋ ಅದನ್ನು extend ಮಾಡುವ ಸಲುವಾಗಿ ತಾವು ಇದನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಇದು adjournment motion ವ್ಯಾಪ್ತಿಯೊಳಗೆ ಬರುತ್ತದೆಂದು ನನಗಂತೂ ಅನಿಸುತ್ತಿಲ್ಲ.

ಉಪಾಧ್ಯಕ್ಷರು :- ನಿಯಮ 69ರ ಅಡಿಯಲ್ಲಿ ಅವರು ಸದರಿ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅದೆಲ್ಲಾ ಮುಗಿದು, ನಾವು ಸಭಾಧ್ಯಕ್ಷರಿಗೆ ಕನ್‌ವಿನ್ಸ್ ಮಾಡಿ ಚರ್ಚೆಗೆ ನಿಂತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೆ, ಈ ಚರ್ಚೆ ಆದಾಗ ತಾವು ಹಣಕಾಸಿನ ಸಚಿವರಾಗಿ ಇದ್ದಿದ್ದರೆ, ಯಾವ ಹಿನ್ನೆಲೆಯಲ್ಲಿ ಇದಕ್ಕೆ ನಾವು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುತ್ತಿದ್ದೇವೆ ಎಂದು ತಿಳಿಯುತ್ತಿತ್ತು. ಎರಡು ವಿಷಯಗಳ ಬಗ್ಗೆ ಮಾತ್ರ ನಾನು ಮಾತನಾಡಿದ್ದೇವೆ. ಒಂದು ಸುಮಾರು 10–12 ಜಿಲ್ಲೆಗಳಲ್ಲಿ ಮಳೆ ಇಲ್ಲದೆ ಬಿತ್ತನೆ ಕೆಲಸ ಪ್ರಾರಂಭವಾಗಿಲ್ಲ. ಭೂಮಿಯನ್ನು ಕೃಷಿಗೆ ಸಿದ್ಧತೆ ಮಾಡುವುದಕ್ಕೆ ಆಗಲಿಲ್ಲ. ಗುಲ್ಬರ್ಗ್ ಇರಬಹುದು. ದಾವಣಗೆರೆ ಇರಬಹುದು, ಚಿತ್ರದುರ್ಗ ಇರಬಹುದು, ಬಳ್ಳಾರಿ ಇರಬಹುದು ಅಥವಾ ಕೋಲಾರ ಇರಬಹುದು. ಇಂತಹ ಸಮಯದಲ್ಲಿ ಈ ಅವಧಿಯನ್ನು ಮುಂದಿನ ಮಾರ್ಚ್‌ವರೆಗೆ ವಿಸ್ತರಣೆ ಮಾಡದೆ ಇದ್ದರೆ ಕೃಷಿ ಕಾರ್ಯಕ್ಕಾಗಿ ಅವನು ಸಾಲಸೂಲ ಮಾಡಿ ಗೊಬ್ಬರಕ್ಕೆ ಪರದಾಡಬೇಕಾದರೆ ಸಾಲ ಕಟ್ಟುವುದಕ್ಕಾಗುವುದಿಲ್ಲ. ಯಾರಿಗೆ ಶಕ್ತಿ ಇದೆ ಅವರು ಇವತ್ತಿನವರೆಗೆ ಪ್ರಾಮಾಣಿಕವಾಗಿ ಸಾಲ ಕಟ್ಟುತ್ತಿದ್ದಾರೆ. ಈ ಸವಲತ್ತು ವಿಸ್ತರಣೆ ಆಗುತ್ತದೋ, ಇಲ್ಲವೋ ಎನ್ನುವ ಭಯ ಇದ್ದರೂ ಸಹ ಕಟ್ಟುವುದಕ್ಕಾಗಲಿಲ್ಲ ಎಂದರೆ ದುಸ್ಥಿತಿಯಲ್ಲಿ ಆ ರೈತನಿದ್ದಾನೆ. ಅವನಿಗ ಏನೋ ಭಿಕ್ಷೆ ಕೊಟ್ಟ ಹಾಗೆ ವಿಸ್ತರಣೆ ಮಾಡಿದರೆ ಇದರಿಂದ ಏನೂ ಲಾಭವಾಗುವುದಿಲ್ಲ. ಇದು ಒಂದು, ಎರಡನೆಯದು ಈ ವರ್ಷ 2004 – 05ಕ್ಕೆ ಇದನ್ನು ಅನ್ವಯ ಮಾಡಬೇಕೆಂದು ಕೇಳಿದ್ದೇವೆ, ರಾಷ್ಟ್ರೀಕೃತ ಬ್ಯಾಂಕುಗಳ ಬಗ್ಗೆ ಬಹಳ ದೊಡ್ಡ ಚರ್ಚೆಯಾಗುತ್ತಿದೆ. ಅದಕ್ಕೆ ಒಂದು ಸರ್ವಾನುಮತದ ನಿರ್ಣಯ ಮಾಡಿ ಕಳುಹಿಸಬೇಕು. ಮೊನ್ನೆ ಪ್ರಧಾನಿಯವರು ಕರೆದಿದ್ದ ಸಭೆಯಲ್ಲಿ ನೀವೂ ಇದ್ದಿರಿ. ಗಂಭೀರವಾಗಿ ಆ ವಿಷಯ ಪ್ರಸ್ತಾಪ ಮಾಡಬೇಕಾಗಿತ್ತು. ನಮ್ಮ ರಾಜ್ಯದ ರೈತರಿಗೆ ಬರಗಾಲದ ನೆರವು ಸತತವಾಗಿ ಸಿಗಬೇಕಾಗಿದೆ. ಎಲ್ಲಾ ಸಂಗತಿಗಳು ಅಲ್ಲಿ ಪ್ರಸ್ತಾಪ ಆಗಿವೆ. ನಾವು ಏನು ಪ್ರಸ್ತಾಪ ಮಾಡಿದ್ದೇವೆಂದು ನೋಡಿ, ಕೇವಲ ಈ ಅವಧಿಯನ್ನು ವಿಸ್ತರಣೆ ಮಾಡಬೇಕೆಂದು ಅಷ್ಟೇ ಅಲ್ಲ, ಅದು ಒಂದು ಭಾಗ ಮಾತ್ರ. ಇನ್ನೂ ಉಳಿದ ಹತ್ತಾರು ವಿಷಯಗಳನ್ನು ಮಾತನಾಡಿದ್ದೇವೆ. ಅವೆಲ್ಲಾ ನೋಡಿ ಪರಿಹಾರ ಕೊಡಿಸುವ ವ್ಯವಸ್ಥೆ ಆಗಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ನಾನು ಸನ್ಮಾನ್ಯ ಹಣಕಾಸಿನ ಸಚಿವರಿಗೆ ಎರಡು ನಿಮಿಷದಲ್ಲಿ ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಾಸ್ತವವಾಗಿ ನಾವು ಸಾಲ ತಿರಿಸಬೇಕೆಂದು ಇದ್ದರೂ ನಮಗೆ ಸಾಧ್ಯವಾಗುತ್ತಿಲ್ಲ. ಯಾವುದೇ ಬೆಳೆ ಇವತ್ತು ಮಾರುಕಟ್ಟೆಗೆ ಕಳುಹಿಸುವ ಸ್ಥಿತಿ ರೈತರಿಗೆ ಇಲ್ಲ. ಸಾಲ ಕೂಡ ಎಲ್ಲಿಯೂ ಹುಟ್ಟುತ್ತಿಲ್ಲ. ಈ ಸಾಲ ತೀರಿಸಬೇಕೆಂದರೆ ಇನ್ನೊಂದು ಕಡೆಯಿಂದ ಸಾಲ ತಂದು ಕೊಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕೆಂದು ನಾನು ಬೆಳಿಗ್ಗೆ ಮಾತನಾಡುವಾಗ ಹೇಳಿದೆ. ಅವರು ಸರ್ಕ್ಯುಲರ್ ಕೊಡಬೇಕಾದರೆ ಇವರು ಸಾಲ ಏನಾದರೂ ತೀರಿಸಬೇಕು ಎನ್ನುವ ಪರಿಸ್ಥಿತಿ ತಂದು ಕೊಳ್ಳಬೇಕೆಂದರೂ ಕೂಡ ಒಂದೇ ಒಂದು ರೂಪಾಯಿ ಎಲ್ಲೂ ಕೂಡ ಹೊರಗಡೆ ಸಾಲ ಹುಟ್ಟುವ ಸ್ಥಿತಿಯಲ್ಲಿ ಇಲ್ಲ. ಹಾಗಾಗಿ ಜನ ಏನೇನು ಬೇಕು ಎಲ್ಲಾ ಅಡ ಇಟ್ಟು ಹಣ ತೆಗೆದುಕೊಂಡು ಬಂದು ತೀರಿಸುವ ಸ್ಥಿತಿ ಏನಿದೆ ಇದನ್ನು ಮುಂದಕ್ಕೆ ಹಾಕಬೇಕು. ಈ ವರ್ಷ ಕೂಡ ನಿರೀಕ್ಷೆ ಮಾಡಿದ ಹಾಗೆ ಮಳೆ ಬೀಳಲಿಲ್ಲ. ಬೆಳೆ ಬರಲಿಲ್ಲ. ಬರಗಾಲದ ಪರಿಸ್ಥಿತಿ ಹೇಗಾಗುತ್ತದೆ ಎಂದರೆ, ಬರ ಬಂದ ವರ್ಷ ನಮಗೆ ತಾಪ ಇರುವುದಿಲ್ಲ. ಆ ವರ್ಷ ಹಿಂದಿನ ವರ್ಷದ್ದು ಏನೋ ಇರುತ್ತದೆ ನಿಭಾಯಿಸುತ್ತೇವೆ. ಬರ ಬಂದಾಗ ಒಂದು ವರ್ಷ, ಎರಡು ವರ್ಷ ಮತ್ತು ಮೂರು ವರ್ಷ ಆ ಪರಿಣಾಮ ನಾವು ಅನುಭವಿಸಬೇಕಾಗುತ್ತದೆ. ವಾಸ್ತವವಾಗಿ ಕಳೆದ ವರ್ಷದವರೆಗೆ ಬರ ಇತ್ತು. ಈ ವರ್ಷ ನಮಗೆ ದಿಢೀರ್ ಎಂದು ದುಡ್ಡು ಹುಟ್ಟುವುದಿಲ್ಲ. ಮೂರನೆಯದು ಏನಾಗಿದೆ ಯೋಜನೆಗಳು ವಿಫಲವಾಗಿವೆ. ಸಿದ್ಧರಾಮಯ್ಯನವರು ಆಸೆ ಇಟ್ಟುಕೊಂಡು ಹೇಳಿದರು, ಏಪ್ರಿಲ್ ಒಂದರಿಂದ ಜಾರಿಗೆ ತರಬೇಕಾಗಿತ್ತು, ಜಾರಿ ಆಗಲಿಲ್ಲ. ಮೇ 15ಕ್ಕೆ ಸರ್ಕ್ಯುಲರ್ ಕೊಟ್ಟರು. ಮಧ್ಯದ ಬಡ್ಡಿ ಕಟ್ಟಿ ಎಂದು ಹೇಳಿದರು. ಸಸ್ಪೆನ್ಸ್ ಅಕೌಂಟ್‌ನಲ್ಲಿ ಇದ್ದ ಹಣ ಎಲ್ಲಾ ಅಡ್ಜಸ್ಟ್ ಮಾಡಿಕೊಂಡಿದ್ದೇವೆ. ಮತ್ತೆ ಬಡ್ಡಿ ಕಟ್ಟಿ ಎಂದು ಹೇಳಿದರು. ಈ ಗೊಂದಲದಲ್ಲಿ ರೈತರು ಏನು ಸಿಕ್ಕಿದ್ದಾರೆ. ಇದನ್ನು ನೀವು ನಿಭಾಯಿಸಬೇಕಾಗಿದೆ. ಈ ವರ್ಷದ ಮಾರ್ಚ್‌ವರೆಗೆ ಈ ಅವಧಿಯನ್ನು ವಿಸ್ತರಣೆ ಮಾಡಬೇಕಾಗಿದೆ. ಇದರ ಜೊತೆಗೆ ಕೆಲವಾರು ಸ್ಕೀಮ್‌ಗಳನ್ನು ಇದರಲ್ಲಿ ಸೇರಿಸಿಲ್ಲ. ಅಡಿಕೆ ಇಟ್ಟು ನಾವು ಲೋನ್ ತೆಗೆದುಕೊಂಡಿದ್ದು, ತೆಂಗಿನ ಗೋಡೋನ್ ಅಡ ಇಟ್ಟು ಲೋನ್ ತೆಗೆದುಕೊಂಡಿದ್ದೆವು. ಅದು ಯಾವುದಕ್ಕೂ ನಮ್ಮ ಸಹಕಾರ ಇಲಾಖೆಯವರು ಸ್ಪಷ್ಟವಾಗಿ ನಿರ್ದೇಶನ ಕೊಟ್ಟಿಲ್ಲ. ನಾನು ನಿಮಗೆ ಹೇಳಿದೆ, ಕ್ಯಾಟಲ್ ಶೆಡ್‌ಗೆ ಏನು ಮಾಡಬೇಕು, ಫಾರಂ ಹೌಸ್‌ಗೆ ಏನು ಮಾಡಬೇಕು, ತೆಂಗು ಬೆಳೆ ಅಭಿವೃದ್ಧಿ ಸಾಲಕ್ಕೆ ಏನು ಮಾಡಬೇಕು? ಕಾಫಿ ಬೆಳೆ ಬೆಳೆಯುವವರು ಏನು ಮಾಡಬೇಕು? ಇದಕ್ಕೆ ಸ್ಪಷ್ಟ ನಿರ್ದೇಶನ ಇಲ್ಲ. ಹಾಗಾಗಿ ರೈತರು ನಾವು ಸಾಲ ಕಟ್ಟುತ್ತೇವೆ. ಅಂದರೂ ಬ್ಯಾಂಕಿನವರು ಗೊಂದಲ ನಿರ್ಮಾಣ ಮಾಡಿ ಬಿಟ್ಟರು. ಇದಕ್ಕೆ ವಜಾ ಆಗುವುದಿಲ್ಲ. ಇದಕ್ಕೆ ವಜಾ ಆಗುತ್ತದೆ. ಇದಕ್ಕೆ ಬ್ಯಾಂಕಿನಿಂದ ಗೊಂದಲ ನಿರ್ಮಾಣ ಮಾಡಿ ಬಿಟ್ಟರು. ಇದಕ್ಕೆ ವಜಾ ಆಗುವುದಿಲ್ಲ, ಇದಕ್ಕೆ ವಜಾ ಆಗುತ್ತದೆ. ಇದಕ್ಕೆ ಬ್ಯಾಂಕಿನಿಂದ

ಬೇರೆ ಸ್ಕೀಮ್ ಇದೆ, ಸರ್ಕಾರದ ಸ್ಕೀಮ್ ಬೇರೆ ಇದೆ ಎಂದು ಹೇಳಿದರು. ಕೆಲವು ಬ್ಯಾಂಕ್‌ಗಳಲ್ಲಿ ಅಡಿಷನಲ್ ಶೇರ್ ಅಡ್ಜಸ್ಟ್ ಮಾಡಿಕೊಳ್ಳುವುದಿಲ್ಲ ಎಂದು 15 ರಿಂದ 20 ದಿವಸ ಮುಂದಕ್ಕೆ ಹಾಕುವ ಸ್ಥಿತಿ ನಿರ್ಮಾಣ ಮಾಡಿದ್ದಾರೆ. ಇದು ಎಲ್ಲದರ ಬಗ್ಗೆ ಇವತ್ತು ತಾವು ಏನು ಗಡುವು ಕೊಟ್ಟಿದ್ದೀರಿ. ನಾನು ಭಾಷಣ ಪ್ರಾರಂಭ ಮಾಡುವಾಗ ಹೇಳಿದೆ, ನಾನು ನಿಜವಾಗಿ ಸಿದ್ಧರಾಮಯ್ಯನವರಿಗೆ ಅಭಿನಂದಿಸಿ ಮಾಡುತ್ತಿದ್ದೇನೆ. ರೈತರಿಗೆ ಒಂದು ಸಲ ರಿಲೀಫ್ ಕೊಟ್ಟಿದ್ದಾರೆ. ಅಂತ ಅದು ಪ್ರಯೋಜನ ಆಗಬೇಕಾದರೆ ಈ ಅವಧಿಯನ್ನು ವಿಸ್ತರಿಸಬೇಕು, ಎರಡನೇಯದು ಹೋದ ವರ್ಷ ಏನಾಗಿದೆ, ನಮಗೆ ಯಾರಿಗೂ ಈ ಸ್ಕೀಂ ಬರುತ್ತದೆ ಎಂಬುದು ಗೊತ್ತಿರಲಿಲ್ಲ. ಸೊಸೈಟಿಯವರು ಅವರಷ್ಟಕ್ಕೆ ಅವರೇ ಬಹಳಷ್ಟು ರೈತರ ಲೋನ್‌ಗಳನ್ನು ರಿನ್ಯೂ ಮಾಡಿ ಬಿಟ್ಟಿದ್ದಾರೆ. ರೈತರೆಲ್ಲಾ ನಮ್ಮ ಸಾಲ ವಜಾ ಆಗುತ್ತದೆ ಎಂದು ತಿಳಿದು ಕೊಂಡರೆ, ಸೊಸೈಟಿಯವರು, ಇಲ್ಲ ಇಲ್ಲ. ನಿಮ್ಮದು ಹೊಸ ಲೋನ್ ಆಗಿದೆ, ಆರುಪರ್ಸೆಂಟ್ ರೇಟ್ ಆಫ್ ಇಂಟರೆಸ್ಟ್‌ನಲ್ಲಿ ಎನ್ನುವ ಸ್ಥಿತಿಯನ್ನು ವಿಎಸ್‌ಎಸ್‌ಎಲ್‌ನವರು ನಿರ್ಮಾಣ ಮಾಡಿ ಬಿಟ್ಟಿದ್ದಾರೆ. ಇದರ ಬಗ್ಗೆ ತಾವು ಏನಾದರೂ ಒಂದು ಆದೇಶ ಕೊಡಬೇಕು. ಆರು ಪರ್ಸೆಂಟ್ ಸಾಲ ಇದ್ದುದ್ದನ್ನೂ ಕೂಡ ವಜಾ ಮಾಡುವುದು ಶ್ರೇಷ್ಠ ಎಂಬುದು ನನ್ನ ಭಾವನೆ. ಈ ಸಾಲ ಪುನರ್ ಭರಿಸುವುದು. ರೀಫೈನಾನ್ಸ್ ಮಾಡುವುದು ನಬಾರ್ಡ್. ಒಂದು ಕಾಲ ಇತ್ತು ಕಮರ್ಷಿಯಲ್ ಬ್ಯಾಂಕುಗಳು ರಿಸರ್ವ್ ಬ್ಯಾಂಕುಗಳ ಅಧೀನದಲ್ಲಿ ಬಂದು ಫೈನಾನ್ಸಿಂಗ್ ಸ್ಟ್ರಕ್ಚರ್ ಅವರ ಕೆಳಗಡೆ ಇತ್ತು. ಇವತ್ತು ಎಂಟೈರ್ ಅಗ್ರಿಕಲ್ಚರ್ ಅಡ್ವಾನ್ಸ್ ನಬಾರ್ಡ್‌ನಿಂದಲೇ ರೀಫೈನಾನ್ಸ್ ಆಗಬೇಕಾಗಿದೆ. ಕಮರ್ಷಿಯಲ್ ಬ್ಯಾಂಕ್‌ನಿಂದ ಹಣ ತೆಗೆದುಕೊಂಡರೂ ಅವನೇ ರೀಫೈನಾನ್ಸ್ ಮಾಡುತ್ತಾನೆ. ಅವರೇ ಲೋನ್ ಸ್ಟ್ರಕ್ಚರ್ ನಿಗದಿ ಮಾಡುತ್ತಾರೆ. ನಿಮ್ಮ ಕೋ-ಆಪರೇಟಿವ್ ಸೊಸೈಟಿ ಅಥವಾ ಬ್ಯಾಂಕಿನಿಂದ ತೆಗೆದುಕೊಂಡರೂ ಅವರೇ ತೆಗೆದುಕೊಳ್ಳುತ್ತಾರೆ. ಅನೇಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಅನೇಕ ಕಮರ್ಷಿಯಲ್ ಬ್ಯಾಂಕುಗಳಲ್ಲಿ ಇವತ್ತು ಸಾಲ ತೆಗೆದು ಕೊಂಡ ರೈತರಿಗೆ ರಿಲೀಫ್ ಇಲ್ಲ. ಅವರಿಗೆ ಏನಾದರೂ ಹೇಳಬೇಕು. ಇವತ್ತು ಅವರಿಗೇ ಅಂದರೆ ಮ್ಯಾನೇಜರ್ಗೆ ಡಿಸ್ಕ್ರೀಷನ್ ಇದೆ. ಒನ್ ಟೈಮ್ ಸೆಟ್ಲ್‌ಮೆಂಟ್ ಮಾಡುತ್ತೇವೆ, ನೀವು ಕೂತು ನೆಗೋಷಿಯೇಟ್ ಮಾಡಿದರೆ ಇಷ್ಟು ಸಾಲ ಬಿಡುತ್ತಾರೆ. ಇಷ್ಟು ಸಾಲ ಉಳಿಸಿಕೊಳ್ಳುತ್ತಾರೆ ಎಂದು ಹೇಳಿ. ಅವರವರೇ ನಿರ್ಧಾರ ತೆಗೆದುಕೊಂಡು ಮಾಡಲಿಕ್ಕೆ ಇರುವಂತಹ ಅವಕಾಶವನ್ನು ಸರ್ಕಾರ ಬಳಸಿಕೊಳ್ಳಬೇಕು. ನಾನು ಸನ್ಮಾನ್ಯ ಜನಾರ್ಧನ ಪೂಜಾರಿಯವರಿಗೆ ಈ ಮಾಹಿತಿಗಾಗಿ ನೆನೆಸಿಕೊಳ್ಳುತ್ತೇನೆ. ಲೋನ್ ಮೇಳ ಎಂದು ಮಾಡಿ ನಮ್ಮ ಡಿಐಆರ್ ಲೋನ್ ಏನಾದರೂ ನಾಲ್ಕು ಪರ್ಸೆಂಟ್ ಬ್ಯಾಂಕ್ ಮ್ಯಾನೇಜರ್ ಡಿಸ್ಕ್ರೀಷನ್‌ಲ್ಲಿ ಇದ್ದುದ್ದನ್ನು ಬಳಸಿಕೊಂಡು ಜನಪ್ರತಿನಿಧಿ ಕೆಲಸ ಮಾಡಿದವರು ಅಂದರೆ ಅವರು. ಒಳ್ಳೆಯದನ್ನು

ನಾನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಅವರೇ ನಿಂತು ನಾನು ಹೇಳಿದ ಜನಗಳಿಗೆ ನಾಲ್ಕು ಪರ್ಸೆಂಟ್ ಒಳಗೆ ಸಾಲ ಕೊಡಿ ಎಂದು ಹೇಳಿ ಬ್ಯಾಂಕಿನ ಆಡಳಿತವನ್ನು ಅವರ ಅಧೀನಕ್ಕೆ ತೆಗೆದುಕೊಂಡರು, ಅವರನ್ನು ಇನ್ ಹೆರಿಟ್ ಮಾಡಿದ ಸರ್ಕಾರ ನೀವು. ನೀವು ಇದನ್ನು ಆಲೋಚನೆ ಮಾಡಬೇಕಾಗಿತ್ತು. ಬ್ಯಾಂಕ್ ಮ್ಯಾನೇಜರ್ ಕೂತು ಇವತ್ತು ಯಾವುದಾದರೂ ಲೋನ್ ವೇವ್ ಮಾಡಬಹುದು. ಬ್ಯಾಂಕ್ ಮ್ಯಾನೇಜರ್ ಕೂತು ರೀಸ್ಟ್ರಕ್ಚರ್ ಮಾಡಬಹುದು. ಬ್ಯಾಂಕ್ ಮ್ಯಾನೇಜರ್ ಕೂತು ಒಟಿಎಸ್ ಮಾಡುವ ಅಧಿಕಾರ ಇಟ್ಟುಕೊಂಡು ಸರ್ಕಾರದವರಾಗಿ ಇಂತಿಂಥ ಶ್ರೇಣಿಯಲ್ಲಿ ಷೇರ್ ಇಷ್ಟಿಷ್ಟು ಮನ್ನಾ ಮಾಡಿ ಎಂದು ಹೇಳಲಿಕ್ಕೆ ಏನು ತೊಂದರೆಯಾಗಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಾವು ಆ ಕಡೆಯೂ ಗಮನಿಸಬೇಕಾಗುತ್ತದೆ. ವಿಶೇಷವಾಗಿ ಒಳ್ಳೆಯ ಮಳೆಗಾಲ ಆಗಿ ಬೆಳೆ ಬರುವವರೆಗೆ ಈ ಸಾಲವನ್ನು ಕಂತು ಮಾಡಬೇಕಾಗಿತ್ತು. ಬರಗಾಲ ಬಂದರೆ ಮೂರು ಕಂತನ್ನು ಮಾಡಿ ಹೊಸ ಸಾಲ ಕೊಟ್ಟು ಹಳೆಯ ಸಾಲ ತೀರಿಸಿ ಎಂದು ಕೇಳುತ್ತಿದ್ದವು ಈ ಹೊಸ ಸಾಲ ವ್ಯವಸ್ಥೆ ಆಗಲಿಲ್ಲ. ನಾನು ಬ್ಯಾಂಕಿಗೆ ಸಾಲ ತೀರಿಸಿ ಮೂರು ತಿಂಗಳುಗಳಾದವು. ನನಗೆ ಫ್ರೆಶ್ ಲೋನ್ ಕೊಡುತ್ತೇವೆಂದು ಹೇಳಿ ಕೊಡಲಿಲ್ಲ. ಜನರೆಲ್ಲಾ ಇವತ್ತು ಸಾಲ ಕಟ್ಟಿದರೆ ಒಂದು ವಾರದ ಒಳಗೆ ಫ್ರೆಶ್ ಲೋನ್ ಸಿಗುತ್ತದೆ ಎಂದು ಎನ್ನುವ ಭಾವನೆಯಲ್ಲಿ ಏನಿದ್ದಾರೆ. ಅವರಿಂದ ವಿಪರೀತವಾದ ಬಡ್ಡಿಗೆ ಸಾಲ ತಂದು ಬ್ಯಾಂಕಿಗೆ ಹಣವನ್ನು ಕಟ್ಟುತ್ತಾರೆ. ಲಕ್ಷಾಂತರ ರೂಪಾಯಿ ಅವರಿಗೆ ಉಳಿಯುತ್ತಿದೆ. ಆ ತಲೆ ದಂಡವನ್ನು ತಪ್ಪಿಸಬೇಕೆಂದರೆ ಕನಿಷ್ಟ ಇದನ್ನು ಮಾರ್ಚ್‌ವರೆಗೆ ಎಕ್ಸ್‌ಟೆಂಡ್ ಮಾಡಬೇಕು. ಯಾವ ಯಾವ ಕೃಷಿ ಸಾಲ ಅಥವಾ ನನ್ನದು ಪಹಣಿ ಅಡ ಇಟ್ಟು ಸಾಲ ತೆಗೆದುಕೊಂಡಿದ್ದೇನೆ ಅಂದರೆ ಅದೆಲ್ಲವನ್ನು ಈ ವ್ಯಾಪ್ತಿಯಲ್ಲಿ ನೀವು ತರಬೇಕು. ತೆಂಗು ಬೆಳೆಗೆ ಬರುವುದಿಲ್ಲ. ಅಡಿಕೆ ಗೋಡೋನ್‌ಗೆ ಬರುವುದಿಲ್ಲ. ಕ್ಯಾಟಲ್ ಶೆಡ್‌ಗೆ ಬರುವುದಿಲ್ಲ. ಫಾರಂ ಹೌಸ್‌ಗೆ ಬರುವುದಿಲ್ಲ ಇವೆಲ್ಲಾವನ್ನು ಹೇಳುವುದನ್ನೂ ನಿಮ್ಮ ರಿಜಿಸ್ಟ್ರಾಗೆ ತಾವು ಸೂಚನೆ ಕೊಡಬೇಕು. ಮಾನ್ಯ ಸಿದ್ದರಾಮಯ್ಯನವರು ಬಹಳ ಘನವಾದ ಉದ್ದೇಶ ಇಟ್ಟುಕೊಂಡು ಇಲ್ಲಿ ಕೊಟ್ಟರು. ಆದರೆ ಇಲಾಖೆಯಿಂದ ಸುತ್ತೋಲೆ ಬರಬೇಕಾದರೆ ಬೇಕಾದಷ್ಟು ಕಡೆ ತಿರುಚಿಕೊಂಡು ಬಂದು ಬಿಟ್ಟಿತ್ತು. ಈ ತರಹ ತಿರುಚುವುದೆಲ್ಲಾ ತಪ್ಪಿಸಬೇಕೆಂದು ಹೇಳಿ, ಇವತ್ತು ನಾವು ಬಹಳ ವಿಷಮ ಪರಿಸ್ಥಿತಿಯಲ್ಲಿದ್ದೇವೆ. ಮಾರುಕಟ್ಟೆಯಲ್ಲಿ ಹಣ ಸಿಗುತ್ತಿಲ್ಲ. ಯಾವುದೇ ಕ್ರಾಪ್ ಇವತ್ತು ನಾವು ನಿರೀಕ್ಷೆ ಮಾಡಿದ ಹಾಗೆ ಮಾರುಕಟ್ಟೆಯಲ್ಲಿ ಬಿಕರಿ ಆಗುತ್ತಿಲ್ಲ. ಕೊಬ್ಬರಿ ತೆಗೆದುಕೊಳ್ಳಿ, ಅಡಿಕೆ ತೆಗೆದುಕೊಳ್ಳಿ, ಅಥವಾ ಹತ್ತಿ ತೆಗೆದುಕೊಳ್ಳಿ ಹೋದ ವರ್ಷ ಆಚೆ ವರ್ಷ ಬಂದ ಮಾಲಿನಲ್ಲಿ ಅರ್ಧ ಮಾಲು ಕೂಡ ಮಾರುಕಟ್ಟೆಗೆ ಬಂದಿಲ್ಲ. ಮಾರುಕಟ್ಟೆಗೆ ಮಾಲು ಬರಲಿಲ್ಲವೆಂದರೆ ವರ್ತಕರೂ ಕೂಡ ರೈತರಿಗೆ ಅಡ್ವಾನ್ಸ್ ಮಾಡುವುದಿಲ್ಲ. ನಿಮ್ಮ

ಸಹಕಾರ ಸಂಘದಲ್ಲಿ ಇದು ತೀರಿಸದೆ ಹೊಸ ಸಾಲ ಬರುವ ಸ್ಥಿತಿಯಲ್ಲಿ ಇಲ್ಲ. ಹಣವೇ ಹುಟ್ಟಲಾರದ ಸ್ಥಿತಿ ಇಲ್ಲಿದ್ದು, ನಾನೇನಾದರೂ ಋಣ ಮುಕ್ತನಾಗಬೇಕು. ಹೇಗಾದರೂ ಸಾಲ ತೀರಿಸಬೇಕೆಂದು ಭಾವನೆ ಇಟ್ಟುಕೊಂಡ ರೈತರಿಗೆ ಇನ್ನು ಒಂದು ಅವಕಾಶ ಕೊಡಬೇಕಾದುದ್ದು ಈ ಸರ್ಕಾರದ ಜವಾಬ್ದಾರಿ. ಮಾನ್ಯ ಸಿದ್ಧರಾಮಯ್ಯನವರಿಗೆ ರೈತರ ಕಳಕಳಿ ಬಗ್ಗೆ ಹೇಳಬೇಕಾಗಿಲ್ಲ. ಬಹಳ ಶಾರ್ಟ್ ಆಯಿತು. ಕೇವಲ ಒಂದುವರೆ ತಿಂಗಳು ಅವಕಾಶ ಕೊಟ್ಟು 10 ವರ್ಷ, 15ವರ್ಷ ಮತ್ತು 20 ವರ್ಷಗಳಿಂದ ಇದ್ದ ಸಾಲ ತೀರಿಸಿ ಎಂದು ನಿರೀಕ್ಷೆ ಮಾಡುವುದು ತಪ್ಪಾಗುತ್ತದೆ. ಇದರ ಜೊತೆಗೆ ಸನ್ಮಾನ್ಯ ದೇಶಪಾಂಡೆಯವರಿಗೆ ನಾನು ಒಂದು ಮಾತನ್ನು ಸಜೆಸ್ಟ್ ಮಾಡುತ್ತೇವೆ. ವಿಫಲ ಬಾವಿಗಳಿಗೆ ಜಿಯಾಲಜಿಸ್ಟ್ ಸರ್ಟಿಫಿಕೇಟ್ ಕೊಟ್ಟರೆ ಪಿಎಲ್‌ಡಿ ಬ್ಯಾಂಕಿನಲ್ಲಿ ರೈತರ ಸಾಲ ತೀರುತ್ತದೆ ಎಂದು ತಿಳಿದುಕೊಂಡಿದ್ದರು. ಅನೇಕ ಬ್ಯಾಂಕುಗಳಲ್ಲಿ ಇವತ್ತು ನೋಟೀಸ್ ಕೊಡುತ್ತಿದ್ದಾರೆ. ಫೇಲ್ಡ್ ವೆಲ್‌ದು ಆಗಿಲ್ಲ, ಜಿಯಾಲಜಿಸ್ಟ್ ಸರ್ಟಿಫಿಕೇಟ್ ಪಡೆದು ನಾವು ಬಿಲ್ ಪ್ರಿಪೇರ್ ಮಾಡಿ, ಸರ್ಕಾರದವರಿಗೆ ಕೊಟ್ಟ ಅವತ್ತು ಸಬ್ಸಿಡಿ ರಿಕವರಿ ಮಾಡಲಿಲ್ಲ ಅಂತ ಇಂಥವನ್ನು ನೀವು ಏಕೆ ಮಾಡುತ್ತೀರಿ? ಒಂದು ಸಾರಿ ಏನಾದರೂ ಮಾಡಿ ರೈತರನ್ನು ಋಣ ಮುಕ್ತರಾಗಿ ಮಾಡಬೇಕಾಗಿತ್ತು. ಎರಡನೆಯದು ಗೋಡೋನ್ ಲೋನ್ ಏನು ಕೊಟ್ಟಿದ್ದಾರೆ, ಈ ಗೋಡೋನ್ ಲೋನ್ ಈ ವ್ಯಾಪ್ತಿಗೆ ತರಬೇಕಾಗುತ್ತದೆ. ಕೋಳಿ ಸಾಕುವವನು ಒಬ್ಬ ರೈತ. ಕೋಳಿ ಸಾಕಿದ್ದಾನೆ ಅಂದ ತಕ್ಷಣ ನಾನೇನೂ ಉದ್ದಿಮೆದಾರ ಅಲ್ಲ. ಅಲ್ಲಿ ಅವರಿಗೆ ಕೆಎಸ್‌ಎಫ್‌ಸಿ ಸಬ್ಸಿಡಿಯೂ ಇಲ್ಲ, ಇಲ್ಲಿ ರೈತರು ಎಂದು ಇಲ್ಲ ಇದನ್ನೆಲ್ಲಾ. ಈ ವ್ಯಾಪ್ತಿಗೆ ತಂದು ಇನ್ನೊಂದು ಮರುಚಿಂತನೆ ಮಾಡಿ. ನಿಮ್ಮ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೀರಿ. ಬಡ್ಡಿ ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇವೆಂದು ತಾವು ಹೇಳಿರಲಿಲ್ಲ. ಕಾಲ ಕಳೆದ ಹಾಗೆ ಬಡ್ಡಿ ಸುಸ್ತಿ ಬಡ್ಡಿಗೆ ಬಂದು ನಿಂತಿರಿ. ಸಾಲ ಮನ್ನಾ ಮಾಡಿ ಎಂದು ಕೇಳುವುದಕ್ಕೆ ನಮಗೆ ಬಹಳ ಮನಸ್ಸು ಇದ್ದರೂ ನಿಮ್ಮ ಶಕ್ತಿ ನಿಮ್ಮ ವ್ಯಾಪ್ತಿಯನ್ನು ನೋಡಿಕೊಂಡು ಕನಿಷ್ಟ ಈಗ ಕೊಟ್ಟಿರುವ ಸ್ಕೀಮ್‌ಅನ್ನು ಮುಂದುವರೆಸಬೇಕು. ಪಿಎಲ್ ಡಿ ಬ್ಯಾಂಕಿನವರು ವಿಶೇಷವಾಗಿ ನಿಮಗೆ ಏನೇನು ಕೇಳಿಕೊಂಡಿದ್ದಾರೆ. ಇಂತಿಂಥ ಸಾಲಗಳಿಗೂ ಇದನ್ನು ಅನ್ವಯವಾಗುವ ಹಾಗೆ ಮಾಡಿ ಎಂದು ಅದನ್ನು ಇದರ ವ್ಯಾಪ್ತಿಗೆ ತರಬೇಕು. ಹೇಗಾದರೂ ಮಾಡಿ ಮಾರ್ಚ್ ಎಂಡ್‌ವರೆಗೆ ಈ ಸ್ಕೀಮ್ ಮುಂದುವರೆಸಬೇಕು. ತಕ್ಷಣ ಅವರಿಗೆ ರೀಫೈನಾನ್ಸ್ ಮಾಡುವ ಸ್ಥಿತಿಯನ್ನು ತಾವು ಸಹಕಾರ ಸಚಿವರು ನಿರ್ಮಾಣ ಮಾಡಬೇಕು. ಇವತ್ತು ಎಲ್ಲರಿಗೂ ಗೊಂದಲ ಇದೆ. ಇವತ್ತು ಏನಾಗಿದೆ.

Borrowing capacity of the bank is considered to get a loan.

ನಾನು ಒಂದು ಸಾಲ ತೆಗೆದುಕೊಳ್ಳಬೇಕಾದರೆ ಚಿಕ್ಕನಾಯಕನಹಳ್ಳಿ ಬ್ಯಾಂಕ್ ಇವತ್ತು ಕೆಪ್ಯಾಸಿಟಿ ಇಟ್ಟುಕೊಳ್ಳಬೇಕು. ನಾನು ಯಾವ ಪಾಪ ಮಾಡಿದ್ದೇನೆ. ಏತಕ್ಕೆ ಬೇಕು? ಮಾನ್ಯ ದೇಶಪಾಂಡೆಯವರೆ, ಈ ಸಭೆಯಲ್ಲಿ ನಾನು ಕೇಳಿದೆ, ಒಬ್ಬ ರೈತ ನಾನು ಸಾಲ ತೆಗೆದುಕೊಂಡಿದ್ದೇನೆ. ತೀರಿಸಿದ್ದೇನೆ ಅಂದರೆ ನನಗೆ ಫ್ರೆಶ್ ಲೋನ್ ಕೊಡುವ ವ್ಯವಸ್ಥೆ ಇಲ್ಲ ಎಂದರೆ ಆ ವ್ಯವಸ್ಥೆ ಏಕೆ ಇಟ್ಟುಕೊಂಡಿದ್ದೀರಿ? ನಿಮ್ಮ ಬ್ಯಾಂಕಿನಲ್ಲಿ ಯಾರೋ ದುಡ್ಡು ತೆಗೆದುಕೊಂಡು ಸುಸ್ತಿ ಆದರೆ, ನನಗೂ ಸಾಲ ಕೊಡದೇ ಹೋದರೆ ನಾನು ಕಟ್ಟುವುದಿಲ್ಲ. ನನಗೆ ಇನ್ನೊಂದು ಸಾರಿ ಸಾಲ ನಿಮ್ಮ ಹತ್ತಿರ ಸಿಕ್ಕುವುದಿಲ್ಲ ಎನ್ನುವುದಾದರೆ ನಾನೇಕೆ ತೆಗೆದುಕೊಂಡಿರುವ ಸಾಲವನ್ನು ತೀರಿಸುತ್ತೇನೆ ಹೇಳಿ, ಏಕೆಂದರೆ ನಾನು ಸಾಲ ತೀರಿಸಿರುವ ಕಾರಣ ನನಗೆ ಮತ್ತೆ ಸಾಲ ಕೊಡಿ ಎಂದು ಕೇಳಿದಾಗ, ನನಗೆ ಸಾಲ ಕೊಡದಿದ್ದರೆ ಇದೆಂಥ ಕೋ–ಆಪರೇಟಿವ್ ವ್ಯವಸ್ಥೆ ಎಂಬುದು ನನಗಂತೂ ಅರ್ಥವಾಗಲಿಲ್ಲ. ನಾನು ಹಿಂದೆ ಒಂದು ಸಲ ಹೇಳಿದ್ದೇ, ಯಾರು ಸಾಲವನ್ನು ತೀರಿಸಿದ್ದಾರೆ. ಅವರಿಗೆ ನೀವು ಮರುಸಾಲ ಕೊಡುತ್ತೇವೆ ಎಂದು ಹೇಳಿದ್ದರೆ ಸುಮಾರು ಸಾಲ ರಿಕವರಿ ಆಗಿರುತ್ತಿತ್ತು. ಎಲಿಜಿಬಿಲಿಟಿ ಆಫ್ ದಿ ಬ್ಯಾಂಕ್ ಹೇಗಾಗುತ್ತದೆ. ಅಧ್ಯಕ್ಷರೆ, ನಾನೇನಾದರೂ ಈ ಸ್ಥಾನದಲ್ಲಿದ್ದರೆ ಇಡೀ ಎಸ್‌ಎಲ್‌ಡಿ ಬ್ಯಾಂಕ್ ಬೋರ್ಡ್ ಆಫ್ ಡೈರೆಕ್ಟರ್ಸ್‌ಗಳನ್ನು ಡಿಸ್‌ಕ್ವಾಲಿಫೈ ಮಾಡತ್ತಿದ್ದೆ. ಎಲ್ಲಾ ಅವರವರ ಒಂದೊಂದು ಬ್ಯಾಂಕ್ ಉಳಿಸಿಕೊಂಡು ಅವರಿಗೆ ಒಂದು ಕಾನ್ಸ್‌ಟ್ಯೂಯೇನ್ಸಿನಲ್ಲಿ, ಜಿಲ್ಲೆಗೊಂದು ಬ್ಯಾಂಕ್ ಇಟ್ಟುಕೊಂಡು ಬಿಟ್ಟು 8–9 ಬ್ಯಾಂಕ್‌ಗಳನ್ನು to se that they are disaqualified, not to entertain elections ಎಂದು ಹೇಳಿ ಒಂದೊಂದು ಬ್ಯಾಂಕ್‌ನ್ನು ಕ್ವಾಲಿಫೈ ಮಾಡಿಕೊಂಡು, ಇವರೆಲ್ಲಾ ಡೈರೆಕ್ಟರ್‌ಗಳು, ಇವರೆಲ್ಲಾ ನಿಮ್ಮ ಲ್ಯಾಂಡ್ ಬ್ಯಾಂಕ್‌ಗಳಲ್ಲಿ ಪ್ರೆಸಿಡೆಂಟ್‌ಗಳು ಆಗಿರುವುದನ್ನು ತಾವು ನೋಡಿದ್ದೀರಿ. ಮಾಡಿ ಮಿನಿಮಮ್ 60 ಪರ್ಸೆಂಟ್, 70 ಪರ್ಸೆಂಟ್ ಬ್ಯಾಂಕ್ ಯಾವ ಜಿಲ್ಲೆಯಲ್ಲಿ ಎಲಿಜಿಬಲ್ ಇರುತ್ತದೆ ಅಲ್ಲಿಂದ ಮಾತ್ರ ಕ್ಯಾಂಡಿಡೇಟ್ ಬರಬೇಕು ಎಂದು ಮಾಡಿ. ಒಂದು ಬ್ಯಾಂಕ್ ಮಾತ್ರ ಉಳಿಸಿಕೊಂಡು ಬಿಡುವುದು ಇವರು. ನೀವ್ಯಾರೂ ನನಗೆ ಓಟ್ ಹಾಕುವ ಹಾಗಿಲ್ಲ. ನಾನು ನಾಮಿನೇಟ್ ಆಗಿ ಇಲ್ಲಿ ಬರುವುದು. ನಾನು ಹೇಳಿದವರಿಗೆ ಸಾಲವನ್ನು ಕೊಡುವಂಥ ಬ್ಯಾಂಕ್, ಸೆಕ್ರೆಟರಿಗೆ ಈ ರೀತಿ ಹೇಳಿಬಿಟ್ಟರೆ ಆಗಿಹೋಯಿತೇ ನಿಮ್ಮ ಕೋ–ಆಪರೇಟಿವ್ ವ್ಯವಸ್ಥೆ. ಏತಕ್ಕೆ ಬೇಕು ಈ ರೀತಿಯ ವ್ಯವಸ್ಥೆ? ಎಷ್ಟು ಜಿಲ್ಲೆಯಲ್ಲಿ ಇವೊತ್ತು for more than 50% of the banks ಕಳೆದ ಎರಡು ಟರ್ಮ್‌ಗಳಲ್ಲಿ to vote eligible ಇದ್ದರು ಎಂಬುದನ್ನು ತಾವು ಇಲ್ಲಿ ಹೇಳಬೇಕಲ್ಲಾ. ನೀವು ಈ ವರ್ಷ 30 ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದಿರಿ.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) :– ಮಾನ್ಯ ಮಾಧುಸ್ವಾಮಿಯವರೆ, ಒಂದು ನಿಮಿಷ. ಈಗ ತಾವು ಮತ್ತು ತಮಗೆ ಮೊದಲು ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ ಹಾಗೆ ಮೂರ್‍ನಾಲ್ಕು ವರ್ಷಗಳಿಂದ, ಸ್ವಲ್ಪ ಬರಗಾಲ ಇದೆ. ಇದರಿಂದಾಗಿ ರೈತರಿಗೆ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಆಗಲಿಲ್ಲ. ಬಡ್ಡಿಯನ್ನು ಕಟ್ಟುವುದಕ್ಕೆ ಆಗಲಿಲ್ಲ. ಎಂದು ಹೇಳಿದಿರಿ. ಇವೆಲ್ಲಾ ವಿಷಯಗಳು ಆ ಸಹಕಾರಿ ಸಂಘಕ್ಕೆ ಚುನಾವಣೆ ಮಾಡುವ ಸಮಯ ಬಂದಾಗ ಇದೇ ವಿಷಯ ಚರ್ಚೆಗೆ ಬಂತು, ಆಗ ನಮ್ಮ ಕಡೆ ಆಗಿದ್ದ ರೆಕವರಿ ಕೆಲವು ಕಡೆ 5 ಪರ್ಸೆಂಟ್, 10 ಪರ್ಸೆಂಟ್, 20 ಪರ್ಸೆಂಟ್ ಮತ್ತು 30 ಪರ್ಸೆಂಟ್ ನಾವು ಎಲಿಜಿಬಿಲಿಟಿ ನಾರ್ಮ್ಸ್‌ಗೆ ಹೋದರೆ ಪ್ರತಿ ಜಿಲ್ಲೆಯಲ್ಲಿ ಒಂದು ಬ್ಯಾಂಕ್ ಪಾರ್ಟಿಸಿಪೇಟ್ ಮಾಡುತ್ತಿದ್ದರು. ಕೆಲವು ಜಿಲ್ಲೆಗಳಲ್ಲಿ ಆ ಬ್ಯಾಂಕ್ ಕೂಡ ಬರುತ್ತಿರಲಿಲ್ಲ. ಹಾಗಾದರೆ ಅವರದ್ದು ಯಾವ ಎಲೆಕ್ಷನ್ ಅದು? ಹಾಗಾಗಿ ಪ್ರಜಾಪ್ರಭುತ್ವದಲ್ಲಿ ಹೆಚ್ಚಿನ ಜನರಿಗೆ ಅವಕಾಶ ಸಿಗಬೇಕು. ಹೆಚ್ಚಿನ ಜನರಿಗೆ ಒಂದು ಅವಕಾಶ ಸಿಕ್ಕಿದರೆ ಒಳ್ಳೆಯದು. ಈಗ ಒಂದೊಂದು ಜಿಲ್ಲೆಯಲ್ಲಿ ಒಂದು ಬ್ಯಾಂಕು ಅಂದರೆ ಅವರೆಲ್ಲಾ ಬಂದು ಬಿಡುತ್ತಾರೆ. ಹೀಗಾಗಿ ಎಲಿಜಿಬಿಲಿಟಿ ನಾರ್ಮ್ಸ್ ಕ್ವಾಲಿಫೈ ಆಗುವುದಕ್ಕೆ ಕಡಿಮೆ ಮಾಡಿದ್ದು ಕೇವಲ ಬೆಳಗಾಂ ಜಿಲ್ಲೆ, ಧಾರವಾಡ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿಯೇ ಇದನ್ನು ಮಾಡಿ ಹೆಚ್ಚಿನ ಪಿ.ಎಲ್.ಡಿ. ಬ್ಯಾಂಕ್‌ಗಳಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಆ ಕಾರಣಕ್ಕಾಗಿ ಮಾಡಿದ್ದೇವೆ ಹೊರತು ಬೇರೆ ಕಾರಣಕ್ಕಾಗಿ ಅಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– Instead of 75%, 30 ಪರ್ಸೆಂಟ್ ರೆಕವರ್ ಆಗಿರುವವರು ಎಲಿಜಿಬಲ್ ಅಂದಿರಿ. ಸಾಲಕ್ಕೂ ಮತ್ತು ಬ್ಯಾಂಕ್‌ನ ಚುನಾವಣೆಗೂ ಸಂಬಂಧವನ್ನೇ ತರಬಾರದಾಗಿತ್ತು ಎಂದು ನಾನು ಹೇಳುತ್ತಿರುವುದು. ಈಗ ನಾನು I quote. ತಾವು ಮಾಹಿತಿ ತೆಗೆದು ನೋಡಿ, ತುಮಕೂರು ಜಿಲ್ಲೆಯಲ್ಲಿ ಕಳೆದ ಮೂರು ಟರ್ಮ್‌ಗಳಿಂದ ಒಂದೇ ಒಂದು ಲ್ಯಾಂಡ್ ಬ್ಯಾಂಕ್ ಎಲಿಜಿಬಲ್ ಆಗಿರುವುದು. Was it not the duty of the Director to see that other banks are made eligible ಬೇರೆ ಬ್ಯಾಂಕ್‌ಗಳನ್ನು ಕೂಡ ಎಲಿಜಿಬಲ್ ಮಾಡಬೇಕು. ಎಂಬುದು ಅವರ ಜವಾಬ್ದಾರಿಯಾಗಿರಲಿಲ್ಲವೇ? ನಿಮ್ಮದು ಹೋಗಲಿ, ರಾಜಕೀಯ ಏನಾದರೂ ಮಾಡಿಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಸಚಿವರು) :– ಮಾನ್ಯ ಮಾಧುಸ್ವಾಮಿಯವರೇ, ಒಂದು ನಿಮಿಷ, ಅದಕ್ಕೆ ನಾವು ಅನೇಕ ಸಾರಿ ಇಲ್ಲಿ ಪ್ರಸ್ತಾಪ ಮಾಡಿದಾಗ ಕೆಲವು ಜನ ತಪ್ಪು ತಿಳಿದುಕೊಳ್ಳ ತಕ್ಕಂಥದ್ದನ್ನು ನಾನು ನೋಡಿದ್ದೇನೆ. ನಾವು ಅನೇಕ ಸಾರಿ ಕನ್ಸೆಷನ್‌ಗಳನ್ನು ಏನು ಕೊಡುತ್ತೇವೆ. ಸವಲತ್ತುಗಳನ್ನು ಏನು ಕೊಡುತ್ತೇವೆ ಅದೆಲ್ಲಾ ಲಿಮಿಟೆಡ್ ಕಂಪನಿಗೆ ಹೋಗಿ ಮುಟ್ಟತಕ್ಕಂಥದ್ದು ಆಗುತ್ತಿದೆ. ಇದು ಆಗಬಾರದು. ನೀವು

ವೈಡರ್ ಮೆಂಬರ್‌ಶಿಫ್ ಮಾಡಿ ರಿಕವರಿ ಮಾಡಿ ಮತ್ತೆ ಪುನಃ ಇದು ಎಲ್ಲರನ್ನೂ ಸೇರುವ ಹಾಗೆ ಮಾಡಬೇಕು ಎಂದು ಹೇಳಿದರೆ ಯಾರು ಕೇಳುವುದಿಲ್ಲ. ಆ ಎಲಿಜಿಬಲ್ ಡೈರೆಕ್ಟರ್ಸ್ ಎಲಿಜಿಬಲ್ ಆಗುವುದಕ್ಕೆ ಒಂದೆರಡು, ಮೂರು, ನಾಲ್ಕು ಸೊಸೈಟಿಗಳನ್ನು ಎಲಿಜಿಬಲ್ ಮಾಡಿಕೊಳ್ಳುವುದು, ಒಂದೆರಡು ಬ್ಯಾಂಕ್‌ಗಳನ್ನು ಎಲಿಜಬಲ್ ಮಾಡುವುದು, ಗೆಲ್ಲುವುದು, ಕಡೆಗೆ ಎಂಟೈರ್ ಒಂದು ನೂರು ಕೋಟಿರೂ ಮಾಲೀಕನಾಗಿ ಇಲ್ಲಿ ಕೊಡುವುದು. ಹೌದಾ, ಅದಕ್ಕೆ ನಾನು ಸಿದ್ಧರಾಮಯ್ಯನವರನ್ನೂ ಕೇಳುತ್ತಿದ್ದೆ, ದೇಶಪಾಂಡೆಯವರನ್ನೂ ಕೇಳಿದೆ. ನೋಡಪ್ಪಾ 70 ಲಕ್ಷ ರೈತರು., ಸಿದ್ಧರಾಮಯ್ಯನವರೆ, ನಾನು ಹೇಳುವುದನ್ನು ಕೇಳಿ, ಶ್ರೀರಾಮರೆಡ್ಡಿಯವರೇ ನೀವೂ ಕೇಳಿ, ಏಕೆಂದರೆ ನೀವು ಕೂಡ ಅನೇಕ ಸಾರಿ ಕೇಳುತ್ತಿರುತ್ತೀರಿ, ಆದ್ದರಿಂದ ನೀವು ಇದನ್ನು ಕೇಳುವುದು ಮುಖ್ಯ. 70 ಲಕ್ಷ ರೈತರು ಈ ರಾಜ್ಯದಲ್ಲಿ ಇದ್ದಾರೆ. ಆ 70 ಲಕ್ಷ ರೈತರ ಪೈಕಿ ದೇಶಪಾಂಡೆಯವರ ಸಾಲದ ಲಾಭವನ್ನು ಪಡೆದುಕೊಳ್ಳತಕ್ಕಂಥವರು ಕೇವಲ ಒಂಬತ್ತು ಲಕ್ಷ. ಒಂಬತ್ತೂವರೆ ಲಕ್ಷ ಜನರು ಮಾತ್ರ ಇದ್ದಾರೆ. ಅದಕ್ಕಿಂತ ಜಾಸ್ತಿ ಇಲ್ಲ. ಏಕೆಂದರೆ ನೀವು ಸಾಲವನ್ನೇ ಕೊಡುವುದಿಲ್ಲ. ಹೊಸ ಮೆಂಬರ್ ಶಿಪ್‌ನ್ನು ಮಾಡುವುದಿಲ್ಲ. ಅಥವಾ ಅಫೆಕ್ಸ್ ಬ್ಯಾಂಕಿನಿಂದ ಸಾಲವನ್ನೂ ತರುವುದಿಲ್ಲ. ಉಳಿದವರೆಲ್ಲರೂ ಕೆಲವರು ನ್ಯಾಷನಲೈಸ್ಡ್ ಬ್ಯಾಂಕ್‌ನಿಂದ ತರುತ್ತಾರೆ, ಬೇರೆ ಬೇರೆ ಕಡೆಗಳಿಂದ ತರುತ್ತಾರೆ. ಅವರಿಗಂತೂ ನಿಮ್ಮ ಲಾಭವೇ ಇಲ್ಲ. ಈ 9 ಲಕ್ಷ ಜನರಿಗಾಗಿ ನಾವು ಇಷ್ಟು ಬಡಿದಾಡುತ್ತೇವಲ್ಲಾ. ಬಡಿದಾಡಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ ಒಂದು ಸಲವಾದರೂ ಆ ಡೈರೆಕ್ಟರ್, ಮೆಂಬರ್, ಛೇರ್ಮನ್, ಈ ಬ್ಯಾಂಕ್ ಯಾವ ಉದ್ದೇಶಕ್ಕಾಗಿ ಇದೆ, ಉಳಿದ 60 ಲಕ್ಷ ರೈತರಿಗೆ ನಾವು ಏನು ಮಾಡಬೇಕು ಎನ್ನುವ ಬಗ್ಗೆ ನಾವು ಏಕೆ ಯೋಚನೆ ಮಾಡುತ್ತಿಲ್ಲ?

ಶ್ರೀ ಜೆ. ಸಿ. ಮಾಧುಸ್ವಾಮಿ :- ಆ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮತ್ತೆ ಏಕೆ ಇಲ್ಲಿ ಯಾರು ಆ ಬಗ್ಗೆ ಕೇಳುವುದೇ ಇಲ್ಲ. ಪ್ರತಿ ಸಾರಿ ಯಾರು ಕೇಳುವುದೇ ಇಲ್ಲ. ಅದಕ್ಕಾಗಿ ನಾನು ಸದನದಲ್ಲಿ ಇಬ್ಬರ ಕಡೆಗೂ ಸೇರಿದಂತೆ ಹೇಳುತ್ತಿದ್ದೇನೆ. ಇಲ್ಲಿ ವೈಯುಕ್ತಿಕ ಪ್ರಶ್ನೆ ಬರುವುದಿಲ್ಲ. ಹೇಗೆ ಈ ಸಮಾಜದಲ್ಲಿ ಅನೇಕ ಬಾರಿ ಸೌಲಭ್ಯಗಳನ್ನು ತೆಗೆದುಕೊಂಡವರೇ ಪದೇ ಪದೇ ತೆಗೆದುಕೊಳ್ಳತಕ್ಕಂಥದ್ದು ಮತ್ತು ಮಾಫಿ ಆಗುವುದು ಕೂಡ ಅವರಿಗೆ, ಮತ್ತೆ ಸೌಲಭ್ಯ ಸಿಗುವುದೂ ಅವರಿಗೇ ಆಗಿದೆ. ಈ ರೀತಿಯಾದರೆ ಉಳಿದಂತ ರೈತರ ಗತಿ ಏನು? ಇದು ಒಂದು ಕಡೆ, ಇನ್ನು ಎರಡನೆಯದಾಗಿ ನಾವು ದೊಡ್ಡ ನೀರಾವರಿಗಳನ್ನು ಮಾಡುತ್ತೇವೆ, ಸಣ್ಣ ನೀರಾವರಿಗಳನ್ನು ಮಾಡುತ್ತೇವೆ, ಪಂಪ್ ಸೆಟ್ ಇದ್ದೂ ಮಾಡುತ್ತೇವೆ. ಇವು

ಎಲ್ಲಾದರಲ್ಲೂ ಮಾಡುತ್ತೇವೆ, ಆದರೆ ನೀವು ಇದೆಲ್ಲಾ ಲೆಕ್ಕ ಹಾಕಿದರೂ ಕೂಡ ನಿಮ್ಮ ಅಂಕಿ ಸಂಖ್ಯೆ 24 ಲಕ್ಷ ಅಥವಾ 25 ಲಕ್ಷಕ್ಕಿಂತಲೂ ಮೀರುವುದಿಲ್ಲ. ಅಂದರೆ ಉಳಿದ ಸುಮಾರು ಹೆಚ್ಚು ಕಡಿಮೆ 45 ಜನರು ಮೋಡದ ಕಡೆಗೆ ನೋಡುವದು, ಆಕಾಶದ ಕಡೆಗೆ ನೋಡುವುದು, ಕೆಳಗೆ ತಲೆ ಹಾಕುವುದು ಮತ್ತು ಕೊಡುವುದು, ಅವರ ಬಗ್ಗೆ ನಮಗ್ಯಾರಿಗೂ ಚಿಂತೆಯೇ ಇಲ್ಲ. ಅದರ ಬಗ್ಗೆ ಯೋಚನೆಯನ್ನು ಮಾಡುವುದಿಲ್ಲ. ಅದರ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ, ಪಂಚಾಯಿತಿ ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇವೊತ್ತು ಜಿಲ್ಲಾ ಪಂಚಾಯಿತಿಯಲ್ಲಿ ರೋಡ್‌ಗಾಗಿ ಹತ್ತು ಲಕ್ಷ ರೂಪಾಯಿಗಳನ್ನು ಪ್ರಾವಿಶನ್ ಇಡುತ್ತಾರೆ. ಆದರೆ ಒಂದು ಕೆರೆಗೆ ಒಂದು ಲಕ್ಷ ರೂಪಾಯಿಗಳನ್ನು ಇಡಿ ಎಂದರೆ ಇಡುವುದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ :- ಇದು ಸಾಲ ತೆಗೆದುಕೊಳ್ಳುವ ವ್ಯವಸ್ಥೆ. ಮಾನ್ಯ ಖರ್ಗೆ ಸಾಹೇಬರಿಗೆ ಇನ್ನೂ ಒಂದು ವಿಚಾರ ಗೊತ್ತಿಲ್ಲ. ಈ ಬಾರಿ ಎಲೆಕ್ಷನ್ಸ್‌ನಲ್ಲಿ ಗೌವರ್ನಮೆಂಟ್ ಷೇರ್ಸ್ ಹಾಕಿ ಏನು ಎಸ್.ಸಿ. ಎಸ್.ಟಿ. ಜನಾಂಗದವರನ್ನು ಏನು ಶೇರ್ ಹೋಲ್ಡ್‌ರಗಳನ್ನಾಗಿ ಮಾಡಿದ್ದೇವೋ ಅವರು ಯಾರೂ ಓಟನ್ನು ಹಾಕುವುದಕ್ಕೇ ಆಗಲೇ ಇಲ್ಲ ಸಾರ್. ಏಕೆಂದರೆ ದಿಢೀರ್ ಎಂದು ಶೇರ್ ಅಮೌಂಟ್‌ನ್ನು ಎನ್‌ಹ್ಯಾನ್ಸ್ ಮಾಡಿಕೊಂಡುಬಿಟ್ಟರು. ದಿಢೀರ್ ಅಂತ. ನಿಮ್ಮ ಎಲ್ಲಾ ಸಹಕಾರ ಸಂಘದವರು ಶೇರ್ ಅಮೌಂಟನ್ನು ಎನ್‌ಹ್ಯಾನ್ಸ್ ಮಾಡಿಕೊಂಡು ಅವರಿಗೆ ಬೇಕಾದಷ್ಟು ಷೇರಿಗೆ ಮಾತ್ರ ಹೆಚ್ಚುವರಿ ಎನ್‌ಹ್ಯಾನ್ಸ್ ಮೊತ್ತದ ದುಡ್ಡನ್ನು ಕಟ್ಟಿ, ಸರ್ಕಾರದ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟನಿಂದ ಯಾರ್‍ಯಾರು ಶೇರ್ ಹಾಕಿದ್ದರೋ ಅವರಿಗೆ no one was allowed to vote. ನಾನು ಕುಳಿತುಕೊಂಡು ಕೆ.ಡಿ.ಬಿ. ಸಭೆಯಲ್ಲಿ ಕೇಳಿದೆ. ಚಿಕ್ಕನಾಯಕನಹಳ್ಳಿಯಲ್ಲಿ ನಮ್ಮ ಹತ್ತಿರ ಹಣ ಇತ್ತುರೀ, ನಾನು ಹಣ ಕಟ್ಟುತ್ತಿದ್ದೆ, ಏಕೆ ನೀವು ನಮಗೆ ಹೇಳಲಿಲ್ಲವೆಂದು ಕೇಳಿದೆ. ಬೇಕೆಂತಲೇ ಇವರನ್ನು ಆಚೆ ಇಡಲೇಬೇಕು ಎಂದು ಈ ರೀತಿಯ ವ್ಯವಸ್ಥೆ. ಈ ವ್ಯವಸ್ಥೆ ಕೆಳಗಡೆ ರೈತ ಸಿಕ್ಕಿಕೊಂಡು ನರಳುತ್ತಿದ್ದಾನೆ.

ಶ್ರೀ ಆರ್. ವಿ.ದೇಶಪಾಂಡೆ (ಸಹಕಾರ ಸಚಿವರು) :- ಮಾನ್ಯ ಮಾಧುಸ್ವಾಮಿಯವರೆ, ಇಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದಿರಿ. ಆದಕ್ಕಾಗಿ ಈ ಬಗ್ಗೆ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಏಕೆಂದರೆ ಬೆಳಗಾಂ ಜಿಲ್ಲೆಯಲ್ಲಿ ಒಂದು ಶುಗರ್ ಫ್ಯಾಕ್ಟರಿಯಲ್ಲಿ 500 ರೂಪಾಯಿ ಷೇರ್ ಇದ್ದದ್ದನ್ನು 5000 ರೂಪಾಯಿ ಎಂದು ಎನ್‌ಹ್ಯಾನ್ಸ್ ಮಾಡಿದರು. ನನಗೆ ಈ ವಿಚಾರ ಬೆಳಗಾಂ ರಿವ್ಯೂ ಮೀಟಿಂಗ್‌ನಲ್ಲಿ ಗೊತ್ತಾದ ನಂತರ ನಾನು ಡೈರಕ್ಷನ್ಸ್ ಕೊಟ್ಟು 500 ರೂಪಾಯಿಯಲ್ಲಿ ಯಾರು ಎಲಿಜಿಬಲಿಟಿಯನ್ನು ಹೊಂದಿದ್ದರೋ ಅವರೆಲ್ಲರಿಗೂ ಓಟ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ ಹೀಗಾಗಿ ಇದುವರೆಗೆ

ಯಾರೂ ಆ ರೀತಿಯಲ್ಲಿ ಸದಸ್ಯರು ಇದ್ದಾರೋ ಅವರುಗಳಿಗೆ ಷೇರ್ ಮೊತ್ತವನ್ನು ಹೆಚ್ಚು ಮಾಡಿ ವಿನಾಕಾರಣ ಡಿಸ್ಸೈ ಮಾಡಿರುವುದು ನಮ್ಮ ಗಮನಕ್ಕೆ ಬೇರೆ ಕಡೆಯಿಂದ ಪಿಟಿಶನ್ ಬಂದಿಲ್ಲ. ಒಂದು ವೇಳೆ ಆ ರೀತಿಯಾಗಿ ಮಾಡಿರುವುದು ಯಾವುದಾದರೂ ಇದ್ದರೆ ತಾವು ನನ್ನ ಗಮನಕ್ಕೆ ತಂದರೆ ಎನ್‌ಕ್ವೈರಿ ಮಾಡಿಸೋಣ. ಆದರೆ ಬೆಳಗಾವಿಯ ರಿವ್ಯೂ ಕಾಲದಲ್ಲಿ ನನ್ನ ಗಮನಕ್ಕೆ ಬಂದಾಗ ತಕ್ಷಣ ಡೈರೆಕ್ಷನ್ಸ್ ಕೊಟ್ಟು ಅವರುಗಳಿಂದ ಓಟ್ ಮಾಡಿಸಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಹಾಗಾದರೆ ನಾನು ಈಗ ಚಿಕ್ಕ ನಾಯಕನಹಳ್ಳಿಯದ್ದನ್ನು ಹೇಳಿದ್ದೇನೆ. ಚಿಕ್ಕನಾಯಕನಹಳ್ಳಿಯಲ್ಲಿ ನಡೆದಿರುವ ಬಗ್ಗೆ ತಾವು ಎನ್‌ಕ್ವೈರಿ ಮಾಡಿಸಿ. ಇಲ್ಲಿಗೆ ನಾನು ಹೆಚ್ಚು ಹೇಳದೆ ಬಿಟ್ಟು ಬಿಡುತ್ತೇನೆ ಅಧ್ಯಕ್ಷರೇ, ಈಗ ನಾನು ಒಂದೇ ಒಂದು ವಿಚಾರವನ್ನು ಮಾನ್ಯ ಸಿದ್ದರಾಮಯ್ಯನವರಲ್ಲಿ ಕೇಳುವುದೇನೆಂದರೆ ರೈತರ ಪರವಾಗಿ ಹೆಚ್ಚಿನ ಕಾಳಜಿಯನ್ನು ಮಾನ್ಯ ಸಿದ್ಧರಾಮಯ್ಯನವರು ಇಟ್ಟುಕೊಂಡು ಅವರೇನು ಬಜೆಟ್‌ನಲ್ಲಿ ಹೇಳಿ ಹಣವನ್ನು ಇಟ್ಟಿದ್ದಾರೋ, ಅವರು ನಿಜವಾಗಿಯೂ ಕೂಡ ಒಳ್ಳೆಯ ಮಾತನ್ನು ಹೇಳಿದ್ದಾರೆ ಮತ್ತು ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ. ಆದಕಾರಣ ದಯಮಾಡಿ ಇದಕ್ಕೆ ರಾಜಕೀಯದ ಬಣ್ಣ ಹಚ್ಚದಂತೆ ಕನಿಷ್ಠ ಮುಂದಿನ ಮಾರ್ಚ್‌ವರೆಗೂ ರೈತರು ಸಾಲವನ್ನು ತೀರಿಸುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕು. ಎಲ್ಲಾ ಕ್ಯಾಟಗರಿಯನ್ನು ಇದರಲ್ಲಿ ತರಬೇಕು. ಹಿಂದೆ ಇಂಥಿಂಥ ಸಾಲಿಗೆ ಇಂಥಿಂಥವರು ಕಟ್ಟಿ ಎಂದು ಇರುವುದನ್ನೆಲ್ಲವನ್ನೂ ತೆಗೆದು ಯಾರು ಅಸಲನ್ನು ಕಟ್ಟುತ್ತಾರೆ. ಅವರಿಗೆ ಈವರೆಗೆ ಸಾಲವನ್ನು ಮನ್ನಾ ಮಾಡುತ್ತೇವೆ, ಎಂದು ಒಂದು ಆದೇಶವನ್ನು ಮಾಡಿ ದಯಮಾಡಿ ಇದನ್ನು ಮಾರ್ಚ್‌ವರೆಗೆ ವಿಸ್ತರಣೆ ಮಾಡಬೇಕು, ಅದರಲ್ಲಿ ಕೃಷಿ ಎಂದು ಏನಾದರೂ ಹೇಳಿ ರೈತರು ಸಾಲವನ್ನು ತೆಗೆದುಕೊಂಡಿದ್ದಾರೆ ಅದೆಲ್ಲವನ್ನೂ ಈ ವ್ಯಾಪ್ತಿಯಲ್ಲಿ ತರಬೇಕು. ಕ್ಯಾಟಲ್ ಶೆಡ್‌ಅನ್ನು ತರಬೇಕು. ಟ್ರ್ಯಾಕ್ಟರೂ ತರಬೇಕು. ಕೋಕನೇಟ್ ಡೆವಲಪ್‌ಮೆಂಟ್‌ದ್ದೂ ತರಬೇಕು, ಕಾಫಿಯದ್ದೂ ತರಬೇಕು, ಅಡಿಕೆಯದ್ದೂ ತರಬೇಕು, ಇದನ್ನೆಲ್ಲಾ ಮಾಡಬೇಕು ಎಂದು ನಾನು ಒತ್ತಾಯ ಮಾಡಿ ನನ್ನ ಮಾತನ್ನೂ ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೆ, ಒಟ್ಟಾರೆ ನಮ್ಮ ನಿಲುವಳಿ ಸೂಚನೆ ಬಡ್ಡಿ ಮತ್ತು ಸುಸ್ತಿ ಬಡ್ಡಿ ಕಟ್ಟುವುದಕ್ಕೆ ಅವಧಿಯನ್ನು ಮುಂದುವರಿಸಬೇಕು ಎಂಬುದೇ ಆಗಿದೆ. ಮೊದಲನೆಯದಾಗಿ ಈಗಾಗಲೇ ಅನೇಕರು ಹೇಳಿದ ಹಾಗೆ ನಾಲ್ಕು ವರ್ಷಗಳಿಂದ ಮಳೆಯೇ ಇಲ್ಲ. ಬಾವಿಗಳು ಬತ್ತಿ ಹೋಗಿವೆ. ಕೆರೆಗಳಲ್ಲಂತೂ ನೀರೇ ಇಲ್ಲ. ಎಲ್ಲಿಂದ ಎಲ್ಲಿಗೆ ಹೋದರೂ ನೀರಿಲ್ಲ. ಆದರೆ ಈ ನಮ್ಮ ಜಲಾಶಯಗಳಲ್ಲಿ ನೀರು ಹೇಗೆ ತುಂಬುತ್ತದೆ ಎಂದರೆ ಇಲ್ಲಿ ನೀರು ಕರ್ನಾಟಕದಲ್ಲಿ ಮಳೆ

ಬಿದ್ದು ಹರಿಯುವುದರಿಂದ ತುಂಬುತ್ತಿರುವುದಲ್ಲ. ನಮ್ಮ ಜಲಾಶಯಗಳಿಗೆ ಆಸರೆ ಕೇರಳ ರಾಜ್ಯ ಮತ್ತು ಆ ಕಡೆಗಳಲ್ಲಿನ ಗಡಿ ಪ್ರದೇಶಗಳಲ್ಲಿ ಬೀಳುವಮಳೆ. ಇದನ್ನು ಬಿಟ್ಟರೆ ನಮ್ಮ ರಾಜ್ಯದಲ್ಲಿ ಮಳೆ ಬಿದ್ದು ಜಲಾಶಯಗಳು ತುಂಬಿದೆ ಎಂದು ಹೇಳಿ ಸಂತೋಷ ಪಡುವ ರೀತಿಯಿಲ್ಲ. ಕೆರೆಗಳೆಲ್ಲವೂ ತುಂಬಿರುವುದನ್ನು ನಾವು ನೋಡಿ ಹತ್ತಾರು ವರ್ಷಗಳೇ ಆಗಿಹೋಯಿತು. ರಾಜ್ಯದಲ್ಲಿರತಕ್ಕಂಥ ನೂರಾರು ಕೆರೆಗಳು ತುಂಬಿ ಹತ್ತಾರು ವರ್ಷಗಳೇ ಆಗಿಹೋಗಿದೆ. ಇಲ್ಲೆಲ್ಲಾ ನೀರೇ ತುಂಬಿಲ್ಲದ ಪರಿಸ್ಥಿತಿ ಇರುವಾಗ. ರೈತರಿಗೆ ಒಂದಲ್ಲ, ನಾನಾ ರೀತಿಯ ತೊಂದರೆ. ಎಲ್ಲಾ ಫಸಲಿನ ಮೇಲು ರೋಗಗಳು ಬರುತ್ತಿವೆ. ಎಲ್ಲಾ ಬೆಳೆಗಳ ಮೇಲೂ ರೋಗ ಬಂದಿದೆ. ರೋಗ ನಿಯಂತ್ರಣ ಮಾಡುವುದಕ್ಕೆ ಸಂಪೂರ್ಣವಾಗಿ ಸರ್ಕಾರದಲ್ಲಿರುವವರು ಎಲ್ಲಾ ರೀರಿಯಲ್ಲೂ ವಿಫಲರಾಗಿದ್ದಾರೆ. ರೈತರಿಗೆ ಇನ್ನು ಉಳಿದಿರತಕ್ಕಂಥದ್ದು ಒಂದೇ ಮಾರ್ಗವೆಂದರೆ ಇಲ್ಲಾ ವಿಷದ ಬಾಟಲಿ, ಇಲ್ಲಾ ನೇಣುಗಂಬ, ಇವೆರಡೇ ಇವತ್ತು ಉಳಿದಿರುವುದು. ಅದು ಬಿಟ್ಟು ಬೇರೆ ಮಾರ್ಗವೇ ಇಲ್ಲವಾಗಿದೆ ಅವರಿಗೆ, ಕೋಟಿ ಕೋಟಿ ಲೂಟಿ ಮಾಡತಕ್ಕಂಥ. ಬ್ಯಾಂಕ್‌ಗಳನ್ನೇ ಮುಳುಗಿಸತಕ್ಕಂಥ ಅನೇಕ ಕುಳುಗಳು ಅರಾಮವಾಗಿದ್ದಾರೆ. ಚೆನ್ನಾಗಿದ್ದಾರೆ. ಅವರು ಸಾವಿರಾರು ಕೈಗಾರಿಕೆಗಳನ್ನು ಮಾಡುವುದು, ದುಡ್ಡು ತೆಗೆದುಕೊಳ್ಳುವುದು, ಸಾಮಫಲಕ ಬದಲಾವಣೆ ಮಾಡುವುದು, ಮತ್ತೆ ಲೂಟಿ ಮಾಡುವುದು, ಮತ್ತೆ ಹಣ ತೆಗೆದುಕೊಳ್ಳುವುದು. ಅಂತಹವರು ನೂರಕ್ಕೆ 80 ಭಾಗ ಇದ್ದಾರೆ. ಮಾನ್ಯ ಮಾಧುಸ್ವಾಮಿಯವರು ಹೇಳಿದ ರೀತಿಯಲ್ಲಿ, ಮಾನ್ಯ ಜನಾರ್ಧನ ಪೂಜಾರಿಯವರು ಒಂದು ಹಂತದಲ್ಲಿ ಅವರು ಬ್ಯಾಂಕಿನ ಸಚಿವರಾಗಿದ್ದಾಗ ಸಾಲ ಮೇಳ ಎಂದು ಮಾಡಿದ್ದರು, ಅದು ನಿಜಕ್ಕೂ ಚೆನ್ನಾಗಿತ್ತು. ರೇಷನ್ ಕಾರ್ಡು ತೋರಿಸಿದರೆ ಕನಿಷ್ಠ 5,000 ರೂಪಾಯಿ ಸಿಗುತ್ತದೆ ಎನ್ನುವ ನಂಬಿಕೆ ಇತ್ತು. ಆದರೆ ನಂಬಿಕೆ ಇವತ್ತಿಲ್ಲ. ರೈತನಿಗೆ ನಾನಾ ರೀತಿಯ ತೊಂದರೆ ಇರುವುದರಿಂದ, ಅವನಿಗೆ ಸಾಲ ಕಟ್ಟುವುದಕ್ಕೆ ಆಗದೇ ಇರುವುದರಿಂದ, ಈಗ ರೈತರಿಗೆ ನೀಡಿರುವಂತಹ ಸವಲತ್ತನ್ನು ಮುಂದುವರೆಸಬೇಕೆಂದು ನಾವು ಏನು ನಿಲುವಳಿ ಸೂಚನೆ ತಂದಿದ್ದು. ಅದಕ್ಕೆ ತಾವು ನಿಯಮ 69 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಆದುದರಿಂದ ಒಂದು ವರ್ಷದ ಅವಧಿಯವರೆಗೆ ಆ ಅನುಕೂಲತೆಗಳನ್ನು ಮುಂದುವರೆಸಬೇಕು, ತಾವು ಮುಂದುವರೆಸಲಿಲ್ಲವೆಂದರೆ ನಾವು ಸದನ ಬಿಟ್ಟು ಹೋಗುವುದಿಲ್ಲವೆಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ವಿ. ಶ್ರಿರಾಮರೆಡ್ಡಿ (ಬಾಗೇಪಲ್ಲಿ) :– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಎಲ್ಲಾ ವಿಚಾರಗಳನ್ನು ವಿರೋಧ ಪಕ್ಷದ ಮಾನ್ಯ ಮುಖಂಡರುಗಳು ಹೇಳಿದ್ದಾರೆ. ನಾವು ಮುಖ್ಯವಾಗಿ ನಿಲುವಳಿ ಸೂಚನೆ ತಂದಿರತಕ್ಕಂಥ ಉದ್ದೇಶವೇನೆಂದರೆ ಹಿಂದೆ ಮಾನ್ಯ

ಸಿದ್ಧರಾಮಯ್ಯನವರು ಮತ್ತು ಈ ಸರ್ಕಾರ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುತ್ತೇವೆಂದು ಏನು ಘೋಷಣೆ ಮಾಡಿದ್ದರು, ಆ ಅವಧಿಯನ್ನು ಏಕೆ ವಿಸ್ತರಣೆ ಮಾಡಬೇಕೆಂದರೆ, ತಾವು ಜೂನ್ 30ನೇ ತಾರೀಖು ಎಂದು ಅವಧಿಯನ್ನು ನಿಗದಿ ಮಾಡಿದ್ದೀರಿ, ಈ ಜೂನ್ ತಿಂಗಳು ರೈತರಿಗೆ ತುಂಬಾ ಅನಾನುಕೂಲವಾದ ಕಾಲ. ಏಕೆಂದರೆ ಸುಮಾರು ಕಡೆ ಇನ್ನೂ ಮಳೆ ಬಂದಿಲ್ಲ. ಅದು ಬೇರೆ ಪ್ರಶ್ನೆ, ಅಕಸ್ಮಾತ್ ಮಳೆ ಬಂದರೆ ಅವರು ಪುನಃ ಬಂಡವಾಳವನ್ನು ಹಾಕಬೇಕು. ವ್ಯವಸಾಯವನ್ನು ರೈತರು ಪ್ರಾರಂಭ ಮಾಡಬೇಕಾದರೆ ಅವರು ಅದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡಬೇಕಾಗುತ್ತದೆ. ಅದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ಅವರಿಗೆ ಹಣ ಬೇಕು. ಇನ್‌ವೆಸ್ಟ್‌ಮೆಂಟ್‌ಗೆ ಅವರಲ್ಲಿ ಹಣ ಇಲ್ಲದೆ ಹೋದರೆ ರೈತರು ಮತ್ತೆ ವ್ಯವಸಾಯವನ್ನ ಪ್ರಾರಂಭ ಮಾಡುವುದಕ್ಕೆ ಖಂಡಿತಾ ಸಾಧ್ಯವಾಗುವುದಿಲ್ಲ. ರೈತರು ರೀಇನ್‌ವೆಸ್ಟ್‌ಮೆಂಟ್ ಮಾಡಬೇಕಾಗಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿರತಕ್ಕಂಥ ಈ ಕಾಲ ಘಟ್ಟದಲ್ಲಿ ನೀವೇನಾದರೂ ಜೂನ್ 30ನೇ ತಾರೀಖು ಕೊನೆ ಎಂದು ಹಠ ಹಿಡಿದು ಕುಳಿತರೆ ರೈತರಿಂದ ಸಾಲವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಸುಮಾರು ಜನ ರೈತರು ಜೂನ್ 30 ಕೊನೆ ದಿನಾಂಕ ಎಂದು ತಿಳಿದುಕೊಂಡು ಏನಾದರೂ ಮಾಡಿ ಸಾಲ ತೀರಿಸಬೇಕೆಂದು ಇದ್ದಬದ್ದ ಜಮೀನು ಮಾರುತ್ತಿದ್ದಾರೆ. ಒಡವೆ ಮಾರುತ್ತಿದ್ದಾರೆ. ಮನೆಯಲ್ಲಿ ಏನೇನಿದೆ ಅದನ್ನೆಲ್ಲಾ ಮಾರಾಟ ಮಾಡಿಕೊಂಡು ಕಟ್ಟುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಒಂದು ಕಡೆ ಸಾಲ ಕಟ್ಟಬೇಕು, ಇನ್ನೊಂದು ಕಡೆ ಮಳೆ ಬಂದರೆ ಮತ್ತೆ ಅವರು ಬಂಡವಾಳ ಹಾಕಿ ವ್ಯವಸಾಯವನ್ನು ಪ್ರಾರಂಭ ಮಾಡಬೇಕು. ಹಾಗಾಗಿ ಜೂನ್ 30ರಂದು ಕಡೆ ದಿನಾಂಕ ಎಂದು ಏನು ನಿಗದಿ ಮಾಡಿದ್ದೀರಿ. ಈ 30 ಎನ್ನುವುದು ಅಕಾಲ, ಇದು ಸಕಾಲ ಅಲ್ಲ. ಇದು ರೈತನಿಗೆ ಯಾವುದೇ ರೀತಿಯಲ್ಲಿ ಹಣ ಬರತಕ್ಕಂಥ ಸಂದರ್ಭವಲ್ಲ. ಹಾಗಾಗಿ ರೈತರಿಗೆ ಸಾಲ ಪಾವತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಯಾವ ಸದುದ್ದೇಶದಿಂದ ಈ ಸರ್ಕಾರ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಆ ಸದುದ್ದೇಶವನ್ನು ಸಂಪೂರ್ಣವಾಗಿ ಪೂರೈಸಲು ಆಗುವುದಿಲ್ಲ. ಆ ಸದುದ್ದೇಶ ಉಪಯೋಗವಾಗುವುದಿಲ್ಲ. ರೈತರಿಗೂ ಪ್ರಯೋಜನ ವಾಗುವುದಿಲ್ಲ. ನಿಮಗೆ ಪ್ರಾಮಾಣಿಕವಾಗಿ, ಈ ಸರ್ಕಾರಕ್ಕೆ ಇದರ ಫಲ ರೈತರಿಗೆ ಸಿಗಬೇಕೆನ್ನುವ ಸದುದ್ದೇಶ ಇದ್ದರೆ, ಈ ಬಡ್ಡಿ ಮನ್ನಾ ಅವಧಿ ಏನಿದೆ ಇದನ್ನು ಕನಿಷ್ಠ ಪಕ್ಷ ಮುಂದಿನ ಜನವರಿಯವರೆಗಾದರೂ ವಿಸ್ತಾರ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ಈ ಸರ್ಕಾರ ರೈತರಿಗೆ ಕೊಟ್ಟಿರುವಂತಹ ಸೌಲಭ್ಯ ಯಾವ ರೀತಿಯಲ್ಲಿ ಕೂಡ ಪ್ರಯೋಜನವಾಗುವುದಿಲ್ಲ. ಇದು ನಮ್ಮ ಮೊದಲನೆ ಬೇಡಿಕೆ, ಅವಧಿಯನ್ನು ಜನವರಿ ಕೊನೆಯವರಿಗೆ ಮುಂದುವರೆಸಬೇಕೆನ್ನವುದು ಮೊದಲನೆ ಪ್ರಶ್ನೆ. ಇನ್ನು 2ನೇಯದಾಗಿ ನೀವು ಬಡ್ಡಿ ಮನ್ನಾ

ಮಾಡುತ್ತೇವೆಂದು ಘೋಷಣೆ ಮಾಡಿದಿರಿ. ನೀವು ದಾಖಲೆ ತೆಗೆಸಿ ನೋಡಿ. ತಾವು ಎಲ್ಲಾ ವಿಧವಾದಂತಹ ಕೃಷಿಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಸದನದಲ್ಲಿ ಘೋಷಣೆಯನ್ನು ಸರ್ಕಾರ ಮಾಡಿದೆ. ಆದರೆ ಇವತ್ತು ಒಂದೇ ಒಂದು ಸಾಲಕ್ಕೆ ಮಾತ್ರ ಅನ್ವಯಿಸುವ ರೀತಿಯಲ್ಲಿ ಸರ್ಕಾರ ಆದೇಶ ಕಳುಹಿಸಿದೆ. ಆ ಆದೇಶದಲ್ಲಿ ಇರುವುದೇನೆಂದರೆ ಸಹಕಾರ ಸಂಘಗಳಲ್ಲಿ ಕೃಷಿ ನಿಮಿತ್ತವಾಗಿ ಪಡೆದಿರತಕ್ಕಂಥ ಸಾಲದ ಮೇಲಿನ ಬಡ್ಡಿಯನ್ನು ಮಾತ್ರ ಅದು ಅಸಲಿಗಿಂತ ಹೆಚ್ಚಿಗೆ ಏನಾದರೂ ಬಡ್ಡಿ ಕಟ್ಟಿದರೆ ಅವರಿಗೆ ಮಾತ್ರ ಈ ಪ್ರಯೋಜನವಾಗಬೇಕು ಎಂದು ನಿರ್ದಿಷ್ಟವಾಗಿ ಈ ಸರ್ಕ್ಯುಲರ್‌ನಲ್ಲಿ ಕಳುಹಿಸಿದ್ದೀರಿ. ಆಲೇ ಮಾನ್ಯ ಖರ್ಗೆಯವರು ಹೇಳಿದ್ದು ಸತ್ಯ. 70 ಲಕ್ಷ ರೈತರು ಕರ್ನಾಟಕ ರಾಜ್ಯದಲ್ಲಿ ಇದ್ದಾರೆ. ಆದರೆ ಇದರ ಪ್ರಯೊಜನ ಸಿಕ್ಕಿರುವುದು ಕೇವಲ ಶೇಕಡ 5 ರಷ್ಟು ರೈತರಿಗೆ ಮಾತ್ರ. ಜಾಸ್ತಿ ಜನ ರೈತರಿಗೆ ಪ್ರಯೋಜನ ಸಿಕ್ಕಿಲ್ಲ. ಏಕೆ ಸಿಕ್ಕಿಲ್ಲವೆಂದರೆ, ನೀವು ಮಾಡಿರುವ ವಿಧಾನ ಹಾಗೂ ಸರ್ಕಾರ ಕಳುಹಿಸತಕ್ಕಂಥ ಸರ್ಕ್ಯೂಲರ್ ಏನಿದೆ ಆ ಕಾರಣದಿಂದಾಗಿ, ಅದು ಹೆಚ್ಚಿ ವಿಭಾಗದ ರೈತರಿಗೆ ಪ್ರಯೋಜನವಾಗಿಲ್ಲ. ಈಗ ಕ್ಯಾಟಲ್ ಶೆಡ್‌ಗೆ ಲೋನ್ ತೆಗೆದುಕೊಂಡಿದ್ದಾರೆ. ರೇಷ್ಮೆ ಹುಳು ಸಾಕಾಣಿಕೆಗೆ ಮನೆ ಕಟ್ಟುವುದಕ್ಕೆ ಸಾಲ ತೆಗೆದುಕೊಂಡಿದ್ದಾರೆ. ಪೌಲ್ಟ್ರಿ ಮಾಡುವುದಕ್ಕೆ ಸಾಲ ತೆಗೆದುಕೊಂಡಿದ್ದಾರೆ. ಇವೆಲ್ಲವೂ ಕೂಡ ಕೃಷಿ ಸಂಬಂಧಿತ ಸಾಲಗಳೇ, ಅದರೆ ಇದು ಯಾವುದೇ ಸಾಲಕ್ಕೆ ಬಡ್ಡಿ ಮನ್ನಾ ಇಲ್ಲವೆಂದು ಹೇಳಿದ್ದಾರೆ. ಆದುದರಿಂದ ಆ ಪ್ರಯೋಜನ ಕೇವಲ 5 ಪರ್ಸೆಂಟ್ ರೈತರಿಗೆ ಮಾತ್ರ ಆಗುತ್ತಿದೆ. ಯಾವುದೇ ರೀತಿಯಲ್ಲಿ ಎಲ್ಲಾ ರೈತರಿಗೂ ಪ್ರಯೋಜನವಾಗುವುದಿಲ್ಲ. ಹಾಗಾಗಿ ಈ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವುದನ್ನು ಕೃಷಿಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ಸಾಲಗಳಿಗೆ ಇದು ವಿಸ್ತರಣೆಯಾಗಬೇಕು. ಇದು ಎರಡನೇ ಬೇಡಿಕೆ. ಇವರೆಡನ್ನು ಒಪ್ಪಿ ಸರ್ಕಾರ ಜೂನ್ 30ನೇ ತಾರೀಖು ಕಡೆ ದಿನ ಎಂದು ಏನು ಹೇಳಿದೆ, ಅದರ ಅವಧಿ ವಿಸ್ತರಣೆ ಬಗ್ಗೆ ತಕ್ಷಣ ತೀರ್ಮಾನ ತೆಗೆದುಕೊಳ್ಳಬೇಕು. ಏಕೆಂದರೆ ನಾಳೆ ಬ್ಯಾಂಕುಗಳಲ್ಲಿ ಡೆಪಾಸಿಟ್ ಪ್ರಾರಂಭವಾಗುತ್ತದೆ, ಅದರ ಬಗ್ಗೆ ಇವತ್ತೇ ತೀರ್ಮಾನವನ್ನು ತೆಗೆದುಕೊಂಡು ಈ ಆದೇಶವನ್ನು ಬದಲಿಸಿ, ಕೊನೇ ಪಕ್ಷ ಜನವರಿ ತಿಂಗಳವರೆಗಾದರೂ ಈ ಅವಧಿಯನ್ನು ವಿಸ್ತರಣೆ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ. ಎಂ. ಉದಾಸಿ (ಹಾನಗಲ್) :- ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬರಗಾಲ ಬಂದಂತಹ ಸಂದರ್ಭದಲ್ಲಿ ರೈತರು ಅತ್ಯಂತ ಶೋಭೆಗೆ ಒಳಗಾಗಿದ್ದಾರೆ ಮತ್ತು ತೀವ್ರತರವಾದಂತಹ ಹಾನಿಗೆ ಒಳಗಾಗಿದ್ದಾರೆ. ಈ ಸಂದರ್ಭದಲ್ಲಿ ಅನೇಕ ನನ್ನ ಮಿತ್ರರು ಮಾತನಾಡಿದ ಹಾಗೆ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಸಲುವಾಗಿ ಕೇಳಿರುವ ಕೋರಿಕೆಯನ್ನು ಮುಂದುವರೆಸಬೇಕು ಎನ್ನುವಂತಹ

ಭಾವನೆಯನ್ನು ವ್ಯಕ್ತಪಡಿಸಿದರು. ಇದರಲ್ಲಿ ಈಗಾಗಲೇ ಘೋಷಣೆ ಮಾಡಿರುವಂತಹ ವಿಚಾರದಲ್ಲಿ ಏನಿದೆ ಎಂದರೆ ದಿನಾಂಕ: 31-03-2004 ರವರೆಗೆ ಮಾತ್ರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕು, ಅದರ ನಂತರ ಇವತ್ತಿನ ತಾರೀಖಿನವರೆಗೆ ಹಿಡಿಯುವುದಾದರೆ ಒಂದು ವರ್ಷ ಮೂರು ತಿಂಗಳು ಬಡ್ಡಿಯನ್ನು ಕಟ್ಟಿದರೆ ಅಸಲು ಮನ್ನಾ ಆಗುತ್ತದೆಂದು ಅವರ ನಿರ್ದಿಷ್ಟವಾಗಿ ಸುತ್ತೋಲೆ ಪ್ರಕಾರ ಎಲ್ಲಾ ಜಿಲ್ಲಾ ಬ್ಯಾಂಕಿನ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದಾರೆ ಮತ್ತು ಅದೇ ರೀತಿ ವಸೂಲು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಈ ರೀತಿ ಮಾಡುವುದರಿಂದ ಸರ್ಕಾರ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಬಡ್ಡಿ ಮನ್ನಾ ಮಾಡಬೇಕು ಎನ್ನುವ ಇಚ್ಛಾ ಶಕ್ತಿ ಸರ್ಕಾರಕ್ಕೆ ಇದ್ದರೆ ಅಸಲು ಪಾವತಿ ಮಾಡಿದರೆ ಮಾತ್ರ ಬಡ್ಡಿ ಮನ್ನಾ ಮಾಡಬೇಕು ಎನ್ನುವುದು ಏಕೆ? 400 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಇಟ್ಟಿರಬೇಕಾದರೆ, ಇವತ್ತಿನ ಪರಿಸ್ಥಿತಿಯಲ್ಲಿ ರೈತರು ಅಸಲು ತುಂಬುವಂತಹ ಪರಿಸ್ಥಿತಿಯಲ್ಲಿ ಇಲ್ಲ. ತಮಗೆ ಗೊತ್ತಿರುವ ಹಾಗೆ 70 ಲಕ್ಷ ಜನ ರೈತರು ಇಂಬೇಕಾದರೆ ಅದರಲ್ಲಿ 10 ಲಕ್ಷ ಜನ ರೈತರು ಸಹಕಾರಿ ಸಂಘಗಳಿಂದ ತೆಗೆದುಕೊಂಡಿರುವಂತಹ 1900 ಕೋಟಿ ರೂಪಾಯಿ ಸಾಲದಲ್ಲಿ ಶೇಕಡ 20 ರಷ್ಟು ಎಂದರೆ ಕೇವಲ 2 ಲಕ್ಷ ರೈತರು ಮಾತ್ರ ಇಲ್ಲಿಯವರೆಗೆ ಪೇಮೆಂಟ್ ಮಾಡಿದ್ದಾರೆ. ಅದರಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ರೈತರು ಬೇರೆ ಕಡೆ ಸಾಲ ಮಾಡಿ ಸಾಲ ತೀರಿಸಿದ್ದಾರೆ. ರೈತರು ಬೇರೆ ಕಡೆ ಸಾಲ ಮಾಡಿ ಸಾಲ ತೀರಿಸುವಂತಹ ವ್ಯವಸ್ಥೆ ಬಂದಿದ್ದರೆ, ಇದು ಮತ್ತೊಂದು ಶೋಷಣೆಗೆ ದಾರಿಯಾಗುತ್ತಾ ಇದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಒಂದು ವೇಳೆ 400 ಕೋಟಿ ರೂಪಾಯಿಗಳಷ್ಟು ಹಣವನ್ನು ರೈತರ ಬಡ್ಡಿ ಮನ್ನಾ ಮಾಡುವುದಕ್ಕೆ ಇಟ್ಟಿದ್ದೇ ಆದರೆ ಬಡ್ಡಿಯನ್ನು ಮನ್ನಾ ಮಾಡಿಬಿಡಿ. ರೈತರು ಅಸಲು ಏನು ಕಟ್ಟಬೇಕಾಗಿದೆ ಅದನ್ನು ಎರಡು ಕಂತುಗಳ ರೀತಿಯಲ್ಲಿ ಮಾರ್ಚ್ 31 ರ 2006 ರೊಳಗೆ ಕಟ್ಟಬೇಕೆಂದು ಹೇಳಬಹುದಿತ್ತು. ಇದರ ಬಗ್ಗೆ ಸಂಪೂರ್ಣವಾಗಿ ಆಲೋಚನೆ ಮಾಡಬೇಕು ಮತ್ತು ಗಂಭೀರವಾಗಿ ಆಲೋಚನೆ ಮಾಡಬೇಕು.

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ತಾವು ಏನು ಹೇಳುತ್ತಿದ್ದೀರಿ, ಆ ಮಾತು ಸರಿ, ಮಾನ್ಯ ಖರ್ಗೆಯವರು ಒಂದು ಒಳ್ಳೆಯ ಮಾತನ್ನು ಹೇಳಿದರು. ಕೇವಲ ನಾವು ಮಾಡುತ್ತಿರುವುದು 25 ರಿಂದ 30 ಪರ್ಸೆಂಟ್ ರೈತರಿಗೆ ಮಾತ್ರ, ಇನ್ನು ಉಳಿದ 70 ಭಾಗದ ರೈತರಿಗೆ ಏನಾದರೂ ಅನುಕೂಲವಾಗುವಂತಹ ಸಲಹೆ ಕೊಡಿ. ಸಮಗ್ರ ರೈತರಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಏನು ಮಾಡಬೇಕು ಎನ್ನುವುದಕ್ಕೆ ಸಲಹೆ ಕೊಡಿ.

ಶ್ರೀ ಸಿ. ಎಂ. ಉದಾಸಿ :– ಮೊದಲು ನಾನು ಸಹಕಾರಿ ಬ್ಯಾಂಕುಗಳ ಸಾಲದ ಬಗ್ಗೆ ಮಾತನಾಡಿ ಮುಂದೆ ಆ ವಿಚಾರ ಮಾತನಾಡಬೇಕೆಂದು ಇದ್ದೇನೆ. ಮೊನ್ನೆ ದೂರದರ್ಶನದಲ್ಲಿ ಕೃಷಿ ಆಯುಕ್ತರು ಒಂದು ಮಾತು ಹೇಳಿದರು. ಏನೆಂದರೆ ರಾಜ್ಯದಲ್ಲಿ 53 ಲಕ್ಷ ಜನ ಸಣ್ಣ ಮತ್ತು ಅತೀ ಸಣ್ಣ ರೈತರು ಇದ್ದಾರೆಂದು ಹೇಳಿದರು. 1999–2000 ದಲ್ಲಿ ಕೇವಲ 62 ಲಕ್ಷ ಜನ ರೈತರು ಇದ್ದರು. ಆದರೆ ಇವತ್ತು 70 ಲಕ್ಷ ಜನ ರೈತರಿದ್ದಾರೆಂದರೆ ತಲೆಮಾರು ಹಿಸ್ಸೆ ಆಗುವುದರಿಂದ ಪಾಲುದಾರಿಕೆಯಿಂದ ಸಣ್ಣ ಮತ್ತು ಅತೀ ಸಣ್ಣ ರೈತರಾಗುತ್ತಿದ್ದಾರೆ. ಇವತ್ತು ಎರಡು ಎಕರೆಗಿಂತ ಕಡಿಮೆ ಇರುವಂತಹ ರೈತರೇ ಕನಿಷ್ಟ 30 ಲಕ್ಷ ರಾಜ್ಯದಲ್ಲಿ ಇರಬಹುದೆಂಬ ಭಾವನೆ ಬರುತ್ತಿದೆ. ಇನ್ನು ಒಂದೆರಡು ತಲೆಮಾರುಗಳಲ್ಲಿ 70 ಲಕ್ಷದಿಂದ 80 ಲಕ್ಷ ಜನ ರೈತರು ಆಗುತ್ತಾರೆ. ಇಲ್ಲಿ 80 ಲಕ್ಷ ರೈತರು ಆದರೆ, ಅದರಲ್ಲಿ ಶೇ 75 ರಷ್ಟು ಸಣ್ಣ ರೈತರೇ ಆಗುತ್ತಿರಬೇಕಾದರೆ ಇವತ್ತು ರೈತರ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ. ಇಂತಹ ಸಂದರ್ಭವಿರುವಾಗ ಇವತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸುಮಾರು 30 ಲಕ್ಷ ಜನ ರೈತರು ಬೆಳೆ ಸಾಲವನ್ನು ಪಡೆಯುತ್ತಿದ್ದಾರೆ. ಈ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಡೆದಂತಹ ರೈತರಿಗೆ ಬಡ್ಡಿ ಮನ್ನಾ ಇಲ್ಲ. ಇದನ್ನೂ ಸಹ ಸರ್ಕಾರ ಒಮ್ಮೆ ಆಲೋಚನೆಯನ್ನು ಮಾಡಬೇಕು. ಇವರಿಗೆ ಶೇಕಡ 6ರಂತೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಬಡ್ಡಿದರದಂತೆ ಸಾಲ ಸಿಗುವಂತಹ ವ್ಯವಸ್ಥೆಯಾಗಬೇಕು. ಇದರ ಜೊತೆಗೆ ಈಗ ಸದನಕ್ಕೆ ಸಹಕಾರಿ ಸಚಿವರು ಬಂದಿದ್ದಾರೆ. ಅವರ ಗಮನಕ್ಕೆ ಮತ್ತೊಮ್ಮೆ ವಿಷಯವನ್ನು ತರಲಿಚ್ಛಿಸುತ್ತೇನೆ. ತಾವು ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿದ್ದೆ ಆದರೆ, ಬಡ್ಡಿ ವಜಾ ಮಾಡಬೇಕೆನ್ನಬೇಕೆಂಬ ಗುರಿಯನ್ನು ಹೊಂದಿರುವಾಗ, ಒಂದು ಸಾರಿ 1900 ಕೋಟಿ ರೂಪಾಯಿಗಳಿಗೆ 400 ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡುವ ಸಲುವಾಗಿ ಆಯವ್ಯಯದಲ್ಲಿ ಇದನ್ನು ಇಟ್ಟಿರುವಾಗ, ತಾವು ಬಡ್ಡಿ ಮನ್ನಾ ಮಾಡಿ, ಉಳಿದಿರುವಂತಹ ಅಸಲನ್ನು ಇವತ್ತು ತುಂಬಲು ಸಾಧ್ಯವಿಲ್ಲದೇ ಇರುವಂತಹ ಸಂದರ್ಭದಲ್ಲಿ, ಅವರು ಬೇರೆ ಕಡೆಯಿಂದ ಸಾಲವನ್ನು ತೆಗೆದುಕೊಂಡು ಬಂದು ಸಾಲವನ್ನು ತೀರಿಸುವ ಬದಲಾಗಿ ಅವರಿಗೆ ಎರಡು ಕಂತುಗಳನ್ನು ಮಾಡಿ, ಇದನ್ನು 2006ರ ಮಾರ್ಚ್ ತಿಂಗಳೊಳಗೆ ತುಂಬಬೇಕೆಂದು ಮಾಡುವ ಸಲಹೆಯನ್ನು ತಾವು ಏಕೆ ಪರಿಶೀಲಿಸಬಾರದು, ಎಂಬ ಬಗ್ಗೆಯೂ ತಾವು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಈಗ ಏನು ಆಗಿದೆಯೆಂದರೆ ಸಹಕಾರಿ ಬ್ಯಾಂಕ್‌ಗಳಲ್ಲಿ ಕೊಡುವಂತಹ ಸಾಲದ ಪ್ರಮಾಣ ಏನು ಇದೆಯೆಂಬುದನ್ನು ಸಹ ನಾವು ಗಮನಿಸಬೇಕಾಗಿದೆ. ಅಲ್ಲಿ ಏನಾಗಿದೆಯೆಂದರೆ ಬೆಳೆ ಸಾಲವನ್ನು ಕೊಡುತ್ತಿರುವಾಗ ಕ್ರಾಪ್ ಪ್ಯಾಟ್ರನ್ ಪ್ರಕಾರ ಬೇಕಾದಂತಹ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ ಸಾಲವನ್ನು ಕೊಡುತ್ತಾ ಇಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಧಾರವಾಡ ಜಿಲ್ಲೆಯ ಕೆಸಿಸಿ ಬ್ಯಾಂಕ್ 3 ಜಿಲ್ಲೆಗಳಲ್ಲಿ ಕೊಡುತ್ತಿರುವಂತಹ

ಸಾಲ ಏನು ಇದೆ. ಅದು ಒಂದು ಎಕರೆಗೆ ಭತ್ತಕ್ಕಾಗಲಿ, ಗೋವಿನ ಜೋಳಕ್ಕಾಗಲಿ, ಒಂದು ಸಾವಿರ, ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಾಲ್ಕು ಸಾವಿರ ರೂಪಾಯಿಗಳಿಂದ ಒಂಭತ್ತು ಸಾವಿರ ರೂಪಾಯಿಗಳವರೆಗೆ ಕೊಡುತ್ತಿದ್ದಾರೆ. ಇವತ್ತು ಸರ್ಕಾರ ಜನರ ಕಣ್ಣಿಗೆ ಮಣ್ಣು ಎರಚುವಂತಹ ಕೆಲಸವನ್ನು ಮಾಡುತ್ತಿದೆ. ಇವತ್ತು ಸಹಕಾರಿ ಬ್ಯಾಂಕ್‌ಗಳಲ್ಲಿ ಸರಿಯಾಗಿ ಸಾಲ ಸಿಗುವಂತಹ ವ್ಯವಸ್ಥೆ ಕೂಡ ಇಲ್ಲ. ಇದು ಕೇವಲ 10 ಲಕ್ಷ ಜನ ರೈತರಿಗೆ ಕೊಡುವಂತಹ ಒಂದು ವ್ಯವಸ್ಥೆ ಇರುವಾಗ ಉಳಿದ ಎಲ್ಲಾ ರೈತರಿಗೆ ಅನುಕೂಲವನ್ನು ಮಾಡಬೇಕಾದರೆ ಇವರು ಎರಡು ವಿಚಾರವನ್ನು ಮಾಡಬೇಕು. ಮೊದಲನೆಯದಾಗಿ 400 ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡಬೇಕು. ಎರಡನೇಯದಾಗಿ ಎರಡು ಕಂತುಗಳಲ್ಲಿ ಅಸಲನ್ನು ವಸೂಲು ಮಾಡುವಂತಹ ವ್ಯವಸ್ಥೆಯನ್ನು ಇಟ್ಟುಕೊಳ್ಳಬೇಕು. ಇವರು ಅನಿವಾರ್ಯವಾಗಿ ಬೇರೆ ಕಡೆಗಳಲ್ಲಿ ಸಾಲವನ್ನು ಮಾಡಿ, ಸಾಲ ತೀರಿಸುವುದಕ್ಕೆ ಹೋಗಿ, ಮತ್ತೊಮ್ಮೆ ಅವರು ಶೋಷಣೆಗೆ ಒಳಗಾಗುವುದನ್ನು ತಪ್ಪಿಸುವುದರ ಜೊತೆಗೆ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಮಾಡಿರುವಂತಹ ರೈತ ಬಡ್ಡಿ ಮನ್ನಾ ಮಾಡುವ ವಿಚಾರದಲ್ಲಿ ಸರ್ಕಾರ ತನ್ನ ಜವಾಬ್ದಾರಿಯನ್ನು ಪಡೆದುಕೊಳ್ಳಬೇಕೆನ್ನುವಂತಹ ಮಾತನ್ನು ಹೇಳಲಿಚ್ಛಿಸುತ್ತೇನೆ. ನಾವು 2003–2004ನೇ ಇಸವಿಯ ಹಿಂಗಾರಿ ಬೆಳೆ ವಿಮೆಯ ಬಗ್ಗೆ ಪ್ರಸ್ತಾಪ ಮಾಡಿದಾಗ ಮಾನ್ಯ ಕೃಷಿ ಸಚಿವರು ಒಂದು ಮಾತನ್ನು ಹೇಳಿದರು. ಇವರು 2003–04ನೇ ಇಸವಿಯ ಹಿಂಗಾರಿ ಬೆಳೆ ವಿಮೆಯನ್ನು ಒಂದು ವರ್ಷ ವಿಳಂಬ ಮಾಡಿ ಕೊಟ್ಟಿದ್ದಾರೆ. ಒಂದು ತಿಂಗಳು ವಿಳಂಬವಾಗಿ ಶೇಕಡ 24ರಷ್ಟು ವಿದ್ಯುತ್ ಬಿಲ್ ತುಂಬುವಂಥಾದ್ದು ತಡವಾದರೆ ಬಡ್ಡಿಯನ್ನು ಹಾಕುತ್ತಾರೆ. ಇಲ್ಲಿ ಒಂದು ವರ್ಷ ವಿಳಂಬವಾದರೆ ಕೊಡುವಂತಹ ಬಡ್ಡಿಯನ್ನು ಯಾರು ಕೊಡಬೇಕು ಎನ್ನುವ ಬಗ್ಗೆ ಯಾರೂ ಆಲೋಚನೆಯನ್ನು ಮಾಡಲಿಲ್ಲ. 2004–05 ನೇ ಸಾಲಿನ ಬೆಳೆ ವಿಮೆ ಮುಂಗಾರಿ ಬೆಳೆ ವಿಮೆಯನ್ನು ಮಾರ್ಚ್ 31ರೊಳಗೆ ಕೊಡುವಂಥಾದ್ದು ಆಗಬೇಕಾಗಿತ್ತು. ಇಲ್ಲಿ ಹಿಂಗಾರಿ ಬೆಳೆ ವಿಮೆ ಜೂನ್ ತಿಂಗಳ 30 ರೊಳಗೆ ಆಗಬೇಕಾಗಿತ್ತು. ರೈತರಿಗೆ ಮುಂಗಾರಿ ಬೆಳೆ ಸಾಲವನ್ನು ಕೊಡಬೇಕಾದಾಗ ಮಾರ್ಚ್ 31ರವರೆಗೆ ತುಂಬುವುದಕ್ಕೆ ಕೊನೆಯ ದಿನಾಂಕವಾಗಿದೆ. ಹಾಗೂ ಹಿಂಗಾರಿ ಬೆಳೆಗೆ ಜೂನ್ 30ನೇ ತಾರೀಖು ಕೊನೆಯ ದಿನಾಂಕವಾಗಿದೆ. ಆದರೆ ಇವತ್ತಿನವರೆಗೂ 2004–05ನೇ ಸಾಲಿನ ಬೆಳೆ ವಿಮೆಯ ಪರಿಹಾರವನ್ನು ಆ ಸಾಲದ ಸಂಬಂಧಪಟ್ಟ ಮುಂಗಾರಿ ಬೆಳೆ ವಿಮೆಯ ಪರಿಹಾರದ ಹಣವಾಗಲೀ, ಹಿಂಗಾರಿ ಬೆಳೆಯ ಪರಿಹಾರದ ಹಣವಾಗಲೀ, ಇವತ್ತಿನವರೆಗೂ ಸಿಗುತ್ತದೆಯೋ, ಇಲ್ಲವೋ ಎನ್ನುವುದು ಸಹ ಇವತ್ತಿನವರೆಗೂ ಸ್ಪಷ್ಟವಾಗಿ ಯಾರಿಗೂ ಗೊತ್ತಾಗಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ :- ಇದರ ಬಗ್ಗೆ ಗೌರ್ವನ್‌ಮೆಂಟ್ ಜಿ.ಓ ಆರ್ಡರ್ ಇಷ್ಯೂ ಆಗಬೇಕಲ್ಲಾ. ಎಲ್ಲಿ ಸಿಗುತ್ತದೆ? ಎಲ್ಲಿ ಸಿಗುವುದನ್ನು ನೋಡಬೇಕಲ್ಲಾ?

ಶ್ರೀ ಸಿ. ಎಂ. ಉದಾಸಿ :- ಇದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಇದು ಯಾವಾಗ ಆಗಬೇಕಾಗಿತ್ತು? ನೀವು ಬೆಳೆಯ ಸಾಲವನ್ನು ಕೊಟ್ಟಿರುವಾಗ ಮಾರ್ಚ್ 31ರೊಳಗೆ ಮುಂಗಾರಿ ಬೆಳೆ ಸಾಲವನ್ನು ತುಂಬಬೇಕು. ಈ 2004-05ನೇ ಸಾಲಿನ ಮುಂಗಾರಿ ಬೆಳೆ ಸಾಲವನ್ನು ಮಾರ್ಚ್ 31ರೊಳಗೆ ತುಂಬಬೇಕೆಂಬ ಬಗ್ಗೆ ಇರುವಾಗ ಬೆಳೆ ವಿಮೆಯ ಬಗ್ಗೆಯೂ ತೀರ್ಮಾನವಾಗಬೇಕಲ್ಲಾ, ಜೂನ್ 30ರೊಳಗೆ ಹಿಂಗಾರಿ ಬೆಳೆ ಸಾಲವನ್ನು ತುಂಬಬೇಕೆಂದಾಗ ಇದರ ಪರಿಹಾರ ಜೂನ್ 30ರೊಳಗೆ ಆಗಬೇಕಾಗಿತ್ತು. ಆದರೆ ಇದುವರೆಗೂ ಇದರ ಬಗ್ಗೆ ಏನೂ ಚರ್ಚೆಯಾಗುತ್ತಿಲ್ಲ. ಇದನ್ನು ಸರಿಯಾದಂತಹ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವಾಗ ರೈತರಿಗೆ ಪರಿಹಾರ ಸಿಗಬೇಕಾದರೆ, ರಾಜ್ಯದ ಯಾವುದೇ ಮೂಲೆಯ ರೈತರಿಗೆ ಬೆಳೆ ವಿಮೆಯ ಪರಿಹಾರ ಸಿಕ್ಕಿದ್ದೇ ಆದರೆ ಅದರ ಪ್ರಯೋಜನವಾಗುತ್ತಿತ್ತೆಂದು ನಾನು ಮಾನ್ಯ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದರ ಜೊತೆಗೆ ಇವತ್ತು ಗೋವಿನ ಜೋಳವನ್ನು ಮಧ್ಯವರ್ತಿಗಳು ಖರೀದಿ ಮಾಡುವುದರಿಂದ ಆಗುವಂತಹ ಪರಿಣಾಮವನ್ನು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಮಾರುಕಟ್ಟೆಯಲ್ಲಿ ಖರೀದಿ ಮಾಡುವ ಬಗ್ಗೆ ಇದನ್ನು ರೈತರಿಂದ ನೇರವಾಗಿ ಖರೀದಿ ಮಾಡುವಂತಹ ವ್ಯವಸ್ಥೆಯನ್ನು ಮಾಡುವ ವಿಚಾರದಲ್ಲಿ ಗಂಭೀರವಾದಂತಹ ಚಿಂತನೆಯನ್ನು ಮಾಡದಿದ್ದರೆ ಶೇಕಡ 90 ರಷ್ಟು ಮಧ್ಯವರ್ತಿಗಳ ಪಾಲಾಗುವುದು. ಈ ಸಾರಿಯೂ ಕೂಡ ಗೋವಿನ ಜೋಳವನ್ನು ಮಧ್ಯವರ್ತಿಗಳು ಖರೀದಿ ಮಾಡಿ ಖರೀದಿ ಸೆಂಟರ್‌ಗೆ ಕೊಟ್ಟಿರುವಂಥಾದ್ದು. ಇದು ಆಗಬಾರದೆಂದು ಹೇಳುತ್ತೇನೆ. ಈ ವಿಚಾರವೂ ತಮಗೂ ಗೊತ್ತಿರಬಹುದು. ಆದುದರಿಂದ ಇದು ಆ ರೀತಿಯಾಗಬಾರದು, ಇದರ ಬಗ್ಗೆ ಮುಂದಿನ ಸಲವಾದರೂ ವ್ಯವಸ್ಥೆಯಲ್ಲಿ ಪಾರದರ್ಶಕತೆ ಇರಬೇಕೆಂದು ಹೇಳುತ್ತೇನೆ. ರೈತರಿಂದ ಗೋವಿನ ಜೋಳವನ್ನು ನೇರವಾಗಿ ಖರೀದಿ ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಾ, ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :- ಮಾನ್ಯ ಉಪಾಧ್ಯಕ್ಷರೇ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಸಮ್ಮಿಶ್ರ ಸರ್ಕಾರ ಆಡಳಿತವನ್ನು ಮಾಡುವುದಕ್ಕೆ ಹೇಗೆ ವಿಫಲವಾಗಿದೆಯೆಂಬ ಬಗ್ಗೆ ಈ ರಾಜ್ಯದ ಜನತೆಗೆ ಗೊತ್ತಿರುವಂಥಾದ್ದು, ಈ ವಿಷಯವನ್ನು ಪ್ರಸ್ತಾಪ ಮಾಡಬಹುದು. ಇವತ್ತಿನ ಪತ್ರಿಕೆಗಳಲ್ಲಿ ಬಂದಿದೆ. ಹೆಲಿಕಾಪ್ಟರ್ ಇದ್ದರೂ ಪೈಲೆಟ್ ಇಲ್ಲವೆನ್ನುವ ಸ್ಥಿತಿ ಆಗಿದೆ. ಇಲ್ಲಿ ಸರ್ಕಾರವಿದ್ದರೂ ಆಡಳಿತವೇ ಇಲ್ಲವೆನ್ನುವ ಸ್ಥಿತಿ ನಮ್ಮದಾಗಿದೆ. ಒಂದು

ಜವಾಬ್ದಾರಿಯುತ ಸರ್ಕಾರವಾಗಿದಿದ್ದರೆ ಈ ವಿಷಯ ಸದನದಲ್ಲಿ ಚರ್ಚೆಯಾಗುವುದಕ್ಕೆ ಅವಕಾಶವಾಗಬಾರದಾಗಿತ್ತು. ಇವತ್ತು ಕೊನೆಯ ದಿವಸವಾಗಿದ್ದು, ಇವತ್ತು ಈ ಸದನ ಪ್ರಾರಂಭವಾಗಿದೆ. ಇವತ್ತು ಈ ವಿಷಯವನ್ನು ನಾವು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) :– ಮಾನ್ಯ ಉಪಾಧ್ಯಕ್ಷರೇ ಮಾನ್ಯ ವಿಶ್ವೇಶ್ವರ ಹೆಗಡೆಯವರು ಹಿರಿಯ ಸದಸ್ಯರು, ಯುವಕರು ಕ್ರಿಯಾಶೀಲರು. ಸರ್ಕಾರ ಯಾವಾಗ ಘೋಷಣೆ ಮಾಡುತ್ತದೆ? ನೀವು ಇದನ್ನು ನಾಳೆ ರೈಸ್ ಮಾಡಿದ್ದಿದ್ದರೆ, ಇವತ್ತು 30ರ ಜೂನ್ ಸಂಜೆ ಮಾಡದಿದ್ದರೆ ನೀವು ಕೇಳಬಹುದು. ಇಲ್ಲಿ ರೈತರಿಗೆ ಟೈಮ್ ಇದೆ. ನಾವು 30ನೇ ದಿನಾಂಕದಂದು ಮುಂಜಾನೆ ಅನೌನ್ಸ್ ಮಾಡುವುದಕ್ಕೆ ಆಗುತ್ತದೆಯೇ? ಇವತ್ತು ಶಾಸನ ಸಭೆ ಸೇರುತ್ತಿದೆ, ಆಗ ಹೊರಗಡೆ ಅನೌನ್ಸ್ ಮಾಡಿದರೆ ತಪ್ಪಾಗುತ್ತದೆ, ಹಾಗಾಗಿ ಇದು ಯೋಗ್ಯವಾದ ಸ್ಥಳ, ಪವಿತ್ರವಾದ ಸ್ಥಳವಾಗಿದೆ. ಇಲ್ಲಿ ನೀವು ರೈಸ್ ಮಾಡಿದ್ದೀರೆಂದು ಅಲ್ಲ. ಈಗಾಗಲೇ ಇದರ ಬಗ್ಗೆ ಸರ್ಕಾರ ನಿರ್ಣಯವನ್ನು ಮಾಡಿದೆ. ನಾನು ಮಾತನಾಡುವಾಗ ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ಮಾನ್ಯ ಸಚಿವರಿಗೂ ಗೊತ್ತಿದೆ. ಇವತ್ತು ರೈತರ ಪರಿಸ್ಥಿತಿ ಏನಾಗಿದೆಯೆಂದರೆ, ಇದು ಇವತ್ತು ಎಕ್ಸಟೆಂಡ್ ಆಗುತ್ತದೆಯೋ, ಇಲ್ಲವೋ ಎಂಬುದು ರೈತರಿಗೂ ಗೊತ್ತಿಲ್ಲ. ನೀವು ಇವತ್ತು ಒಳ್ಳೆಯ ದಿವಸ ಇದನ್ನು ಎಕ್ಸ್‌ಟೆಂಡ್ ಮಾಡಬೇಕೆಂದು ಅಂದುಕೊಂಡಿರಬಹುದು. ಇವತ್ತು ಈ ಸದನ ಪ್ರಾರಂಭವಾಗುತ್ತಿದೆ, ಇವತ್ತು ಮಾಡಬೇಕೆಂದು ಆದರೆ, ಈ ಕಳೆದ ಒಂದು ವಾರದಲ್ಲಿ ನಮ್ಮ ಜಿಲ್ಲೆ ಇರಬಹುದು, ಬೇರೆ ಬೇರೆ ಜಿಲ್ಲೆಗಳಿರಬಹುದು, ನಾನು ರೈತರ ಜೊತೆಗೆ, ಬೇರೆ ಬೇರೆ ಸಂದರ್ಭಗಳಲ್ಲಿ ಸಾರ್ವಜನಿಕರ ಜೊತೆಗೆ ಸಮಾಲೋಚನೆ ಮಾಡಿದ್ದೇನೆ. ಕಳೆದ ಒಂದು ವಾರದಲ್ಲಿ ರೈತರು ಪಟ್ಟಂತಹ ಕಷ್ಟ ಇದೆಯಲ್ಲಾ, ಆ ತಳಮಳವಿದೆಯಲ್ಲಾ, ಅವರ ಒದ್ದಾಟವಿದೆಯಲ್ಲಾ, ಈ ಸುಸ್ತಿ ಬಡ್ಡಿಯನ್ನು ಹೇಗೆ ಹೊಂದಿಸಬೇಕೆಂಬ ಕಷ್ಟದ ಪರಿಸ್ಥಿತಿ ಇದೆಯಲ್ಲಾ, ಇದಕ್ಕೆ ಯಾರು ಕಾರಣ? ಈ ಅವಧಿಯನ್ನು ಮುಂದುವರೆಸಬೇಕೆಂಬುದು ನಮಗೆಲ್ಲರಿಗೂ ಗೊತ್ತಿರುವಂತಹ ಸತ್ಯದ ಸಂಗತಿಯಾಗಿದೆ. ಈ ಅವಧಿಯನ್ನು ಸರ್ಕಾರ ರೈತರ ಹಿತದೃಷ್ಟಿಯಿಂದ ಅವರ ಹಿತವನ್ನು ಕಾಪಾಡುವುದಕ್ಕೆ ಇದನ್ನು ಒಂದು ವಾರ ಮೊದಲು, 10 ದಿವಸ ಮೊದಲೇ ನಿರ್ಧಾರವಾಗಿದಿದ್ದರೆ, ಅವರ ಕೊನೆಯ ಟೆನ್ಷನ್, ಅವರ ತಳಮಳ, ಇದೆಯಲ್ಲಾ ಅದೆಲ್ಲಾ ತಪ್ಪುತ್ತಿತ್ತು, ಅವರು ಬಂಗಾರವನ್ನು ಒತ್ತೆ ಇಟ್ಟಿದ್ದಾರೆ. ಜಮೀನನ್ನು ಒತ್ತೆ ಇಟ್ಟಿದ್ದಾರೆ. ಅವರು ಇನ್ನು ಯಾರ ಹತ್ತಿರವೋ ಹೋಗಿ ಸಾಲವನ್ನು ತೆಗೆದುಕೊಂಡು ನೆನ್ನೆ ಮೊನ್ನೆಯಿಂದ ಈ ಸಾಲವನ್ನು ತುಂಬಿದ್ದಾರೆ.

ಇಂತಹ ಮಾನಸಿಕವಾದ ಒತ್ತಡ ನಿರ್ಮಾಣವಾಗಿ, ರೈತರು ಇನ್ನೆಲ್ಲೋ ಹೋಗಿ ಗಾಣದಲ್ಲಿ ಕೈಕೊಟ್ಟು ಕುಳಿತುಕೊಂಡಿದ್ದಾರೆ. ಈ ರೈತರು ಹೋಗಿ ಗಾಣದಲ್ಲಿ ಕೈಕೊಟ್ಟು ಕುಳಿತುಕೊಂಡಿದ್ದಾರೆ. ಇವರು ಯಾರಯಾರ ಹತ್ತಿರವೋ ಹೋಗಿ ಬಡ್ಡಿಯನ್ನು ತೀರಿಸುವುದಕ್ಕೆ ಸಾಲವನ್ನು ಮಾಡಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯನ್ನು ತರಬಾರದಾಗಿತ್ತು. ಎಂದು ನನ್ನ ಅತ್ಯಂತ ಕಳಕಳಿಯ ಮಾತು. ಇದರ ಬಗ್ಗೆ ಸರ್ಕಾರ ಮೊದಲೇ ನಿರ್ಣಯವನ್ನು ತೆಗೆದುಕೊಂಡಿದ್ದರೆ, ಈ ರೀತಿಯ ಪರಿಸ್ಥಿತಿ ರೈತರಿಗೆ ಬರುತ್ತಾ ಇರಲಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಪ್ರಮುಖವಾದಂತಹ ವಿಷಯ ಪ್ರಸ್ತಾಪ ಮಾಡಿವಂಥಾದ್ದು ಏನೆಂದರೆ ಉಳಿದ ಎಲ್ಲಾ ವಿಷಯಗಳನ್ನು ಇವತ್ತು ಸದನದ ಮೂಲಕ ಪ್ರಸ್ತಾಪ ಮಾಡಿದ್ದು, ನಾವೆಲ್ಲರೂ ಅದನ್ನು ಗಮನಿಸಿದ್ದೇವೆ. ಈ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೂ ಇದು ಅನ್ವಯು ಆಗಬೇಕು, ಮತ್ತು ಮಾರ್ಚ್ ತಿಂಗಳವರೆಗೂ ಇದನ್ನು ಮುಂದುವರೆಸಬೇಕೆನ್ನುವಂಥಾದ್ದು, ಮತ್ತೆ ಹಿಂದಿನ ಸಾಲವನ್ನು ತುಂಬಿರುವಂತಹ ರೈತರೂ ಇದ್ದಾರಲ್ಲಾ, ಅವರಿಗೆ ಆ ಬಡ್ಡಿಯನ್ನು ವಾಪಸ್ಸು ಕೊಡಬೇಕೆನ್ನುವಂಥಾದ್ದರ ಬಗ್ಗೆ, ಇನ್ನು ಇತ್ಯಾದಿ ವಿಷಯಗಳ ಬಗ್ಗೆ, ಈ ಬೇಡಿಕೆಗಳ ಬಗ್ಗೆ ನಮ್ಮ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಅದಕ್ಕೆ ನಾನು ಧ್ವನಿ ಗೂಡಿಸುತ್ತಾ, ಮತ್ತೊಂದು ಪ್ರಮುಖವಾದಂತಹ ಸಂಗತಿ, ನಮ್ಮ ಜಿಲ್ಲೆಯ ರೈತರ ದೃಷ್ಟಿಯಿಂದ ವಿಶೇಷವಾಗಿ ಉಲ್ಲೇಖ ಮಾಡುವುದೇನೆಂದರೆ, ನಮ್ಮ ಸಹಕಾರ ಸಚಿವರಾದ ಶ್ರೀ ಮಾನ್ಯ ಆರ್.ವಿ. ದೇಶಪಾಂಡೆಯವರು ಹಿರಿಯ ಸಚಿವರು, ಇವರು ಅನೇಕ ಇಲಾಖೆಗಳನ್ನು ನಡೆಸಿಕೊಂಡು ಬಂದಿದ್ದು, ಈಗ ಸಹಕಾರಿ ಕ್ಷೇತ್ರದ ಸಚಿವರಾಗಿ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯ ರೈತರ ಸಮಸ್ಯೆಯ ಬಗ್ಗೆ ಅವರಿಗೂ ಗೊತ್ತಿದೆ. ಇಲ್ಲಿ ಖಾತೆ ಸಾಲವೆಂದು ಇದೆ. ಇದು ಉಳಿದ ಕಡೆಗಳಲ್ಲಿ ಇಲ್ಲ. ನಮ್ಮಲ್ಲಿ ಇದೆ. ಉಳಿದ ಕಡೆಗಳಲ್ಲಿ ಖಾತೆ ಸಾಲದ ಪರಿಕಲ್ಪನೆ, ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಇಲ್ಲ. ಬೇರೆಬೇರೆ ಹೆಸರುಗಳಲ್ಲಿ ಇದೆ. ಈ ಖಾತೆಯ ಸಾಲದ ಬಗ್ಗೆ ಮಾನ್ಯ ಸಚಿವರಿಗೂ ಗೊತ್ತಿದೆ. ಇಲ್ಲಿ ಮಾನ್ಯ ಹಣಕಾಸಿನ ಸಚಿವರು ಮತ್ತು ಮಾನ್ಯ ಮುಖ್ಯ ಮಂತ್ರಿಯವರು ಇದ್ದಿದ್ದರೆ ಅವರಲ್ಲೂ ವಿನಂತಿ ಮಾಡಿಕೊಳ್ಳಬೇಕೆಂದು ಇದೆ. ನಮ್ಮ ಉತ್ತರ ಕನ್ನಡ ಜಿಲ್ಲೆಯ ರೈತರೇ, ಸಹಕಾರಿ ಸಚಿವರಾಗಿರುವುದರಿಂದ ಈ ಖಾತೆ ಸಾಲದ ಮೇಲೆ ಯಾರ್‍ಯಾರು ಸಾಲವನ್ನು ತೆಗೆದುಕೊಂಡಿದ್ದಾರೋ, ಅದಕ್ಕೂ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಈ ಸರ್ಕಾರದ ಯೋಜನೆಯಲ್ಲಿ ಇದು ಅನ್ವಯವಾಗುವಂತೆ ಸರ್ಕಾರ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಆ ಮೂಲಕ ರೈತರ ಕಷ್ಟಕ್ಕೆ ಧ್ವನಿಗೂಡಿಸುವಂತಹ ಪ್ರಯತ್ನವನ್ನು ಮಾಡಬೇಕು. ಈ ಖಾತೆಯ ಸಾಲದ ಮೇಲೆ ಬೇರೆಬೇರೆ ಅಭಿವೃದ್ಧಿ ಪಡಿಸುವಂಥಾದ್ದಕ್ಕೆ, ಕೃಷಿಗೆ ಎಂದು ಏನು ತೆಗೆದುಕೊಂಡಿದ್ದಾರೆ, ಅವರು ಕೃಷಿಯನ್ನು

ಅಭಿವೃದ್ಧಿ ಪಡಿಸುವಂತಹ ಬೇರೆ ಬೇರೆ ಕೃಷಿ ಸೌಲಭ್ಯಗಳನ್ನು ಸುಧಾರಣೆ ಮಾಡುವಂಥಾದ್ದಕ್ಕೆ ಖಾತೆ ಸಾಲದ ಮೇಲೆ ಮಾಡಿಕೊಂಡಿದ್ದಾರೆ. ಆದ್ದರಿಂದ ಈ ಖಾತೆಯ ಸಾಲದ ಮೇಲೆ ತೆಗೆದುಕೊಂಡಿರುವಂತಹ ಸಾಲ ಏನು ಇದೆ, ಈ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವಂಥದ್ದು ಆಗಬೇಕು ಇದು ನಮ್ಮ ಜಿಲ್ಲೆಯ ರೈತರಿಗೆ ಆಗುತ್ತಾ ಇಲ್ಲ. ಈ ಖಾತೆ ಸಾಲದ ಮೇಲೆ ಯಾರ‍್ಯಾರು ಸಾಲವನ್ನು ತೆಗೆದುಕೊಂಡಿದ್ದಾರೋ, ಅದಕ್ಕೆ ಬಡ್ಡಿ, ಸುಸ್ತಿ ಬಡ್ಡಿ ಮನ್ನಾಮಾಡುವಂಥಾದ್ದು ಯೋಜನೆಯ ಅನ್ವಯ ಆಗುವಂಥಾದ್ದಕ್ಕೆ ಸರ್ಕಾರ ಒಂದು ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕು. ನಮ್ಮ ಜಿಲ್ಲೆಯ ಸಹಕಾರಿ ಕ್ಷೇತ್ರದಲ್ಲಿ ಸಾಲ ತೆಗೆದು ಕೊಂಡಿರುವಂತಹವರ ಪರವಾಗಿ, ನಾನು ಈ ಖಾತೆ ಸಾಲದ ಬಗ್ಗೆ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಮತ್ತೊಮ್ಮೆ ಈ ಅವಧಿ ವಿಸ್ತರಣೆಯನ್ನು ಮಾರ್ಚಿ ತಿಂಗಳವರೆಗೂ ಮುಂದುವರೆಸಲೇಬೇಕೆಂದು ಹೇಳುತ್ತೇನೆ. ಹಿಂದೆ ಪ್ರಾಮಾಣಿಕವಾಗಿ ಸಾಲವನ್ನು ತುಂಬಿರುವಂತಹ ರೈತರಿಗೆ ಬಡ್ಡಿಯನ್ನು ವಾಪಸ್ಸು ಕೊಡುವಂಥಾದ್ದಕ್ಕೆ ಸರ್ಕಾರ ಮುಂದಾಗಬೇಕು. ಈ ನನ್ನ ಬೇಡಿಕೆಗಳನ್ನು ಈ ಸದನದಲ್ಲೂ ಮತ್ತೊಮ್ಮೆ ಆಗ್ರಹಿಸುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದು ಸವದಿ (ಜಮಖಂಡಿ) :- ಸನ್ಮಾನ್ಯ ಉಪಾಧ್ಯಕ್ಷರೆ, ರೈತರಿಗೆ ಬಡ್ಡಿ ಮನ್ನಾ ಮಾಡುವ ಯೋಜನೆಯನ್ನು ಮುಂದುವರೆಸಬೇಕು ಎನ್ನುವ ಬಗೆಗಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮೊದಲಿಗೆ ಅಭಿನಂದನೆ ಹೇಳುತ್ತೇನೆ. ಈಗಾಗಲೇ ಅನೇಕ ಹಿರಿಯರು ಈ ವಿಷಯದ ಬಗ್ಗೆ ಬಹಳಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇದರಲ್ಲಿ ಇನ್ನೊಂದು ಮುಖ್ಯವಾದ ವಿಷಯವೆಂದರೆ ಈ ಬಡ್ಡಿ ಮನ್ನಾ ಯೋಜನೆಯ ಅನ್ವಯ 01-04-2004ರಿಂದ ತೆಗೆದುಕೊಂಡ ಸಾಲವನ್ನು ಅವಧಿಯೊಳಗೆ ಅಂದರೆ 31-03-2005 ರೊಳಗೆ ರೈತರು ಸಾಕಷ್ಟು ತುಂಬಿದ್ದಾರೆ. ರೈತರು ಸಾಲವನ್ನು ಆ ರೀತಿ ತುಂಬಲು ಕಾರಣ, ಈ ರಾಜ್ಯದ ಎಲ್ಲಾ ಡಿ.ಸಿ.ಸಿ. ಬ್ಯಾಂಕ್‌ಗಳ ಆದೇಶದ ಪ್ರಕಾರ, ಪ್ರಾಥಮಿಕ ಕೃಷಿಪತ್ತಿನ ಬ್ಯಾಂಕುಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಎಲ್ಲರೂ ಸೇರಿ ರೈತರ ಮನೆ ಬಾಗಿಲಿಗೆ ಹೋಗಿ ನಿಮ್ಮ ಚಾಲ್ತಿ ಸಾಲವನ್ನು 31-03-2005ರೊಳಗೆ ತುಂಬಿದರೆ ನಿಮಗೆ ಬಡ್ಡಿ ರಿಯಾಯಿತಿ ಸಿಗುತ್ತದೆ ಎನ್ನುವ ಮಾತನ್ನು ಹೇಳಿ, ಬಡ್ಡಿಯನ್ನು ಮೊದಲೇ ಮನ್ನಾ ಮಾಡಿ ಕೇವಲ ಅಸಲನ್ನು ಮಾತ್ರ ತುಂಬಿಸಿ ಕೊಂಡಿರುವಂಥ ಉದಾಹರಣೆಗಳಿವೆ. ಉದಾಹರಣೆಗೆ ನನ್ನ ಬಾಗಲಕೋಟೆ ಜಿಲ್ಲೆಯಲ್ಲಿ ನೂರಕ್ಕೆ ನೂರರಷ್ಟು ಸಾಲವನ್ನು 31.03.2005ರೊಳಗೆ ವಸೂಲಿ ಮಾಡಿದ್ದಾಗಿದೆ. ಅದಾದ ನಂತರ, ಮನ್ನಾ ಮಾಡಿದಂಥ ಬಡ್ಡಿಯ ಪುನರ್ ಪಾವತಿ ಆಯಾ ಪ್ರಾಥಮಿಕ ಕೃಷಿ ಪತ್ತಿನ ಬ್ಯಾಂಕುಗಳಿಗೆ ಇದುವರೆಗೂ ಆಗಿಲ್ಲ. ಪ್ರಾಥಮಿಕ ಕೃಷಿ ಪತ್ತಿನ ಬ್ಯಾಂಕಿನವರು ಈ ಬಗ್ಗೆ ಸರ್ಕಾರವನ್ನು

ಕೇಳಿದಾಗ, ನೂರಾರು ಕೋಟಿ ರೂಪಾಯಿಗಳ ಬಡ್ಡಿಯನ್ನು ನಮಗೆ ಪುನರ್ ಪಾವತಿ ಮಾಡಬೇಕು. ಇಲ್ಲದಿದ್ದರೆ ನಮ್ಮ ಸೊಸೈಟಿಗಳು ಹಾಳಾಗುತ್ತದೆ ಎನ್ನುವ ಮಾತನ್ನು ಸರ್ಕಾರಕ್ಕೆ ಹೇಳಿದಾಗ, ಸರ್ಕಾರದಿಂದ ಬಂದ ಉತ್ತರ ಏನೆಂಬುದನ್ನು ಬ್ಯಾಂಕುಗಳ ಕಾರ್ಯದರ್ಶಿಗಳು ನನಗೆ ಹೇಳಿದ್ದಾರೆ. ಚಾಲ್ತಿ ಸಾಲಿಗೆ ಇನ್–ಟೈಂ ತುಂಬಿದರೆ, ಆ ರೀತಿ ತುಂಬಿದಂಥವರಿಗೆ ನಾವು ಬಡ್ಡಿ ಮನ್ನಾ ಮಾಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ ಎಂದು ನಾನು ಕೇಳಿದ್ದೇನೆ. ಈ ಬಗ್ಗೆ ಉಪ ಮುಖ್ಯಮಂತ್ರಿಗಳ ಬಳಿ ಕೇಳಿದಾಗಲೂ ಸಹ, ಒಂದೇ ವರ್ಷದೊಳಗೆ ಸಾಲವನ್ನು ತುಂಬಿದರೆ, ಹಾಗೆ ತುಂಬಿದಂಥವರು ಶ್ರೀಮಂತ ರೈತರಾಗಿರುತ್ತಾರೆ. ಅವರಿಗೆ ಬಡ್ಡಿ ಮನ್ನಾ ಮಾಡುವ ಅವಶ್ಯಕತೆ ಇಲ್ಲ ಎನ್ನುವ ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ ಎನ್ನುವ ವಿಷಯ ನೋವಿನ ಸಂಗತಿ. ಏಕೆಂದರೆ, ರೈತರ ಮನೆ ಬಾಗಿಲಿಗೆ ಹೋಗಿ, ಬಡ್ಡಿಯನ್ನು ಮನ್ನಾ ಮಾಡಲಾಗುವುದು ಎಂದು ಹೇಳಿ, ಬಡ್ಡಿಯನ್ನು ಬಿಟ್ಟು ಕೇವಲ ಅಸಲನ್ನು ಮಾತ್ರ ತುಂಬಿಸಿಕೊಂಡಂಥ ಉದಾಹರಣೆಗಳಿವೆ. ಬಜೆಟ್‌ನಲ್ಲಿ ಸುಮಾರು 400 ಕೋಟಿ ರೂಪಾಯಿಗಳನ್ನು ಇಟ್ಟಿದ್ದು, ರೆಗ್ಯುಲರ್ ಆಗಿ ಸಾಲವನ್ನು ತುಂಬುವಂಥ ರೈತರಿಂದ ಬಡ್ಡಿ ಜಾಸ್ತಿಯಾಗುತ್ತದೆಯೇ ವಿನಃ ಬಾಕಿ ಕಟ್ಟಬೇಕಾಗಿರತಕ್ಕಂಥ ರೈತರ ಬಡ್ಡಿ ಜಾಸ್ತಿಯಾಗುವುದೇ ಇಲ್ಲ. ಈ ಬಡ್ಡಿ ಮನ್ನಾ ಯೋಜನೆ ಎಲ್ಲಾ ರೈತರಿಗೂ ಸಹ ಸಿಗುವಂತೆ ಆಗಬೇಕು. ಎನ್ನುವ ಒತ್ತಾಯವನ್ನು ಈ ಮೂಲಕ ನಾನು ಸರ್ಕಾರಕ್ಕೆ ಮಾಡಲು ಬಯಸುತ್ತೇನೆ. ಈಗಾಗಲೇ ಅನೇಕರು ಈ ಬಡ್ಡಿ ಮನ್ನಾ ಯೋಜನೆಯನ್ನು ಮುಂದಿನ ಮಾರ್ಚ್‌ವರೆಗೆ ಮುಂದುವರೆಸಬೇಕು ಎನ್ನುವ ಬೇಡಿಕೆ ಇಟ್ಟಿದ್ದು, ಇದು ಬಹಳ ಸ್ತುತ್ಯಾರ್ಹ. ಈ ವರ್ಷ ಯಾವುದೇ ಭಾಗದಲ್ಲಿ ಉತ್ತಮವಾದ ಮಳೆಯಾದಂಥ ವಾತಾವರಣ ಇಲ್ಲ. ನಮ್ಮ ಜಿಲ್ಲೆಯಲ್ಲಿ ಮುಂಗಾರು ವಿಫಲವಾಗಿದೆ. ಮಳೆ ಬಾರದೇ ಯಾವುದೇ ಬಿತ್ತನೆ ಆಗಿಲ್ಲ. ರೈತರು ಆಕಾಶದ ಕಡೆ ನೋಡುವಂಥ ಈ ಸಂದರ್ಭದಲ್ಲಿ ಈ ಬಡ್ಡಿ ಮನ್ನಾ ಯೋಜನೆ ಮುಂದುವರೆಯದೇ ಇದ್ರೆ ಕಷ್ಟವಾಗುತ್ತದೆ. ರೈತರು ತಮ್ಮ ಜಮೀನು ಮಾರಿಯಾದರೂ ಸಾಲ ತುಂಬಬೇಕು ಎಂದರೆ ಆ ಜಮೀನನ್ನುಕೊಳ್ಳುವವರೂ ಸಹ ಯಾರು ಇರಲಿಲ್ಲ. ರೈತರು ಇಂಥ ದಯನೀಯ ಸ್ಥಿತಿಯಲ್ಲಿರುವಾಗ ಈ ಬಡ್ಡಿ ಮನ್ನಾ ಯೋಜನೆಯನ್ನು ಮುಂದಿನ ವರ್ಷ ಮಾರ್ಚ್‌ರವರೆಗೆ ಮುಂದುವರೆಸಬೇಕು ಎನ್ನುವ ವಿನಂತಿಯನ್ನು ನಾನು ಮಾಡಿಕೊಳ್ಳುತ್ತಿದ್ದೇನೆ. ಇನ್ನೊಂದು ವಿಷಯವೆಂದರೆ, ಸುರಪಾನ ಬೆಳೆ ಅಂದರೆ ಸನ್‌ಫ್ಲವರ್ ಮೇಲೆ 8 ಲಕ್ಷ 73 ಸಾವಿರ ರೂಪಾಯಿಗಳ ವಿಮಾ ಪ್ರೀಮಿಯಂ ಅನ್ನು ನಮ್ಮ ಜಮಖಂಡಿ ತಾಲ್ಲೂಕು ಒಂದರಿಂದಲೇ ಕಟ್ಟಿಸಿಕೊಂಡಿದ್ದಾರೆ. ಆದರೆ ವಿಮೆ ಹಣವನ್ನು ಕೊಡುವಾಗ ನಮ್ಮ ಇಡೀ ಜಿಲ್ಲೆಗೆ ಅನ್ವಯವಾಗುವಂತೆ ಆ ಸುರಪಾನ ಬೆಳೆಯನ್ನು ಡಿಲೀಟ್ ಮಾಡಿದಂಥ ಆದೇಶ ನಮ್ಮ ಜಿಲ್ಲೆಗೆ ಬಂದಿದೆ. ಇದು ರೈತರ ಮೇಲೆ ಆಗುವಂಥ ಬಹಳ ಬರ್ಬರ ಕೃತ್ಯ. ಆದ್ದರಿಂದ,

ದಯವಿಟ್ಟು ಇದನ್ನು ಕೈಬಿಟ್ಟು, ಆ ಸುರಪಾನ ಬೆಳೆಯನ್ನು ಸೇರಿಸಿ, ರೈತರಿಗೆ ವಿಮೆ ಹಣ ಸಿಗುವಂತೆ ಸರ್ಕಾರ ಮಾಡಬೇಕು, ಇನ್ನು ಪಿ.ಎಲ್.ಡಿ. ಬ್ಯಾಂಕುಗಳಿಗೆ ಬಂದಿರತಕ್ಕಂಥ ಸರ್ಕಾರದ ಆದೇಶವೆಂದರೆ, ಪಿಎಲ್‌ಡಿ ಬ್ಯಾಂಕುಗಳ ಯಾವುದೇ ಸಾಲಕ್ಕೆ ಅಸಲಿಗಿಂತ ಹೆಚ್ಚಿನ ಬಡ್ಡಿಯನ್ನು ಯಾವ ರೈತರು ತುಂಬಿದ್ದಾರೆ, ಆ ರೈತರ ಸಂಪೂರ್ಣ ಸಾಲವನ್ನು ಮನ್ನಾ ಮಾಡಬೇಕು ಎಂದು ಸರ್ಕಾರಿ ಆದೇಶವಿದೆ. ಆದರೆ ಪಿ.ಎಲ್.ಡಿ.ಬ್ಯಾಂಕ್‌ಗಳ ವ್ಯವಸ್ಥೆ ಯಾವ ರೀತಿಯಾಗಿದೆ ಎಂದರೆ, ರೈತರು ಅಸಲಿಗಿಂತಲೂ ಹೆಚ್ಚಿನ ಬಡ್ಡಿಯನ್ನು ತುಂಬಿದ್ದಾರೆ. ಆದರೆ ಬ್ಯಾಂಕಿನವರು ಅದನ್ನು ದಂಡದ ಬಡ್ಡಿ ವಸೂಲಿ ಖರ್ಚು ಎಂದು ಹೆಚ್ಚಿನ ಹಣವನ್ನು ಅವುಗಳಿಗೆ ತೆಗೆದುಕೊಂಡಿದ್ದರಿಂದ, ಉಳಿದ ಬಡ್ಡಿ ಹಣ ಅಸಲಿನಷ್ಟು ಆಗಲು ಸಾಧ್ಯವಾಗುತ್ತಿಲ್ಲ. ಇಂಥ ಸಾವಿರಾರು ಪ್ರಕರಣಗಳು ನಮ್ಮ ತಾಲ್ಲೂಕಿನಲ್ಲಿದೆ. ಜಿಲ್ಲೆಯಲ್ಲಿ ಇರುವುದರಿಂದ ಯಾವುದೇ ರೈತ ಯಾವುದೇ ಮೂಲದಿಂದ ಕಟ್ಟಿರುವ ಒಟ್ಟು ಹಣ ಅಸಲಿಗಿಂತ ಹೆಚ್ಚಾಗಿದ್ದರೆ, ಆ ರೈತರಿಗೆ ಈ ಒಂದು ಬಡ್ಡಿ ಮನ್ನಾ ಯೋಜನೆ ದೊರಕುವಂತೆ ಆಗಬೇಕು ಎನ್ನುವ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರದ ಎಲ್ಲಾ ಯೋಜನೆಗಳು ಎಲ್ಲಾ ರೈತರಿಗೂ ಸಹ ಸಿಗುವಂತಾಗಬೇಕು ಎನ್ನುವ ವಿನಂತಿಯನ್ನು ಮಾಡಿಕೊಂಡು, ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿರತಕ್ಕಂಥ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಹೆಚ್.ಎಂ. ವಿಶ್ವನಾಥ್ (ಸಕಲೇಶಪುರ) :– ಸನ್ಮಾನ್ಯ ಉಪಾಧ್ಯಕ್ಷರೆ, ಬೆಳೆ ಸಾಲದ ಬಡ್ಡಿಯನ್ನು ಮನ್ನಾ ಮಾಡತಕ್ಕಂಥ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಮಾಡಿದೆ. ಬಹುಶಃ ಸರ್ಕಾರ ಈಗ ಅದರ ಅವಧಿಯನ್ನು ಮುಂದುವರೆಸುವಂಥ ಕೆಲಸವನ್ನು ಮಾಡಬಹುದು ಎನ್ನುವ ನಂಬಿಕೆ ನನಗೆ ಇದೆ. ಆದರೆ ನಾನು ಪ್ರಸ್ತಾಪ ಮಾಡತಕ್ಕಂಥ ವಿಚಾರವೆಂದರೆ, ಕರ್ನಾಟಕ ಸರ್ಕಾರ ಇವತ್ತು ಪಶ್ಚಿಮ ಘಟ್ಟಗಳ ಕಡೆಗೆ ಸ್ವಲ್ಪ ನೋಡಬೇಕಾಗಿದೆ. ವಿಶೇಷವಾಗಿ, ಪಶ್ಚಿಮ ಘಟ್ಟದಲ್ಲಿರತಕ್ಕಂಥ ಕಾಫಿ ಮತ್ತು ಏಲಕ್ಕಿ ಬೆಳೆಗಾರರು ಬಹಳ ಸಂಕಷ್ಟದಲ್ಲಿ ಇದ್ದ ಸಂದರ್ಭದಲ್ಲಿ 2002ರಲ್ಲಿ ಅಂದಿನ ಕೇಂದ್ರ ಸರ್ಕಾರ ಕಾಫಿ ಮತ್ತು ಏಲಕ್ಕಿ ಬೆಳೆಗಾರರ ಸಾಲದ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಎಸ್.ಸಿ.ಟಿ.ಎಲ್. ಅಂದರೆ ಸ್ಪೆಷಲ್ ಕಾಫಿ ಟರ್ಮ ಲೋನ್ ಎನ್ನುವ ಯೋಜನೆಯನ್ನು ತಂದರು. ಅವರು ಬೇರೆಬೇರೆ ವಿಭಾಗಗಳಲ್ಲಿ ತೆಗೆದುಕೊಂಡ ಸಾಲಗಳನ್ನು ಒಟ್ಟಿಗೆ ಮಾಡಿ ಆ ಸಾಲಗಳ ಬಡ್ಡಿ ಮತ್ತು ಅಸಲನ್ನು ಕಟ್ಟುವಂಥ ಅವಧಿಯನ್ನು ಮೂರು ವರ್ಷಗಳಿಗೆ ಮುಂದೂಡುವಂಥ ಕೆಲಸ ಮಾಡಿಕೊಟ್ಟರು. ಹಾಗಾಗಿ ಮೂರು ವರ್ಷದ ಬಡ್ಡಿಯನ್ನು ನಾವು ಕಟ್ಟಿಲ್ಲ. ಆದರೆ ಈ ಸಮಸ್ಯೆ ಇವತ್ತು ಎಷ್ಟು ಭೀಕರವಾಗಿದೆ ಎಂದರೆ, ಆ ಮೂರು ವರ್ಷಗಳ ಬಡ್ಡಿಯನ್ನು ಈಗ ಒಂದೇ ಸಲ ಕಟ್ಟಬೇಕಾದಂಥ ಪರಿಸ್ಥಿತಿ ಬಂದಿದೆ. ಇವತ್ತು ಕಾಫಿ ಬೆಳೆಯ ಬೆಲೆ

ಕುಸಿದಿರುವುದರಿಂದ ಮತ್ತು ಕಾಫಿಯ ಬೆಳೆಯೂ ಕುಸಿದಿರುವುದರಿಂದ ಈ ಮೂರು ವರ್ಷಗಳ ಬಡ್ಡಿಯನ್ನು ಒಂದೇ ಸಲ ಕಟ್ಟಲು ಸಾಧ್ಯವಾಗುತ್ತಿಲ್ಲ. ಭಾರಿ ದೊಡ್ಡ ಪ್ರಮಾಣದ ಸಾಲ ನಮ್ಮ ಮೇಲೆ ಬಿದ್ದಿದೆ. ಕೇಂದ್ರ ಸರ್ಕಾರ ಈಗ ಒಂದು ಹೊಸ ಯೋಜನೆ ಮಾಡಿ, ಸಾಲದ ಮೇಲಿರತಕ್ಕಂಥ ಮೂರನೇ ಎರಡು ಭಾಗದ ಬಡ್ಡಿಯಲ್ಲಿ ನೀವು ಒಂದು ಭಾಗದ ಬಡ್ಡಿಯನ್ನು ಕಟ್ಟಿದರೆ, ಎರಡು ಭಾಗದ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಎನ್ನುವ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಆ ಮಾಹಿತಿ ಬ್ಯಾಂಕುಗಳಿಗೆ ಇನ್ನೂ ಕೂಡ ತಲುಪಿಲ್ಲ. ಆದರೆ ಅದರ ಅವಧಿ ಮಾತ್ರ ಈ ತಿಂಗಳು 30ನೇ ತಾರೀಖು ಕೊನೆಯ ದಿವಸ ಎಂದು ನಿಗದಿಪಡಿಸಿದ್ದಾರೆ. ಅಂದರೆ ಅದು ಈ ದಿನಕ್ಕೆ ಮುಗಿಯುತ್ತಿದೆ. ಪ್ಲಾಂಟೇಷನ್ ಭಾಗದಲ್ಲಿ ಇಷ್ಟು ದೊಡ್ಡ ಸಮಸ್ಯೆಯಿದ್ದು, ಇಷ್ಟು ದೊಡ್ಡ ಪ್ರಮಾಣದ ಸಾಲ ಇದೆ. ಈಗ ನಾವು ಜೂನ್ ತಿಂಗಳಲ್ಲಿ ಇದ್ದೇವೆ. ಕಾಫಿ ಬೆಳೆಗಾರರಿಗೆ ಇದು ಅತ್ಯಂತ ಪ್ರಮುಖವಾದ ಸಂದರ್ಭ, ಗಿಡ ನೆಡಬೇಕು, ಗೊಬ್ಬರ ಹಾಕಬೇಕು ಮತ್ತು ಬೇರೆ ಎಲ್ಲಾ ವಿಧದ ಕೆಲಸಗಳನ್ನು ಮಾಡತಕ್ಕಂಥ ಸಂದರ್ಭವಾದ್ದರಿಂದ ಕಾಫಿ ಬೆಳೆಗಾರರ ಹತ್ತಿರ ಈಗ ಏನೇನೂ ಹಣ ಉಳಿದುಕೊಂಡಿಲ್ಲ. ಆದ್ದರಿಂದ, ರಾಜ್ಯ ಸರ್ಕಾರಕ್ಕೆ, ಮುಖ್ಯಮಂತ್ರಿಗಳಲ್ಲಿ ಮತ್ತು ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗ ಕಳಹಿಸುತ್ತೀರೋ ಅಥವಾ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡೋ, ಈ ಯೋಜನೆಯನ್ನು ನಮಗೆ ಕನಿಷ್ಠ ಬರುವ ಮಾರ್ಚ್‌ವರೆಗೆ ಮುಂದುವರೆಸಿ ಕೊಡಬೇಕು. ಇಲ್ಲದೇ ಹೋದರೆ ಈ ಯೋಜನೆಯ ಲಾಭ ಪಡೆಯಬೇಕು ಎಂದು ಆಲೋಚನೆ ಇರತಕ್ಕಂಥ ಕಾಫಿ ಬೆಳೆಗಾರರ್‍ಯಾರಿಗೂ ಲಾಭವಾಗುವುದಿಲ್ಲ. ಏಕೆಂದರೆ ಈಗ ಯಾರೂ ಹಣ ಕಟ್ಟಲು ಸಾಧ್ಯವಿಲ್ಲ. ಆದ್ದರಿಂದ, ಕೇಂದ್ರ ಸರ್ಕಾರದ ಈ ಯೋಜನೆಯನ್ನು ಮಾರ್ಚ್ 2006ರವರೆಗೂ ಮುಂದುವರೆಸುವುದಕ್ಕೆ ರಾಜ್ಯ ಸರ್ಕಾರ ಮನವಿ ಮಾಡಿಕೊಳ್ಳಬೇಕು ಮತ್ತು ಒಂದು ನಿಯೋಗವನ್ನಾದರೂ ಕಳುಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) :- ಮಾನ್ಯ ಉಪಾಧ್ಯಕ್ಷರೇ, ಸರ್ಕಾರದ ಬಡ್ಡಿ ಮನ್ನಾ ಯೋಜನೆ ಏನಿದೆ, ಇದು ಸ್ವಾಗತಾರ್ಹವಾದುದು, ಇವತ್ತು ಈ ದಿನಗಳು ಏನಿವೆ, ಇದು ಸಾಲ ಮಾಡುವ ಕಾಲ, ಸಾಲ ತೀರಿಸುವಂಥ ಕಾಲವಲ್ಲ, ರೈತ ಭೂಮಿಗೆ ಬೀಜ ಬಿತ್ತಬೇಕು ಉಳಿದ ಎಲ್ಲಾ ಕೆಲಸಗಳನ್ನು ಮಾಡಬೇಕು. ಇವತ್ತು ರೈತರ ಪರಿಸ್ಥಿತಿ ಏನಾಗಿದೆ ಎಂದರೆ ಮಳೆಯೊಂದು ಬಂದರೆ ಸಾಕು, ಎಷ್ಟು ಸಾಲವನ್ನಾದರೂ ಮಾಡಿ ಬೆಳೆ ಬೆಳೆದು ಈ ಸಾಲವನ್ನು ತೀರಿಸುತ್ತೇವೆ ಎನ್ನುದ ಧೈರ್ಯ ಇದೆ. ಈಗ ಜೂನ್ ತಿಂಗಳು ಅಂತ್ಯವಾಗುತ್ತ ಬಂದಿದ್ದರೂ ಕೂಡ ಇವತ್ತು ಎಲ್ಲಿಯೂ ಮಾನ್‌ಸೂನ್ ಮಳೆ ಕಾಣುತ್ತಿಲ್ಲ.

Indian farmers are gambling with mansoon ಎನ್ನುವುದು ಸತ್ಯವಾದಂಥ ಮಾತು. ಇವತ್ತಿನ ದಿವಸ ರೈತರಿಗೆ ಎಂಥ ಪರಿಸ್ಥಿತಿ ಒದಗಿ ಬಂದಿದೆ ಎಂದರೆ "ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ" ಎನ್ನುವ ಹಾಗಾಗಿದೆ. ಏಕೆಂದರೆ ಸಾಲವನ್ನು ಜೂನ್ 30ನೇ ತಾರೀಖಿನೊಳಗೆ ತೀರಿಸಿದರೆ ಸಾಲದ ಮೇಲಿನ ಬಡ್ಡಿ ಮನ್ನಾ ಆಗುತ್ತದೆ ಎನ್ನುವ ಆಸೆ ರೈತನಿಗೆ ಇದೆ. ಆದರೆ ಆ ಸಾಲವನ್ನು ಕಟ್ಟಲು ಇವತ್ತು ರೈತನ ಹತ್ತಿರ ಹಣವಿಲ್ಲ. ಒಂದು ಕಡೆ ಭೂಮಿಗೆ ಬೀಜವನ್ನು ಬಿತ್ತುವುದಕ್ಕೋಸ್ಕರ ಸಾಲವನ್ನು ಮಾಡಬೇಕು. ಹಾಗೆಯೇ ಈ ಸಾಲವನ್ನು ತೀರಿಸಲಿಕ್ಕೋಸ್ಕರ ಸಾಲ ಮಾಡಬೇಕು, ಸಧ್ಯದ ಪರಿಸ್ಥಿತಿಯಲ್ಲಿ, ರೈತ ಭೂಮಿಗೆ ಬೀಜ ಬಿತ್ತಲಿಕ್ಕೆ ಮತ್ತು ಸಾಲವನ್ನು ತೀರಿಸಲಿಕ್ಕೆ ಹೀಗೆ ಎರಡು ತರಹದ ಸಾಲವನ್ನು ಮಾಡಬೇಕಾಗುತ್ತದೆ. ಸಧ್ಯದ ಪರಿಸ್ಥಿತಿಯಲ್ಲಿ ರೈತ ಭೂಮಿಗೆ ಬೀಜವನ್ನು ಬಿತ್ತಿ ಆ ಬೆಳೆ ಬಂದು ಆ ಬೆಳೆಯನ್ನು ಮಾರುವಂಥ ಟೈಮ್‌ನಲ್ಲಿ ಅಂದರೆ ಕೊನೆಯ ಪಕ್ಷ ಈ ವರ್ಷದ ಡಿಸೆಂಬರ್ ಕೊನೆಯವರೆಗಾದರೂ ಈ ಅವಧಿಯನ್ನು ಮುಂದುವರಿಸಬೇಕೆಂದು ನಾವು ಸರ್ಕಾರದಲ್ಲಿ ಮನವಿಯನ್ನು ಮಾಡಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) :- ಮಾನ್ಯ ಉಪಾಧ್ಯಕ್ಷರೆ, ಈ ಬಡ್ಡಿ ಮನ್ನಾ ಮಾಡುವ ಯೋಜನೆಗೆ ಸಂಬಂಧಿಸಿದಂತೆ, ಈ ಅವಧಿಯನ್ನು ವಿಸ್ತರಣೆ ಮಾಡಬೇಕೆನ್ನುವ ಬಗ್ಗೆ ಈಗಾಗಲೇ ಪ್ರತಿಪಕ್ಷದ ನಾಯಕರು ಹಾಗೂ ಇನ್ನಿತರ ಹಿರಿಯ ಸದಸ್ಯರು ತಮ್ಮ ವಿಚಾರಗಳನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ಇವತ್ತು ಬೆಳಗ್ಗೆಯೇ ಈ ನಿಲುವಳಿ ಸೂಚನೆ ಬಂದಂಥ ಸಂದರ್ಭದಲ್ಲಿ ಇವತ್ತು ಕೊನೆಯ ದಿವಸ, ಅದಕ್ಕಾಗಿ ಈ ಅವಧಿಯನ್ನು ವಿಸ್ತರಣೆ ಮಾಡಿದ್ದೇವೆಂದು ಇವತ್ತು ಅಧಿವೇಶನ ಪ್ರಾರಂಭವಾದ ಬೆಳಗ್ಗೆ ತಕ್ಷಣವೇ ಸರ್ಕಾರ ಘೋಷಣೆ ಮಾಡಬೇಕಾಗಿತ್ತು. ಏಕೆಂದರೆ ಇವತ್ತು ನಮಗೆ ಬಂದಂಥ ಮಾಹಿತಿ ಪ್ರಕಾರ ರೈತರು ಯಾರು ಸೊಸೈಟಿಗಳ ಮುಖಾಂತರ ಸಾಲವನ್ನು ಪಡೆದುಕೊಂಡಿದ್ದಾರೆ ಮತ್ತು ಈ ಯೋಜನೆಯನ್ವಯ ಇವತ್ತು ಏನು ಕೊನೆಯ ದಿವಸ ಇದೆ, ನಿನ್ನೆಯವರೆಗಿನ ಮಾಹಿತಿಯನ್ನು ನಾವು ತೆಗೆದುಕೊಂಡರೆ ಕೇವಲ ಶೇಕಡ 30 ರಷ್ಟು ರೈತರು ಮಾತ್ರ ಈ ಯೋಜನೆಯ ಲಾಭವನ್ನು ಪಡೆದುಕೊಂಡಿದ್ದಾರೆನ್ನುವ ಮಾಹಿತಿ ಇದೆ. ಆಗಲೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ಮಾತನ್ನು ಹೇಳಿದರು. ಅದೇನೆಂದರೆ, ಇವತ್ತು 70 ಲಕ್ಷ ರೈತರಲ್ಲಿ ಕೇವಲ 9 ಲಕ್ಷ ರೈತರು ಈ ಸೊಸೈಟಿಗಳ ಮುಖಾಂತರ ಸಾಲವನ್ನು ತೆಗೆದುಕೊಳ್ಳುವಂಥದ್ದು, ಅವರಿಗೇ ಎಲ್ಲಾ ರೀತಿಯ facilities ಸಿಗುವಂಥದ್ದು, ಅವರಿಗೇ ಮನ್ನಾ ಆಗುವಂಥದ್ದು ಎಂದು. ಹಾಗಾದರೆ ಈ 30 ಪರ್ಸೆಂಟ್ ಲೆಕ್ಕ ಹಾಕಿದರೆ ಕೇವಲ ಎರಡು-ಮೂರು ಲಕ್ಷ ರೈತರಿಗೆ ಮಾತ್ರ ಈ ಯೋಜನೆಯಿಂದ

ಲಾಭ ಸಿಕ್ಕಿದೆ ಎನ್ನುವುದು ಇವತ್ತು ಸರ್ಕಾರ ಒದಗಿಸಿದ ಮಾಹಿತಿಯಿಂದ ಗೊತ್ತಾಗುತ್ತದೆ. ಹೀಗಾಗಿ ಸರ್ಕಾರ ಮಾಡುವಂಥ ಯಾವುದೇ ಯೋಜನೆಯು ಇಡೀ ರೈತ ಜನಾಂಗಕ್ಕೆ ಅನುಕೂಲವಾಗುವಂತಾಗಬೇಕು. ಆದ್ದರಿಂದ, ಈ ಬಡ್ಡಿ ಮನ್ನಾ ಯೋಜನೆ ಘೋಷಣೆ ಆದಮೇಲೆ ಕಳೆದ ಒಂದು ವರ್ಷದಿಂದ ಎಷ್ಟು ಜನ ರೈತರು ಈ ಅಸಲು ಬಾಕಿಯನ್ನು ತುಂಬಿದ್ದಾರೆ? ಬಡ್ಡಿ ಮನ್ನಾ ಆಗಿದ್ದರಿಂದ ರೈತರಿಗೆ ಎಷ್ಟು ಲಾಭ ಸಿಕ್ಕಿದೆ ಎನ್ನುವುದರ ಬಗ್ಗೆ ಮತ್ತು ಬಡ್ಡಿ ಮನ್ನಾ ಯೋಜನೆಯಲ್ಲಿ ಎಷ್ಟು ಬಡ್ಡಿಯನ್ನು ಸರ್ಕಾರ ಮನ್ನಾ ಮಾಡಿದೆ ಎನ್ನುವುದನ್ನು ಸ್ಪಷ್ಟೀಕರಣ ಮೂಲಕ ಸದನಕ್ಕೆ ಸರ್ಕಾರ ಎಲ್ಲಾ ವಿವರವಾದ ಮಾಹಿತಿಯನ್ನು ಕೊಡಬೇಕು. ಹಾಗಾದಾಗ ನಿಜವಾಗಿ ನಮ್ಮ ರೈತಾಪಿ ಜನರಿಗೆ ಈ ಯೋಜನೆಯ ಲಾಭ ಸಿಕ್ಕಿದೆಯೋ ಅಥವಾ ಇಲ್ಲವೋ ಎನ್ನುವುದನ್ನು ನಾವು ತಿಳಿದುಕೊಳ್ಳಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಇದು ಕೇವಲ ಸರ್ಕಾರದ ಯೋಜನೆಯಾಗುತ್ತದೆ. ಘೋಷಣೆಯಾಗುತ್ತದೆ ಹೊರತು, ನಿಜವಾಗಿ ಈ ಸಾಲದ ಸುಳಿಯಲ್ಲಿ ಸಿಕ್ಕಿ ಯಾರೂ ನೊಂದವರು ಇದ್ದಾರೆ. ಅವರಿಗೆ ಯಾವುದೇ ರೀತಿಯ ಬೆನಿಫಿಟ್ಸ್ ಸಿಗಲಿಕ್ಕೆ ಸಾಧ್ಯವಿಲ್ಲ. ಇವತ್ತು ಈ ಸೊಸೈಟಿಗಳ ಮುಖಾಂತರ ಬಹಳಷ್ಟು ಜನ ರೈತರು ಏನು ಸಾಲ ತೆಗೆದುಕೊಳ್ಳುತ್ತಾರೆ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ರೈತ ಬಾಂಧವರು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಳ್ಳುತ್ತಿದ್ದಾರೆ. ಆ ರಾಷ್ಟ್ರೀಕೃತ ಬ್ಯಾಂಕುಗಳವರು ಹಾಕುವಂಥ interest 10 ಪರ್ಸೆಂಟ್, 11 ಪರ್ಸೆಂಟ್, 12 ಪರ್ಸೆಂಟ್ ಆದರೆ ಸಹಕಾರಿ ಸಂಸ್ಥೆಗಳ ಮುಖಾಂತರ ಸಾಲ ತೆಗೆದುಕೊಳ್ಳುವಂಥವರಿಗೆ ಶೇಕಡ 6 ರಷ್ಟು ಬಡ್ಡಿ ಎಂದು ನೀವು ಹೇಳಿದಿರಿ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳುವ ರೈತರಿಗೆ ಶೇಕಡ 10ಕ್ಕೂ ಹೆಚ್ಚು ಬಡ್ಡಿ ಇದೆ. ಹಾಗಾದರೆ ಈ ತಾರತಮ್ಯ ಯಾವಾಗ ಹೋಗಬೇಕು? ಹೋಗುತ್ತದೆ? ಇವತ್ತು ಸೊಸೈಟಿಗಳ ಮುಖಾಂತರ ಸಾಲ ತೆಗೆದುಕೊಂಡ ರೈತರಿಗೆ ಬಡ್ಡಿ ಮನ್ನಾ, ಆದರೆ ಇವತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡ ರೈತರಿಗೆ ಬಡ್ಡಿ ಮನ್ನಾ ಇಲ್ಲ. ಹಾಗಾದರೆ ಈ ವ್ಯತ್ಯಾಸದ ಬಗ್ಗೆ ಸರ್ಕಾರ ಏನು ನಿಲುವು ತೆಗೆದುಕೊಂಡಿದೆ? ಇದರ ಬಗ್ಗೆ ಚಿಂತನೆ ಆಗಬೇಕಾಗಿದೆ. ಹಾಗಾದರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಕೇಂದ್ರ ಸರ್ಕಾರದ ಮುಖಾಂತರ ಈ ರಾಷ್ಟ್ರೀಕೃತ ಬ್ಯಾಂಕುಗಳ ಮೇಲೆ ಒತ್ತಡ ತರುವ ಮೂಲಕ ಈ ಬಡ್ಡಿ ಮನ್ನಾ ಯೋಜನೆಯನ್ನು ಜಾರಿಗೆ ತರಲಿಕ್ಕೆ ರಾಜ್ಯ ಸರ್ಕಾರ ಎಷ್ಟು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದೆ? ನಾವು ಕೇಂದ್ರ ಸರ್ಕಾರಕ್ಕೆ ಒತ್ತಡ ತರಬೇಕು, ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡವರಿಗೆ ಸಹಿತ ಈ ಬಡ್ಡಿ ಮನ್ನಾ ಯೋಜನೆಯನ್ನು ತರಬೇಕೆಂದು ಮಾನ್ಯ ಎಂ.ಪಿ. ಪ್ರಕಾಶ್‌ರವರು ಮತ್ತು ಇನ್ನು ಕೆಲವು ಸಚಿವರಿಂದ ಹೇಳಿಕೆಗಳು ಬಂದವು. ಆದರೆ ರಾಜ್ಯ ಸರ್ಕಾರದಿಂದ ಮಾನ್ಯ ಮುಖ್ಯಮಂತ್ರಿಗಳು, ಅದಕ್ಕೆ ಸಂಬಂಧಪಟ್ಟ ಸಚಿವರು

ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ, ಸಂಬಂಧಪಟ್ಟ ಹಣಕಾಸು ಸಚಿವರನ್ನು ಭೇಟಿಯಾಗಿ ಒತ್ತಡ ತರಬೇಕಾಗಿತ್ತು. ಇವತ್ತು ಬೇರೆ ಬೇರೆ ವಿಷಯಗಳು ಸೇರಿದಂತೆ ಈ ಆಲಮಟ್ಟಿ ಯೋಜನೆ ವಿಚಾರದಲ್ಲಿ delegation ಹೋಗುತ್ತೀರಿ. ಹಾಗಾದರೆ ಇದಕ್ಕೆ ಆಲಮಟ್ಟಿ delegation ತರಹ ತೆಗೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳಿಗೆ ಒತ್ತಾಯ ಮಾಡಿ, ಬಡ್ಡಿ ಮನ್ನಾ ಯೋಜನೆ ರಾಷ್ಟ್ರೀಕೃತ ಬ್ಯಾಂಕುಗಳಿಗೂ ಅನ್ವಯವಾಗಬೇಕೆನ್ನುವ ವಿಚಾರವನ್ನು ಒತ್ತಡದ ಮೂಲಕ ರಾಜ್ಯ ಸರ್ಕಾರ ಏಕೆ ಮಾಡಲಿಲ್ಲ ಎನ್ನುವುದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕಾಗಿದೆ. ಅಂದಾಗ ಮಾತ್ರ ನಿಜವಾಗಿ ಕಳೆದ ಹಲವಾರು ವರ್ಷಗಳಿಂದ ಬರಗಾಲದ ಬವಣೆಯಿಂದ ರೈತ ಬಾಂಧವರು ನೊಂದು ಹೋಗಿದ್ದಾರೆ. ಅವರಿಗೆ ಇವತ್ತು ಅನುಕೂಲ ಮಾಡುವಂಥದ್ದು ಆಗುತ್ತದೆ ಮತ್ತು ನೀವು ರೈತರ ಪರವಾಗಿ ಸರ್ಕಾರ ಇದೆ ಎನ್ನುವುದಕ್ಕೆ ಏನಾದರೂ ಅರ್ಥ ಉಳಿಯುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಈ ಬಡ್ಡಿ ಮನ್ನಾ ಯೋಜನೆ ಕೇವಲ ಕೆಲವೇ ಕೆಲವು ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿರುವಂಥದ್ದು ಆಗುತ್ತದೆಯೇ ಹೊರತು ಲಕ್ಷಾಂತರ ರೈತರಿಗೆ ಇದರ ಲಾಭ ಸಿಗಲಿಕ್ಕೆ ಸಾಧ್ಯವಿಲ್ಲವೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಇವತ್ತು ಕೊನೆಯ ದಿವಸವಾಗಿದ್ದು, ನಮ್ಮ ರೈತರು ಹಣ ತುಂಬಲಿಕ್ಕೆ ಆಗಲಿಲ್ಲ. ಮಾನ್ಯ ಶ್ರೀನಿವಾಸಗೌಡರು – " ಬೆಳೆ ವಿಮೆ ಹಣವನ್ನು ರಿಲೀಸ್ ಮಾಡಿದ್ದೇವೆ, 2–3 ತಿಂಗಳು ಲೇಟ್ ಆಗಿದೆ" ಎಂದು ಆಗಲೇ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಈ ಮಾತನ್ನು ಹೇಳಿದರು. 2003ರ ಆ ಮುಂಗಾರು ಬೆಳೆ ವಿಮೆ ಹಣ ಐದಾರು ತಿಂಗಳ ಹಿಂದೆಯೇ ಬಿಡುಗಡೆ ಆಗಬೇಕಾಗಿತ್ತು. ಆದರೆ ಸರ್ಕಾರ ಬಿಡುಗಡೆ ಮಾಡಲಿಲ್ಲ. ಇವತ್ತು ಹಣ ತುಂಬುವುದಕ್ಕೆ ಕೊನೆಯ ದಿವಸವಾಗಿದೆ. ಧಾರವಾಡ ಜಿಲ್ಲೆಯ ಉದಾಹರಣೆ ಕೊಡುವುದಾದರೆ, ಕಳೆದ ಎರಡು ದಿವಸಗಳ ಹಿಂದ ನಮ್ಮ ರೈತ ಬಾಂಧವರು ಬಂದಿದ್ದರು. ಇಲ್ಲಿಯವರೆಗೆ ಹಣ ಬಿಡುಗಡೆ ಆಗಿಲ್ಲ ಎಂದು ನಮಗೆ ಅವರು ಹೇಳಿ ಏಕೆ ಬಿಡುಗಡೆ ಆಗುತ್ತಿಲ್ಲ ಎಂದು ಕೇಳಿದರು. ಸರ್ಕಾರ ಆದೇಶ ಹೊರಡಿಸಿ ಹಣ ಬಿಡುಗಡೆ ಮಾಡಲು ಡಿ.ಸಿ. ಯವರಿಗೆ ಬಂದಿದೆ. ಆದರೆ ಬ್ಯಾಂಕುಗಳವರನ್ನು. ಕೇಳಿದರೆ ಇನ್ನೂ ಒಂದೆರಡು ದಿವಸ ಕಳೆದು ಬನ್ನಿ, ಒಂದು ವಾರ ಬಿಟ್ಟು ಬನ್ನಿ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಈ ಬಡ್ಡಿ ಮನ್ನಾ ಯೋಜನೆಯಲ್ಲಿ ಹಣ ತುಂಬುವುದಕ್ಕೆ ಇವತ್ತು ಕೊನೆಯ ದಿವಸವಾಗಿದೆ. ಆದರೆ ಬೆಳೆ ವಿಮೆ ಹಣ ನಮ್ಮ ರೈತ ಬಾಂಧವರಿಗೆ ಸಿಗಲಿಲ್ಲ. ಬೆಳೆ ವಿಮೆ ಹಣ ವಿತರಣೆಯಲ್ಲಿ ಹಲವಾರು ಲೋಪದೋಷಗಳಾಗಿವೆ. ಅದನ್ನು ಕಳೆದ ಎರಡು ವರ್ಷಗಳಿಂದ ಸರಿಪಡಿಸಲಿಕ್ಕೆ ಆಗಲಿಲ್ಲ. 2003ನೇ ಇಸವಿಯ ಮುಂಗಾರು ಬೆಳೆಯ ಹಣವನ್ನು ಬಿಡುಗಡೆ ಮಾಡುವುದಕ್ಕೆ ಈಗ ಪ್ರಾರಂಭ ಮಾಡಿದ್ದೀರಿ. ಇವತ್ತು ಯಾವುದೇ

ಸೊಸೈಟಿ, ಯಾವುದೇ ಬ್ಯಾಂಕ್‌ನಿಂದ ರೈತರು ಏನು ಸಾಲ ಮಾಡಿದ್ದಾರೆ. ಆ ಸಾಲ ತೀರಿಸುವಲ್ಲಿ ತಡ ಮಾಡಿದರೆ ಅದರ ಮೇಲೆ ಬಡ್ಡಿ, ಸುಸ್ತಿ ಬಡ್ಡಿ ಎಲ್ಲಾ ಸೇರಿಸಿ ವಸೂಲಿ ಮಾಡುತ್ತೀರಿ. ಆದರೆ ಇವತ್ತು ಸರ್ಕಾರ ಕೊಡಬೇಕಾದಂಥ ಬೆಳೆ ವಿಮೆ ಹಣವನ್ನು 6 ತಿಂಗಳು, ಒಂದು ವರ್ಷ ಲೇಟ್ ಮಾಡಿ ಕೊಡುತ್ತಿದೆ. ಬೆಳೆ ವಿಮೆ ಹಣದ ಮೇಲೆ ಸರ್ಕಾರ ಬಡ್ಡಿಯನ್ನು ಸೇರಿಸಿ ಕೊಡುತ್ತದೆಯೇ? ಇಲ್ಲ. ಅದಕ್ಕೆ ಮಾತ್ರ ಬಡ್ಡಿ ಇಲ್ಲ. ಆದರೆ ರೈತರು ಏನು ಸಾಲ ತಗೆದುಕೊಳ್ಳುತ್ತಾರೆ ಅದರ ಮೇಲೆ ಬಡ್ಡಿ ಕೊಡಬೇಕೆಂದು ಹೇಳುತ್ತೀರಿ. ಹೀಗಾಗಿ ಇವತ್ತು ರೈತ ಎಲ್ಲಾ ರೀತಿಯಿಂದಲೂ ಶೋಷಣೆಗೆ ಒಳಗಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ಬೆಳೆ ವಿಮೆ ಹಣ ರೈತರ ಕೈಗೆ ಸಿಗಲಿಲ್ಲ. ಇದರಿಂದ ಅವರು ಆ ಒಂದು ಅವಧಿಯಲ್ಲಿ ಅಸಲನ್ನು ತುಂಬಲಿಕ್ಕೆ ಆಗಲಿಲ್ಲ. ಆದ್ದರಿಂದ ಈ ಅವಧಿಯ ವಿಸ್ತರಣೆಯನ್ನು ಮಾರ್ಚ್ 2006 ರವರೆಗೆ ಮಾಡುವಂಥ ಅವಶ್ಯಕತೆಯಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಅದೇ ರೀತಿ ಏಪ್ರಿಲ್ 2004ರ ಮುಂಚೆ ಪ್ರಾಮಾಣಿಕವಾಗಿ ರೈತ ಬಾಂಧವರು ಯಾರು ಈ ಅಸಲು ಹಣ, ಬಡ್ಡಿ ಹಣವನ್ನು ತುಂಬಿದ್ದಾರೆ ಅವರಿಗೆ ಈ ಯೋಜನೆಯಿಂದ ಯಾವುದೇ ಲಾಭ ಇಲ್ಲ. ಹಾಗಾಗಿ ನಾನು ಕೇಳುವುದೇನೆಂದರೆ, ರೈತರು ಯಾರು ಪ್ರಾಮಾಣಿಕವಾಗಿ ಸಾಲ ಹಣವನ್ನು ಬಡ್ಡಿ ಸಹಿತ ತುಂಬುತ್ತಾರೆ. ಅವರಿಗೆ ಯಾವುದೇ ರೀತಿಯಾದಂಥ encouragement ಇಲ್ಲವೇ? ಈ ಪರಿಸ್ಥಿತಿ ತಲುಪುತ್ತದೆಂದರೆ, ನಾಳೆ ಒಬ್ಬ ಪ್ರಾಮಾಣಿಕವಾಗಿ ಹಣ ತುಂಬುವಂಥ ವ್ಯಕ್ತಿ ಸಹಿತ. 'ಇವತ್ತಲ್ಲ ನಾಳೆ ಸರ್ಕಾರ ಬಡ್ಡಿ ಮನ್ನಾ, ಸಾಲ ಮನ್ನಾ ಮಾಡುತ್ತಾರೆ. ನಾನೇಕೆ ತುಂಬಲಿ' ಎನ್ನುವಂಥ ಮನಃಸ್ಥಿತಿ ಅವನ ಮನಸ್ಸಿನಲ್ಲಿ ಮಾನಸಿಕವಾಗಿ ಉದ್ಭವವಾಗುವುದಕ್ಕೆ ಸಾಧ್ಯವಿದೆ. ಹೀಗಾಗಿ ಇವತ್ತು ಯಾರು defaulters ಇದ್ದಾರೆ. ಅವರಿಗೆ ಈ ಯೋಜನೆಯ ಲಾಭವನ್ನು ಕೊಡುತ್ತಿದ್ದೀರಿ. ಅದೇ ರೀತಿ ಇವತ್ತು ಯಾರು ಪ್ರಾಮಾಣಿಕವಾಗಿ ಹಣವನ್ನು ತುಂಬಿದ್ದಾರೆ. ಬಡ್ಡಿ ಹಣ ತುಂಬಿದ್ದಾರೆ ಅವರಿಗೂ ಸಹಿತ re-imbursement.ಅವರಿಗೆ ಆ ಹಣವನ್ನು ವಾಪಸ್ಸು ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಇದರಿಂದ ಪ್ರಾಮಾಣಿಕವಾಗಿ ಸಾಲದ ಹಣ ತುಂಬಿದ ರೈತರಿಗೂ ನೀವು encourage. ಮಾಡಲಿಕ್ಕೆ ಸಾಧ್ಯವಿದೆ. ಹೀಗಾಗಿ ಆ ದಿಶೆಯಲ್ಲಿ ಸರ್ಕಾರ ತನ್ನ ನಿರ್ಣಯವನ್ನು ಹೇಳಬೇಕಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನೊಂದು ಮುಖ್ಯವಾದುದು ಏನೆಂದರೆ, 2004 ರ ಏಪ್ರಿಲ್‌ನಿಂದ ಇಲ್ಲಿಯವರೆಗೆ ಈ ಮಾರ್ಚ್‌ವರೆಗೆ, ಈ ದಿನದವರೆಗೆ, ಈ ಒಂದು ವರ್ಷದಲ್ಲಿ ಯಾರು ಸಾಲವನ್ನು ತೆಗೆದುಕೊಂಡು ಅಸಲು ಬಾಕಿ ಇವೆ. ಅದನ್ನು ಯಾರು ತುಂಬಿದ್ದಾರೆ ಅವರಿಗೆ ಬಡ್ಡಿ ಮನ್ನಾದ ಸೌಲಭ್ಯವಿಲ್ಲ. ಹೀಗಾಗಿ ಈ ಒಂದು ವರ್ಷದಲ್ಲಿ current year ನಲ್ಲಿ ಯಾರು

ಹಣವನ್ನು ತುಂಬಿದ್ದಾರೆ. ಆ ರೈತರಿಗೂ ಸಹ ಈ ಬಡ್ಡಿ ಮನ್ನಾಯೋಜನೆಯನ್ನು ಅನ್ವಯ ಮಾಡಬೇಕೆಂದು ಸರ್ಕಾರದ ಮೇಲೆ ನಾವು ಒತ್ತಾಯವನ್ನು ತರುತ್ತಿದ್ದೇವೆ. ಅದಕ್ಕಾಗಿ ಸರ್ಕಾರ ಇದರ ಬಗ್ಗೆ ಒಂದು ವರ್ಷದ ಅವಧಿಯ ಈ ಬಡ್ಡಿ ಮನ್ನಾ ಮಾಡಬೇಕು ಎನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಹೀಗಾಗಿ, ಇವತ್ತು ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಳೆ ವಿಮೆ ಯೋಜನೆ ಇವತ್ತು, ಬ್ಯಾಂಕ್‌ನವರು ರೈತರಿಗೆ ನೇರವಾಗಿ ಆ ಬೆಳೆ ವಿಮೆ ಹಣವನ್ನು ನಗದು ಹಣವನ್ನು ಕೊಡುವುದಿಲ್ಲ. ಅವರು ಸಾಲ ಏನು ಮಾಡಿರುತ್ತಾರೆ, ಆ ಸಾಲಕ್ಕೆ ಅಡ್ಜಸ್ಟ್ ಮಾಡುವಂಥದ್ದು ಮಾಡುತ್ತಿದ್ದಾರೆ. ಇದಕ್ಕೆ ಯಾವುದೇ ರೂಲ್ಸ್ ಇಲ್ಲ. ಕಾನೂನು ಇಲ್ಲ ಆದರೆ, ಈ ಬೆಳೆ ವಿಮೆ ಹಣ ಬಂದದ್ದನ್ನು ನೇರವಾಗಿ ರೈತರ ಕೈಗೆ ಕೊಡಲಾರದೆ ಅದನ್ನು ಅವರು ಸಾಲದ ಹಣಕ್ಕೆ ಬಡ್ಡಿ ಹಣಕ್ಕೆ ಅಡ್ಜಸ್ಟ್ ಮಾಡುವಂಥದ್ದು ಇವತ್ತು ಪ್ರತಿಯೊಂದು ಬ್ಯಾಂಕ್‌ನಲ್ಲೂ ನಡೆಯುತ್ತಿದೆ. ಹೀಗಾಗಿ, ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ನಿರ್ದೇಶನವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ, ಬ್ಯಾಂಕುಗಳಿಗೆ ಇವತ್ತು ಕಳುಹಿಸಬೇಕಾಗಿದೆ. ಅಂದಾಗ ಮಾತ್ರ ಆ ರೈತ ಬದುಕಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಆ ಬೆಳೆ ವಿಮೆ ಹಣದ ಲಾಭ ಇವತ್ತು ನಮ್ಮ ರೈತರಿಗೆ ಸಿಗಲಿಕ್ಕೆ ಸಾಧ್ಯವಿಲ್ಲ. ಈ ಎಲ್ಲಾ ಮಾಹಿತಿಯನ್ನೂ ನೀವು ಸದನದ ಮುಂದಿಟ್ಟರೆ, ನಿಜಾಂಶ ಏನು ಎನ್ನುವುದು ಗುರುತಾಗುವುದಕ್ಕೆ ಸಾಧ್ಯವಿದೆ. ಈ ದಿಸೆಯಲ್ಲಿ ಸರ್ಕಾರ ತಕ್ಷಣವೇ ನಿರ್ಣಯ ಕೈಗೊಳ್ಳಬೇಕೆನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಈವರೆಗೆ ಏನು ಹೇಳಿದ್ದೇನೆ. ಪ್ರಾಮಾಣಿಕವಾಗಿ ರೈತರು ಎಷ್ಟು ಹಣವನ್ನು ತುಂಬಿದ್ದಾರೆಂದರೆ, 2004 ಏಪ್ರಿಲ್ 1 ರಿಂದ ಮಾರ್ಚ್ 31ರವರೆಗೆ ಅಲ್ಲಿಂದ ಇಲ್ಲಿಯವರೆಗೆ 4 ಲಕ್ಷದ 23 ಸಾವಿರದ 703 ರೈತರು ಈ ಒಂದು ವರ್ಷದ ಅವಧಿಯಲ್ಲಿ ಅಸಲು ಹಣವನ್ನು ತುಂಬಿದ್ದಾರೆ. ಅವರು ಒಟ್ಟು 789 ಕೋಟಿ ರೂ. ಹಣವನ್ನು ತುಂಬಿದ್ದಾರೆ. ಸಾಲ ಮರು ಪಾವತಿ ಮಾಡಿದ್ದಾರೆ. ಅಂದರೆ, ಒಂದು ವರ್ಷದ ಅವಧಿಯಲ್ಲಿ ಅವರು ಬಡ್ಡಿ ತುಂಬಿದ್ದು 163 ಕೋಟಿ ರೂಪಾಯಿಗಳು, ಹಾಗಾದರೆ, ಇವರಿಗೆ ಬಡ್ಡಿ ಮನ್ನಾ ಯೋಜನೆಯ ಲಾಭ ಇಲ್ಲ. ಅದಕ್ಕಾಗಿ ಈ 163 ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಯೋಜನೆ ಏನಿದೆ. ಈ 4 ಲಕ್ಷ ರೈತರೇನಿದ್ದಾರೆ. ಅವರಿಗೂ ಇದು ಅಪ್ಲೈ ಆಗಬೇಕು. ಸರ್ಕಾರ ಇದರ ಬಗ್ಗೆ ನಿರ್ಧಾರವನ್ನು ಪ್ರಕಟ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಮಾರ್ಚ್, ಏಪ್ರಿಲ್, ಮೇ, ಜೂನ್, ಇತ್ತೀಚಿನ ಈ 3 ತಿಂಗಳ ಬಡ್ಡಿ ಮನ್ನಾ ಆಗಿಲ್ಲ. ಆ 3 ತಿಂಗಳ ಬಡ್ಡಿ ಮನ್ನಾ ಆಗಬೇಕು ಎನ್ನುವ ಒತ್ತಾಯವನ್ನು ನಾನು ಮಾಡುತಿದ್ದೇನೆ. ಮಾನ್ಯ ಆರ್.ವಿ.ದೇಶಪಾಂಡೆಯವರು ಸಹಕಾರ ಮಂತ್ರಿಗಳು ಇವತ್ತು ಸಿದ್ದರಾಮಯ್ಯನವರ ಹಸಿರ ನಿಯೋಗ ತೆಗೆದುಕೊಂಡು ಹೋಗಿದ್ದು, ಪತ್ರಿಕೆಯಲ್ಲಿ ಬಂದಿದೆ.

ಮಾನ್ಯ ಆರ್.ವಿ. ದೇಶಪಾಂಡೆಯವರು ನಿಯೋಗ ತೆಗೆದುಕೊಂಡು ಹೋಗಿ ಮನವಿ ಪತ್ರವನ್ನು ಕೊಟ್ಟಿದ್ದಾರೆ. ಈ ಬಡ್ಡಿ ಮನ್ನಾ ವಿಸ್ತರಣೆ ಬಗ್ಗೆ. ಕಳೆದ ಸಾಲಿನ ಒಂದು ವರ್ಷದ ಅವಧಿಯಲ್ಲಿ ಯಾರು ಅಸಲು ತುಂಬಿದ್ದಾರೆ. ಅವರೇನು ಬಡ್ಡಿ ತುಂಬಿದ್ದಾರೆ. ಅವರಿಗೆ ಈ ಯೋಜನೆಯ ಲಾಭ ತಟ್ಟುವಂಥದ್ದು ಇದೆಲ್ಲದರ ಬಗ್ಗೆ ಮನವಿ ಪತ್ರ ಕೊಟ್ಟಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು, ಇಲ್ಲ, ವಿಸ್ತರಣೆ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಕೊಡಲಿಕ್ಕಾಗುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಇದು ಸರಿಯಲ್ಲ. ಹೀಗಾಗಿ, ಇವತ್ತು ಈ ಬೇಡಿಕೆಗಳೇನಿವೆ, ಇವು ರೈತರ ಹಿತಾಸಕ್ತಿ ಸಲವಾಗಿ ಇವತ್ತು ರೈತರ ಅನುಕೂಲದ ಸಲುವಾಗಿ ಆಗುವಂಥದ್ದು, ಅದಕ್ಕಾಗಿ ಸರ್ಕಾರ ಸ್ಪಂದನೆ ಮಾಡಬೇಕು. ಇವತ್ತೇನು ಬೇಡಿಕೆಗಳನ್ನು ಇಟ್ಟಿದ್ದೇವೆ. ಅದನ್ನು ಸರ್ಕಾರ ತಕ್ಷಣವೇ ಒಪ್ಪಿಕೊಳ್ಳುವಂಥದ್ದು ಆಗಬೇಕು ಎನ್ನುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಇವತ್ತೇನಾಗಿದೆ ಎಂದರೆ, ಈ ಅವಧಿಯೊಳಗೆ ಹಣ ತುಂಬಲೇಬೇಕಾಗಿದೆ. ಒಂದು, ಬೆಳೆ ವಿಮೆ ಹಣ ಕೈಗೆ ಸಿಗಲಿಲ್ಲ. ನಿಮಗೊಂದು ಉದಾಹರಣೆ ಕೊಡುತ್ತೇನೆ. ಇವತ್ತು ಈರುಳ್ಳಿಯನ್ನು ಖರೀದಿ ಮಾಡುವಂಥದ್ದನ್ನು ಮಿನಿಮಂ ಸಪೋರ್ಟ್ ಪ್ರೈಸ್ (ಬೆಂಬಲಬೆಲೆ) ಯಲ್ಲಿ ಖರೀದಿ ಮಾಡಿದರು. ಡಿಸೆಂಬರ್‌ನಲ್ಲಿ ಖರೀದಿ ಮಾಡಿದ ಸರ್ಕಾರ, ಇವತ್ತು ಮಾನ್ಯ ಪ್ರಕಾಶ್ ಹುಕ್ಕೇರಿಯವರು ಇಲ್ಲ. ಅವರು, ನಾವು ಎಲ್ಲಾ ಕೊಟ್ಟಿದ್ದೇವೆ. ಪೇಮೆಂಟ್ ಮಾಡಿದ್ದೇವೆಂದು ಹೇಳಿದರು. ಇವತ್ತು ಈರುಳ್ಳಿಯನ್ನು ನಮ್ಮ ಧಾರವಾಡ ಜಿಲ್ಲೆಯಲ್ಲಿ ಖರೀದಿ ಮಾಡಿದವರು ಕೋಟ್ಯಾಂತರ ರೂಪಾಯಿ ಕೊಡಬೇಕಾಗಿದೆ. ಡಿಸೆಂಬರ್‌ನಿಂದ ರೈತರಿಗೆ ಅದನ್ನು ಕೊಡಬೇಕಾಗಿದೆ. ನೀವು ಪರ್ಚೇಸ್ ಮಾಡಿದ್ದೀರಿ. ರೆಕಾರ್ಡ್ ತೆಗೆದು ನೋಡಿ. ಧಾರವಾಡ ಜಿಲ್ಲೆಯ ರೈತರಿಗೆ ಇನ್ನೂ ನೀವು ಪೇಮೆಂಟ್ ಮಾಡಿಲ್ಲ. ಹಾಗಾದರೆ, ಆ ಅಸಲು ಹಣವನ್ನು ಏಕೆ ತುಂಬಬೇಕು? ಹೀಗಾಗಿ ಈ ರೀತಿಯಾದ ಸಮಸ್ಯೆಗಳನ್ನು ರೈತರು ಅನುಭವಿಸುತ್ತಿರುವುದರಿಂದ ಈ ಬಡ್ಡಿ ಮನ್ನಾ ಯೋಜನೆಯನ್ನು ಮುಂದುವರೆಸಬೇಕೆನ್ನುವ ಒತ್ತಾಯವನ್ನು ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ಸರ್ಕಾರ ಇದಕ್ಕೆ ತಕ್ಷಣ ಸ್ಪಂದಿಸಬೇಕು. ಬೆಳಗ್ಗೆ ಇದನ್ನು ಘೋಷಣೆ ಮಾಡಬೇಕಾಗಿತ್ತು. ಆಗ ಎಷ್ಟೋ ಜನರಿಗೆ ಅನುಕೂಲವಾಗುತ್ತಿತ್ತು. ಕೊನೆಪಕ್ಷ ಮಾರ್ಚ್‌ವರೆಗೆ ಈ ಒಂದು ಅವಧಿಯನ್ನು ವಿಸ್ತರಣೆ ಮಾಡಬೇಕೆಂದು ಒತ್ತಾಯ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ಸಹಕಾರ ಸಚಿವರು) :– ಮಾನ್ಯ ವಿರೋಧ ಪಕ್ಷದ ನಾಯಕರು....

ಶ್ರೀ ಜಗದೀಶ್ ಶೆಟ್ಟರ್ :- ಈಗ ಕೆಸಿಸಿ ಬ್ಯಾಂಕ್‌ನಿಂದ 25 ಕೋಟಿ ರೂಪಾಯಿ ಬಡ್ಡಿ ಮನ್ನಾ ಏನಾಗಿದೆ? ಸರ್ಕಾರದವರು ಬಡ್ಡಿ ಮನ್ನಾ ಘೋಷಣೆ ಮಾಡಿದ್ದೀರಿ, ಆದರೆ, ಆ ಸೊಸೈಟಿಗಳಿಗೆ ರೀ-ಇಂಬರ್ಸ್ ಮಾಡುವುದಿಲ್ಲ. ಇವತ್ತು ಕೆಸಿಸಿ ಬ್ಯಾಂಕನವರದ್ದು ಹಿಂದೆ ಬಡ್ಡಿ ಮನ್ನಾ ಮಾಡಿದ್ದೀರಿ. ಇವತ್ತಿಗೂ ರೀ-ಇಬರ್ಂಸ್ ಮಾಡಲಿಲ್ಲ. ಧಾರವಾಡದ ಕೆಸಿಸಿ ಬ್ಯಾಂಕ್ ಎಲ್ಲಾ ದಿವಾಳಿ ಎದ್ದಿರಬಹುದು.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಶೆಟ್ಟರ್ ಸಾಹೇಬರೆ, ಇವತ್ತು ನಿಮ್ಮ ನಾಯಕತ್ವದಲ್ಲಿ ಧಾರವಾಡ ಜಿಲ್ಲೆಯಲ್ಲಿ ಬ್ಯಾಂಕ್‌ಗಳು ಸುಧಾರಿಸುತ್ತಿವೆ. ದಿವಾಳಿ ಎಂದು ಏಕೆ ಮಾತನಾಡುತ್ತಿದ್ದೀರಿ? ನಿಮಗೆ ಒಳ್ಳೆಯ ಕಾಲ ಬಂದಿದೆ. ಒಳ್ಳೆಯ ಬ್ಯಾಂಕ್‌ಗಳಿಗೆ ಕಾಲ ಬರುತ್ತಿದೆ. ದಿವಾಳಿ ಎಂದು ಏಕೆ ಹೇಳುತ್ತೀರಿ? ವಿರೋಧ ಪಕ್ಷದ ನಾಯಕರು. ಮಾನ್ಯ ಹಿರಿಯ ಸದಸ್ಯರು, ರೈತರ ವಿಚಾರದಲ್ಲಿ ಮುಖ್ಯವಾಗಿ ನಾವೆಲ್ಲರೂ ರೈತರ ಪರವಾಗಿ ಇರುವ ಜನ. ಹಾಗಾಗಿ ಪಕ್ಷಾತೀತವಾಗಿ ರೈತರ ಸಮಸ್ಯೆಗಳು ಬಂದಾಗ ಒಂದಾಗಿ ನಾವು ಹೋರಾಟ ಮಾಡಿದ್ದೇವೆ. ಆ ಸಮಸ್ಯೆ ಬಗೆಹರಿಸಲಿಕ್ಕೆ ಆತನಿಗೆ ಸಹಾಯ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಆದರೆ, ಹಲವಾರು ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದಿವೆ. ಇವತ್ತು ಮುಖ್ಯವಾಗಿ ಸಾಲದ ಭಾರ, ಬಡತನ ಇಂಥ ಹಲವಾರು ಸಮಸ್ಯೆಗಳ ಬಗ್ಗೆ ರೈತರು ಹೊರಾಟ ಮಾಡುತ್ತಿದ್ದಾರೆ. ಏಕೆಂದರೆ ತಾವು ಹೇಳಿದ ಹಾಗೆ, ನಾನು ಒಪ್ಪಿಕೊಳ್ಳುತ್ತೇನೆ. ರೈತ ಏನು ಬೆಳೆಯುತ್ತಾನೆ. ಆತನಿಗೆ ಯೋಗ್ಯವಾದ ಮಾರುಕಟ್ಟೆ ಇಲ್ಲ. ಹಾಗಾಗಿ, ಇದೊಂದು ಕೇವಲ ಕರ್ನಾಟಕಕ್ಕೆ ಸೀಮಿತವಾದ ಸಮಸ್ಯೆಯಲ್ಲ. ನಮ್ಮ ದೇಶಕ್ಕೆ ಸೀಮಿತವಾದ ಸಮಸ್ಯೆ. ಇವತ್ತು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಸಹ ರೈತರ ಸರ್ವಾಂಗೀಣ ಅಭಿವೃದ್ಧಿಗಾಗಿ ನಮ್ಮ ಭಾರತ ದೇಶದ ಎಕಾನಮಿಯ ಬೆನ್ನೆಲುಬು ರೈತರೆಂದು ಹೇಳಿದಾಗ, ರೈತರು ಕೃಷಿ ಕಾರ್ಮಿಕರು ಇವರ ಸಮಸ್ಯೆ ಬಗ್ಗೆ ನಾವು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಆ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಇವತ್ತು ನಮ್ಮ ನಾಯಕರಾದ ಧರ್ಮಸಿಂಗ್‌ರವರು ನಮ್ಮ ಗೌರವಾನ್ವಿತ ಉಪ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು, ಎಲ್ಲಾ ಸ್ನೇಹಿತರು ಮತ್ತು ನಮ್ಮ ಕೊಯಲಿಷನ್ ಸರ್ಕಾರ, ನಮ್ಮ ಸಿ.ಎಂ.ಪಿ. ಪ್ರಕಾರ, ಹಲವಾರು ಯೋಜನೆಗಳನ್ನು ರೈತರ ಪರವಾಗಿ ಘೋಷಣೆ ಮಾಡಿದ್ದೇವೆ. ಅದರ ಲಾಭ ಸಹ ರೈತರಿಗೆ ಆಗಿದ್ದು, ಇದನ್ನು ತಾವು ಸಹ ಒಪ್ಪಿಕೊಂಡಿದ್ದೀರಿ. ತಾವು ಇಲ್ಲ, ಇನ್ನೂ ಹೆಚ್ಚಿಗೆ ಕೊಡಿ, ಬಹಳ ಕಷ್ಟದಲ್ಲಿದಾರೆಂದು ಹೇಳುತ್ತೀರಿ. ಆದರೆ, ಎಲ್ಲರೂ ತಾವು ಸರ್ಕಾರ ಮಾಡಿದ ಕ್ರಮ ಸರಿ ಇದೆ ಎಂದು ಒಂದು ಧ್ವನಿಯಲ್ಲಿ ಹೇಳುತ್ತೀರಿ ಎಂದು ನಾನು ಭಾವಿಸಿದ್ದೇನೆ. ಇವತ್ತು ನಮ್ಮ ಉಪ ಮುಖ್ಯಮಂತ್ರಿಗಳು, ನಾವು ಹಲವಾರು ಬಾರಿ ಇದರ

ಬಗ್ಗೆ ಚಿಂತನೆ ಮಾಡಿದ್ದೇವೆ. ನಾನು ಪ್ರಾಮಾಣಿಕವಾಗಿ ಒಂದು ಮಾತು ಹೇಳುತ್ತೇನೆ, ಯಾವ ಯಾವಾಗ ರೈತರ ಸಮಸ್ಯೆಗಳನ್ನು ತೆಗೆದುಕೊಂಡು ನಾನು ಮುಖ್ಯಮಂತ್ರಿಗಳ ಜೊತೆ ಹೋಗಿದ್ದೇನೆ. ಉಪ ಮುಖ್ಯಮಂತ್ರಿಗಳ ಜೊತೆ ಹೋಗಿದ್ದೇನೆ, ಅವರು ಬಹಳ ಸಹಾನುಭೂತಿಯಿಂದ ಈ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಸಂಪೂರ್ಣವಾದ ಬೆಂಬಲ, ಸಹಕಾರ ಕೊಡುತ್ತಾ ಬಂದಿದ್ದಾರೆ. ಆದರೆ, ಕೆಲವು ಸಮಸ್ಯೆಗಳು ಉಳಿದಿವೆ. ನಾನು ಒಪ್ಪಿಕೊಳ್ಳುತ್ತೇನೆ. ಮುಖ್ಯವಾಗಿ, ಇವತ್ತು ರೈತರಿಗೆ 6 ಪರ್ಸೆಂಟ್ ಬಡ್ಡಿಯಲ್ಲಿ ನಾವು ಸಾಲವನ್ನು ಕೊಡುತ್ತಿದ್ದೇವೆ. ನಾನು ಬಹಳ ವಿನಯದಿಂದ ಹೇಳುತ್ತೇನೆ. ಅಷ್ಟೇ ಅಭಿಮಾನದಿಂದ ಹೇಳುತ್ತೇನೆ. ನಮ್ಮ ಭಾರತ ದೇಶದಲ್ಲಿ ಕರ್ನಾಟಕದಲ್ಲಿ ಇದು ಮೊದಲನೆ ಸರ್ಕಾರ ಇದೆ. ಈ ಸರ್ಕಾರ ಇವತ್ತು ರೈತರಿಗೆ 6 ಪರ್ಸೆಂಟ್ ಬಡ್ಡಿ ಮೇಲೆ ಸಾಲ ಕೊಡುತ್ತಿದೆ. ದೇಶದಲ್ಲಿ ಬೇರೆ ಯಾವ ಸರ್ಕಾರವೂ ಆ ಕೆಲಸ ಮಾಡುತ್ತಿಲ್ಲ. ಇದು ನಾವೆಲ್ಲರೂ ಅಭಿಮಾನ ಪಡುವಂಥ ಮಾತು. ಅದರಂತೆ ನಾನು ಕೆಲವು ದಿವಸಗಳ ಹಿಂದೆ ಪ್ರೈಮ್ ಮಿನಿಸ್ಟರ್‌ರವರನ್ನು ಭೇಟಿಯಾಗಿದ್ದೆ. 8 ದಿವಸಗಳ ಹಿಂದೆ ನಾನು ಕೃಷಿ ಸಚಿವರಾದ ಮಾನ್ಯ ಶರದ್ ಪವಾರ್‌ರವರನ್ನು ಭೇಟಿಯಾಗಿದ್ದೆ. ಅವರನ್ನು ಭೇಟಿಯಾದಾಗ, ಅವರು ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಮಾನ್ಯ ಯಡಿಯೂರಪ್ಪನವರೂ ಹೇಳಿದರು. ತಾವು ಹೇಳುತ್ತೀರಿ, ಇದು ಇಡೀ ದೇಶದಲ್ಲಿ ಏಕೆ ವಿಸ್ತರಣೆಯಾಗಬಾರದು? ಪ್ರೈಮ್ ಮಿನಿಸ್ಟರ್‌ರವರು, ಖಂಡಿತವಾಗಿ ನಾವು ಇದರ ಬಗ್ಗೆ ಪ್ಲಾನಿಂಗ್ ಕಮಿಷನ್ ಜೊತೆ ಡಿಸ್ಕಸ್ ಮಾಡುತ್ತೇವೆಂದು ಹೇಳಿದರು. ಮಾನ್ಯ ಶರದ್ ಪವಾರ್‌ರವರು ರೈತರ ಪರವಾಗಿ ಇರುವವರು, ರೈತ ಪ್ರತಿನಿಧಿಗಳು. ಅವರಿಗೂ ಸಹ ಸಂತೋಷವಾಯಿತು. ಅವರು ದೇಶಪಾಂಡೆಯವರೆ, ಇದರ ಬಗ್ಗೆ ನಾವೂ ಸಹ ಚಿಂತನೆ ಮಾಡುತ್ತೇವೆಂದು ಹೇಳಿದರು. ಹೀಗಾಗಿ ಈ ದೃಷ್ಟಿಯಿಂದ ಇದರ ಲಾಭ ಈ ದೇಶದ ಎಲ್ಲಾ ರೈತರಿಗೆ ಆಗಬೇಕೆಂಬುದು ನಿಮ್ಮೆಲ್ಲರ ಸಜೆಷನ್. ಆ ಯೋಜನೆ ನಡೆಯುತ್ತಿದೆ, ಇದರಲ್ಲಿ ಮುಖ್ಯವಾಗಿ ರೈತರಿಗೆ ಕಳೆದ ವರ್ಷ ನಾವು 1331 ಕೋಟಿ ರೂಪಾಯಿಗಳ ಸಾಲವನ್ನು 6 ಪರ್ಸೆಂಟ್ ಬಡ್ಡಿಯಂತೆ ಕೊಟ್ಟಿದ್ದೇವೆ. ಈ ವರ್ಷ ಏಪ್ರಿಲ್–ಮೇ ಎರಡು ತಿಂಗಳಿನಲ್ಲಿ ರೈತರಿಗೆ 413 ಕೋಟಿ ರೂಪಾಯಿ ಸಾಲ ಕೊಟ್ಟಿದ್ದೇವೆ. ನಾವು ಅಂದಾಜು ಮಾಡಿದ್ದೇವೆ. ಈ ವರ್ಷ ಲೆಂಡಿಂಗ್, ಏಕೆಂದರೆ ಒಂದು ಕಡೆ ಈ ಓವರ್ ಡ್ಯೂ ರೈತರು ಏನು ಪ್ರಿನ್ಸಿಪಲ್ ಕೊಡಬೇಕಾಗಿತ್ತೋ ಅವರು ಅದನ್ನು ಕೊಟ್ಟಿದ್ದಾರೆ. ಅವರಿಗೂ ಅರ್ಹತೆ ಬಂದಿದೆ, ಬ್ಯಾಂಕ್ಸ್ ಸಹಕಾರಿ ಸಂಘಗಳಿಗೂ ಅರ್ಹತೆ ಬಂದಿದೆ, ಹೀಗಾಗಿ ಈ ಲೆಂಡಿಂಗ್ ಏನು ಇದೆ ಕಳೆದ ವರ್ಷ 1331 ಕೋಟಿ ರೂಪಾಯಿ ಇದರಲ್ಲಿ ಶಾರ್ಟ್ ಟರ್ಮ್, ಲಾಂಗ್‌ಟರ್ಮ್, ಮೀಡಿಯಂ ಟರ್ಮ್, ಎಲ್ಲಾ ಸೇರಿದೆ. ಇದು ಸುಮಾರು ಈ ವರ್ಷ 1700 ಕೋಟಿ ರೂಪಾಯಿ ಮೇಲೆ ಹೋಗಬಹುದು ಎಂದು ನಾವು ಅಂದಾಜು ಮಾಡಿದ್ದೇವೆ. ಮುಖ್ಯವಾಗಿ ಕೇಂದ್ರ ಸರ್ಕಾರವೂ ಕೂಡ

ಮಾನ್ಯ ಹಣಕಾಸಿನ ಸಚಿವರೂ ಕೂಡ ಆ ಸಭೆಯಲ್ಲಿ ಭಾಗವಹಿಸಿದ್ದಾರೆ ಹಾಗೂ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಭಾಗವಹಿಸಿದ್ದಾರೆ. ಭಾರತ ದೇಶ ಸಂಪನ್ನ ಆಗಬೇಕಾದರೆ ಗ್ರಾಮಾಂತರ ಪ್ರದೇಶದ ರೈತರು, ಕೂಲಿಕಾರರು, ಆರ್ಟಿಸಾನ್ಸ್ ಇವರೆಲ್ಲಾ ಸಮೃದ್ಧರಾಗಬೇಕು. ಹೀಗಾಗಿ ಗ್ರಾಮಾಂತರ ಪ್ರದೇಶಕ್ಕೆ ಏನು ಕ್ರೆಡಿಟ್ ಹೋಗುತ್ತದೆ. ಆ ಕ್ರೆಡಿಟ್ ಬರುವ ಮೂರು ವರ್ಷದಲ್ಲಿ ಡಬ್ಬಲ್ ಮಾಡಿ ಎಂದು ಹೇಳುತ್ತಿದ್ದಾರೆ. ಡಬ್ಬಲ್ ಮಾಡಿ ಎಂದ ಕೂಡಲೇ ಹಣ ಹಂಚಲಿಕ್ಕೆ ಬರುವುದಿಲ್ಲ. ಮಾನ್ಯ ಮಾಧುಸ್ವಾಮಿಯವರು ಒಂದು ಪಾಯಿಂಟ್ ರೈಸ್ ಮಾಡಿದರು. ಎಲಿಜಿಬಿಲಿಟಿ, ಯಾವುದೇ ಸಂಸ್ಥೆಯಲ್ಲಿ ರೈತರಿಗೆ ಡೈರೆಕ್ಟ್ ಆಗಿ ಸಾಲ ಕೊಡುವುದಕ್ಕೆ ಬರುವುದಿಲ್ಲ. ಆ ಸಂಸ್ಥೆಗೆ ಎಲಿಜಿಬಲಿಟಿ ಇರಬೇಕಾಗುತ್ತದೆ. ಆ ನಾರ್ಮ್ಸ್ ನಾವು ಫಿಕ್ಸ್ ಮಾಡಿಲ್ಲ. ನಬಾರ್ಡ್‌ದಿಂದ ಆ ನಾರ್ಮ್ಸ್ ಫಿಕ್ಸ್ ಆಗಿದೆ. ಹಾಗಾಗಿ ನಮ್ಮ ಸರ್ಕಾರ ಬಡ್ಡಿ ದಂಡ ಬಡ್ಡಿ ಮನ್ನಾ ಏನೂ ಮಾಡಿದ್ದೇವೆ. ಇದರಿಂದ ರೈತರಿಗೆ ಅದು ಸಹಾಯಕವಾಗುತ್ತದೆ. ಹಾಗು ಹಲವಾರು ಬ್ಯಾಂಕ್‌ಗಳು. ಅದು ಪಿಎಲ್‌ಡಿ ಬ್ಯಾಂಕ್ಸ್ ಇರಬಹುದು, ಡಿಸಿಸಿ ಬ್ಯಾಂಕ್ಸ್ ಇರಬಹುದು, ಯಾರು ಸೆಕ್ಷನ್ 11ರ ಕೆಳಗಡೆ ಇದ್ದಾರೆ ಯಾರಿಗೆ ಅರ್ಹತೆ ಇಲ್ಲ ಅವರಿಗೂ ಸಹ ಸಾಕಷ್ಟು ಅರ್ಹತೆ ಬರುತ್ತದೆ. ಆ ಅರ್ಹತೆ ಬಂದಾಗ ಹೆಚ್ಚಿನ ರೈತರಿಗೆ ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಹಿರಿಯ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಇವತ್ತು ರಾಜ್ಯದಲ್ಲಿ 70 ಲಕ್ಷ ರೈತರು ಇದ್ದಾಗ ಕೇವಲ 9,10, ಪರ್ಸೆಂಟ್ ರೈತರಿಗೆ ಮಾತ್ರ ಸಹಾಯಕವಾಗುತ್ತಿದೆ ಎಂದು. ನಿಜ, ಇದು ಆಗಬೇಕಾಗುತ್ತದೆ ಯಾವ ರೈತನಿಗೆ ಅವಶ್ಯಕತೆ ಇದೆ ಆ ರೈತರಿಗೆ ಸಾಲ ಸಿಗಬೇಕು. ಅದೇ ಉದ್ದೇಶದಿಂದ ನಾವು ಕೆಲಸ ಮಾಡುವಾಗ ಅದರ ಬಗ್ಗೆ ಸಂಸ್ಥೆಗಳಿಗೆ ಎಲಿಜಿಬಲಿಟಿ ಬರಬೇಕಾಗಿತ್ತು. ಈ ಒಂದು ಸ್ಕೀಂನಿಂದ ಹೆಚ್ಚಿನ ಎಲಿಜಿಬಿಲಿಟಿ ಬರಬಹುದೆಂಬುದು ನನ್ನ ಒಂದು ಅನಿಸಿಕೆ. ಆ ದೃಷ್ಟಿಯಿಂದ ಹೆಚ್ಚಿನ ರೈತರಿಗೂ ಕೂಡ ಸಹಾಯವಾಗಬಹುದು. ಆದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಆ ಒಂದು ಮ್ಯಾಸಿವ್ ಪ್ಲಾನ್ ಆಗಬೇಕಾದರೆ, ಇವತ್ತು ಅವರಿಗೆ ನ್ಯಾಶನಲ್ ಬ್ಯಾಂಕ್, ಆರ್.ಆರ್.ಬಿ. ಯವರು ಕೊಡುತ್ತಾರೆ, ನಾವೂ ಕೊಡುತ್ತೇವೆ, ಇವತ್ತಿನ ಪ್ರಶ್ನೆ ಏನೆಂದರೆ, ಸಹಕಾರಿ ಸಂಘದಿಂದ ಕರ್ನಾಟಕದಿಂದ ನಾವು ಏನು ಸಾಲ ಕೊಡುತ್ತೇವೆ. ಇಟ್ ಈಸ್ ಬಿಟ್ವೀನ್ 40 ಟು 43 ಪರ್ಸೆಂಟ್, 57 ಪರ್ಸೆಂಟ್ ಸಾಲ ರೈತನಿಗೆ ಸಿಗುವುದು ನ್ಯಾಷನಲೈಸ್ಡ್ ಬ್ಯಾಂಕ್ಸ್ ಅಂಡ್ ಆರ್.ಆರ್.ಬಿ.ಎಸ್ ನಿಂದ ನ್ಯಾಷನಲೈಸ್ಡ್ ಬ್ಯಾಂಕ್‌ಗೆ ಯಾರು ಕೊಡುತ್ತಾರೆ? ಲೆಟ್ ಬಿ ಹಾನೆಸ್ಟ್, ಆರ್. ಆರ್. ಬಿ.ಎಸ್‌ಗೆ ಯಾರು ಕೊಡುತ್ತಾರೆ? ಯಾವ ರೈತ ಸಂಪನ್ನರಿದ್ದಾರೆ. ಎಲ್ಲಿ ನೀರಾವರಿ ಇದೆ, ದೇ ಪಿಕ್ ಅಂಡ್ ಚ್ಯೂಸ್, ನಮ್ಮ ಸಹಕಾರಿ ಸಂಘಗಳಿಗೆ ಆ ರೀತಿ ಆಗುವುದಿಲ್ಲ. ಒಂದು ಹಳ್ಳಿಯಲ್ಲಿ ಎಷ್ಟು ಜನ ರೈತರು ಸದಸ್ಯರು

ಇದ್ದಾರೆ. ಯಾರಿಗೆ ಜಮೀನು ಇದೆ. ಅವರಿಗೆ ಅರ್ಹತೆ ಇದೆ ಅಂಥವರಿಗೆ ಕೊಟ್ಟು ಬಿಡುತ್ತಾರೆ. ಮುಖನೋಡಿ ಕೊಡುವ ಪದ್ಧತಿ ಇಲ್ಲಿ ಇಲ್ಲ. ಹೀಗಾಗಿ ಸಹಕಾರಿ ರಂಗದಿಂದ ಕ್ರೆಡಿಟ್ ಹೆಚ್ಚಾಗಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದೇ ಈವತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗುರಿ. ಆ ದೃಷ್ಟಿಯಿಂದ ನಾವು ಇವತ್ತು ಹಲವಾರು ಕಾರ್ಯಕ್ರಮಗಳನ್ನು ತರುತ್ತಿದ್ದೇವೆ. ವೈದ್ಯನಾಥ್ ಕಮಿಟಿ ರಿಪೋರ್ಟ್ ಏನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದರ ಬಗ್ಗೆ ನಮ್ಮ ಅಭಿಪ್ರಾಯ ಕೇಳಿದ್ದಾರೆ. ಯಾವ ಪ್ರಕಾರ ಸಹಕಾರಿ ಕ್ಷೇತ್ರಕ್ಕೆ ಅಟಾನಮಿ ತರುವುದಕ್ಕೆ ಸಾಧ್ಯ? ಯಾವ ಪ್ರಕಾರ ಡೆಪಾಸಿಟ್‌ಗಳ ಇಂಪ್ರಸ್ಟ್ ಪ್ರೊಟೆಕ್ಟ್ ಮಾಡುವುದಕ್ಕೆ ಸಾಧ್ಯ? ಯಾವ ಪ್ರಕಾರ ಟ್ರಾನ್ಸ್ ರೆನ್ಸಿ ತರುವುದಕ್ಕೆ ಸಾಧ್ಯ? ಅದರ ಬಗ್ಗೆ ಕೂಡ ನಾವು ತ್ರೀ ಸದಸ್ಯರ ಒಂದು ಕಮಿಟಿ ಮಾಡಿ, ಮಾನ್ಯ ಬಿ.ಎಸ್. ವಿಶ್ವನಾಥ್‌ರವರ, ನಾಣಯ್ಯರವರ ಕಮಿಟಿ ಮಾಡಿದ್ದು, ಅವರ ರಿಪೋರ್ಟ್ ಕೂಡ ಮೊನ್ನೆ ಬಂದಿದೆ. ಹೀಗಾಗಿ ಎಲ್ಲಾ ದೃಷ್ಟಿಯಿಂದ ರೈತರಿಗೆ ಸಹಾಯವಾಗುವ ದೃಷ್ಟಿಯಿಂದ ಹಲವಾರು ಕ್ರಮಗಳನ್ನು ನಮ್ಮ ಸರ್ಕಾರ ತೆಗೆದುಕೊಳ್ಳುತ್ತಿದೆ. ಇವತ್ತು ತಾವು ಮುಖ್ಯವಾಗಿ ಏನು ಕೇಳಿದಿರಿ, ಮೊದಲನೇಯದು ಎಕ್ಸಟೆನ್‌ಸನ್ ಆಫ್ ಡೇಟ್. ಜೂನ್ ಮುಗಿಯುತ್ತಿದೆ. ಎರಡನೆಯದು ದಿನಾಂಕ: 01-04-2004 ರಿಂದ 31-03-2005 ಈ ಪಿರಿಯೇಡ್‌ನಲ್ಲಿ ಯಾವ ರೈತರು ತಮ್ಮ ಸಾಲ ಬಡ್ಡಿ ಮರುಪಾವತಿ ಮಾಡಿದ್ದಾರೆ. ಅವರಿಗೂ ಲಾಭ ಮಾಡಿಕೊಡಿ. ಏಕೆಂದರೆ, ತಾವು ಮಾನ್ಯ ಉಪಮುಖ್ಯಮಂತ್ರಿಗಳು, ಸಹಕಾರ ಸಚಿವರು, ಕಂದಾಯ ಸಚಿವರು ಹಲವಾರು ಮಂತ್ರಿಗಳು, ತಾವು ಸ್ಟೇಟ್‌ಮೆಂಟ್ ಮಾಡಿಕೊಂಡು ಬಂದಿರಿ, ನಾವು ಇಂತಹ ಸ್ಕೀಂ ತರುತ್ತೇವೆ. ಅದನ್ನು ನಂಬಿ ಜನ ಕೊಟ್ಟಿದ್ದಾರೆ ಎಂದು ಹೇಳಿದಿರಿ. ಮಾನ್ಯ ಯಡಿಯೂರಪ್ಪನವರು, ಮಾನ್ಯ ಮಾಧುಸ್ವಾಮಿಯವರು ತಾವು ಏನು ಹೇಳಿದಿರಿ, ಕೋಕನೆಟ್, ಅರೆಕಾ, ಫಾರ್ಮ್‌ಹೌಸ್, ಪಿಗ್ರಿ, ಫೌಲ್ಟ್ರಿ ಇವುಗಳನ್ನು ಕೂಡ ಅದರಲ್ಲಿ ಸೇರಿಸಿರಿ ಎಂದು ಹೇಳಿದಿರಿ.ಅದರಂತೆ ನಮ್ಮ ಮಾನ್ಯ ವಿಶ್ವೇಶ್ವರ ಹೆಗಡೆಯವರು ಖಾತೆ ಸಾಲ, ಒವರ್ ಡ್ರಾಫ್ಟ್ ಲೋನ್, ಇದನ್ನು ಇನ್‌ಕ್ಲೂಡ್ ಮಾಡಿ ಎಂದು ಹೇಳಿದರು. ಇದರ ಬಗ್ಗೆ ನಾವೂ ಸಹ ನಿಮ್ಮಂಥ ಸ್ನೇಹಿತರ ಮನವಿಯ ಮೇಲೆ ಮತ್ತು ಹಲವಾರು ರೈತರ ಸಂಸ್ಥೆಯ ಮನವಿಗಳು, ಸಹಕಾರಿ ಸಂಘಗಳ ಮನವಿಗಳು ಅದರ ಮೇಲೆ ನಾವೂ ಸಹ ಒಂದು ಫೈಲ್ ರೆಡಿ ಮಾಡಿ ಹಣಕಾಸಿನ ಇಲಾಖೆಗೆ ಈಗಾಗಲೇ ಕಳುಹಿಸಿದ್ದೇವೆ ಇದರ ಜೊತೆಗೆ ನಾವು ಹಣಕಾಸಿನ ಇಲಾಖೆಗೆ ಮನವಿ ಮಾಡಿದ್ದೇವೆ. ದಿನಾಂಕ: 01.04.2004 ರಿಂದ 31.03.2005 ತನಕ ರೈತರು ಸಾಲ ಬಡ್ಡಿ ಮರುಪಾವತಿ ಮಾಡಿದ್ದಾರೆ. ಅವರಿಗೂ ಈ ಕನ್‌ಸೆಷನ್ ಕೊಟ್ಟರೆ ಒಳ್ಳೆಯದು, ಇದು ಆದರೆ ಏನಾಗುತ್ತದೆ ಎಂದರೆ ಅವರೂ ಸಹ ಈ ಸಾಲದಿಂದ ಋಣಮುಕ್ತರಾಗುತ್ತಾರೆ. ಇಲ್ಲಿ ಹಣ ರಿಫಂಡ್ ಕೊಡುವ ಪ್ರಶ್ನೆಯಿಲ್ಲ. ಹಣ

ರಿಫಂಡ್ ಕೊಡಬಹುದು ಅಥವಾ ಅಡ್ಜ್‌ಸ್ಟ್‌ಮೆಂಟ್ ಮಾಡುವುದಕ್ಕೆ ಸಾಧ್ಯವಿದೆ ಎಂದು ನಾವು ಹೇಳಿದ್ದೇವೆ. ಅದರ ಪ್ರಕಾರ ಇನ್ನೂ ಫೈನಾನ್ಸ್ ಮಿನಿಸ್ಟ್ರಿ ಇದನ್ನು ಒಪ್ಪಿಕೊಂಡಿಲ್ಲ. ಇದರ ಬಗ್ಗೆ ಫೈನಾನ್ಸ್ ಮಿನಿಸ್ಟರ್‌ರವರು ನಾನು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳಿದರು, ಏಕೆಂದರೆ, ನೇರವಾಗಿ ಹಣಕಾಸಿನ ವಿಷಯ ಬಂದಾಗ ಇದರ ಬಗ್ಗೆ ಸಾಧಕ ಬಾಧಕಗಳನ್ನು ನೋಡಿಕೊಂಡು ಹಣಕಾಸಿನ ಇಲಾಖೆಯವರು ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ. ನಿನ್ನೆ ಆಕಸ್ಮಿಯಲಿ ಇದರ ಬಗ್ಗೆ ನಾವು ಅವರ ಜೊತಗೆ ಮಾತನಾಡಬೇಕಾಗಿತ್ತು. ಆದರೆ ಡೆಲ್ಲಿಯಲ್ಲಿ ಅರ್ಬನ್ ಡಿಪಾರ್ಟ್‌ಮೆಂಟ್‌ನವರು ಸಭೆ ಕರೆದಿದ್ದರು. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಅವರು ಅಲ್ಲಿ ಹೋಗಬೇಕಾಗಿತ್ತು. ಹೀಗಾಗಿ ಅವರು ಬರಲಿಕ್ಕೆ ಆಗಿಲ್ಲ. ಇವತ್ತು ನಾಳೆ ಒಳಗೆ ಜೊತೆ ಸೇರಿ ಚರ್ಚೆ ಮಾಡಿ ಒಂದು ನಿರ್ಣಯ ಮಾಡುತ್ತೇವೆ. ಅದರ ಬಗ್ಗೆ ಈ ಸಂದರ್ಭದಲ್ಲಿ ಇಷ್ಟು ಹೇಳಬಹುದು. ಸರ್ಕಾರ ಎಕ್ಸಾಮಿನ್ ಮಾಡುತ್ತಿದೆ. ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು, ನಿಮ್ಮೆಲ್ಲರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಖಂಡಿತವಾಗಿ ನಾವು ಒಂದು ಅಭಿಪ್ರಾಯಕ್ಕೆ ಬರಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದುದರಿಂದ ಇವತ್ತು ಅದರ ಬಗ್ಗೆ ನಾವು ಇಲ್ಲಿ ಅಶ್ಯೂರೆನ್ಸ್ ಕೊಡುವುದು ಕಷ್ಟ. ಅದರ ಪ್ರಕಾರ ನಮಗೆ 205 ಕೋಟಿ ರೂ. ಬೇಕಾಗುತ್ತದೆ. ಕಳೆದ ವರ್ಷದ್ದೂ ಒಪ್ಪಿ ಕೊಂಡಿದ್ದರೆ ಶಾರ್ಟ್ ಟರ್ಮ್ ಅಂಡ್ ಲಾಂಗ್ ಟರ್ಮ್ ಒಪ್ಪಿದ್ದರೆ ಸುಮಾರು 405 ಕೋಟಿ ರೂಪಾಯಿ ಬಜೆಟ್‌ನಲ್ಲಿ ನಾವು ಪುನಃ ಕೊಡಬೇಕಾಗಿತ್ತು. ಅದೇ ಪ್ರಕಾರ ಈ ಕೊಕನೆಟ್, ಅರೇಕಾ, ಪಿಗ್ರಿ, ಪೌಲ್ಟ್ರಿ, ಫಾರ್ಮಹೌಸ್, ಇವುಗಳಿಗೂ ನಾವು ಒಪ್ಪಿದರೆ ಅಂದಾಜು 40 ರಿಂದ 50 ಕೋಟಿ ರೂಪಾಯಿ ಇದಕ್ಕೂ ಕೊಡಬೇಕಾಗುತ್ತದೆ. ಆ ಪ್ರಸ್ತಾವನೆಯನ್ನು ಸಹ ನಾವು ಈಗಾಗಲೇ ಹಣಕಾಸಿನ ಇಲಾಖೆಗೆ ಕಳುಹಿಸಿದ್ದೇವೆ. ಅದು ಅವರ ಮುಂದೆ ಡಿಸ್‌ಕಷನ್ ಆಗಬೇಕಾಗಿದೆ. ನಂತರ ನಮ್ಮ ಮಾನ್ಯ ಉದಾಸಿಯವರು ಒಂದು ಜಿ. ಓ. ತೋರಿಸಿದರು. ಅದು ಬಡ್ಡಿ ದಂಡ ಬಡ್ಡಿ ಜಿ. ಒ. ಅಲ್ಲ. ಅದು ದಾಮ್ ದುಪ್ಪಟ್ ಸ್ಕೀಂ ಎಂದು ಇದೆ. ಅದು ಉಪಯೋಗವಾಗುವುದು ಲಾಂಗ್ ಅಂಡ್ ಮೀಡಿಯಂ ಟರ್ಮ್ ಲೋನ್‌ಗೆ ಮಾತ್ರ, ಶಾರ್ಟ್ ಟರ್ಮ್‌ಗೆ ಅಲ್ಲ. ಅದು ಏನಾಯಿತು ಎಂದರೆ, ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಗೆ ನಾನು ಇಲಾಖೆಯ ಜವಾಬ್ದಾರಿ ತೆಗೆದುಕೊಂಡ ಮೇಲೆ ಅವರ ಜೊತೆಗೆ ಒಂದು ಮೀಟಿಂಗ್ ಮಾಡಿದೆ. ಆಗ ಅವರು ದೇಶಪಾಂಡೆಯವರೇ ನಿಮ್ಮ ಸ್ಕೀಂ ಏನು ಇದೆ ಇದು ಸರಿಯಲ್ಲ ಎಂದರು. ನಾವು ಇದನ್ನು ಎಕ್ಸಾಮ್ ಮಾಡಿದಾಗ ನಮಗೂ ಗೊತ್ತು ಇದು 500 ರೈತರಿಗೂ ಸಹಾಯ ಆಗುತ್ತಿರಲಿಲ್ಲ. ಹಾಗಾಗಿ ನಾವು ಏನು ವಿಚಾರ ಮಾಡಿದೆವು ಎಂದರೆ, ಇದನ್ನು ಬೇರೆ ರೀತಿಯಲ್ಲಿ ಮಾಡಬೇಕೆಂದು ಹೇಳಿ ಯಾವ ರೈತರು ಅಸಲು ಅಷ್ಟೇ ಅಥವಾ ಅಸಲಿಗಿಂತ ಸ್ವಲ್ಪ ಹೆಚ್ಚು ಹಣ ಮರುಪಾವತಿ

ಮಾಡಿದಾಗ, ದಿನಾಂಕ : 31-03-2004 ರ ತನಕ ಅವನಿಗೆ ಬಾಕಿ ಉಳಿದ ಬಡ್ಡಿ ದಂಡದ ಬಡ್ಡಿ ಮನ್ನಾ ಮಾಡುವ ಕಾರ್ಯಕ್ರಮ ಮಾಡಿ ಆ ಸಾಲ ದಾಮ್ ದುಪ್ಪಟ್ ಸ್ಕೀಂನಲ್ಲಿ ಆ ಆಜ್ಞೆಯನ್ನು ಮಾಡಿದ್ದೇನೆ. ಬೆಳೆ ವಿಮೆಗೆ ಬೇರೆ ಕೊಡುತ್ತಿದ್ದೇವೆ. ಹೀಗಾಗಿ ಇದಕ್ಕೆ 49 ಕೋಟಿ ರೂಪಾಯಿ ಬಜೆಟ್‌ನಲ್ಲಿ ಇಟ್ಟಿದ್ದಾರೆ. ಅವರು ಈಗಾಗಲೇ 24 ಕೋಟಿ ರೂಪಾಯಿ ಕೊಟ್ಟಿದ್ದನ್ನು ನಾವು ಹಣ ರಿಲೀಸ್ ಮಾಡಿದ್ದೇವೆ. ಆದರೆ ಅದು ನಮ್ಮ ದೃಷ್ಟಿಯಿಂದ ಅದು 56-57 ಕೋಟಿ ರೂಪಾಯಿಗಳವರೆಗೆ ಹೋಗಬಹುದು ಎನ್ನುವ ಒಂದು ಅಂದಾಜು ಮಾಡಿದ್ದೇವೆ. ಆಗ ಇನ್ನೆರಡು ಕೋಟಿ ರೂ ಹೆಚ್ಚಿಗೆ ಕೊಡಬೇಕಾಗುತ್ತದೆ. ಆ ಬಗ್ಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಅಲ್ಲಿ ಕೂಡ ಇದೇ ಬಡ್ಡಿ ಸಮಸ್ಯೆ ಬಂದಿದೆ. ಏಕೆಂದರೆ, ದಿನಾಂಕ : 31-03-2004 ನಂತರ ಯಾರು ಬಡ್ಡಿ ಕೊಡಬೇಕು, ಪಿಎಲ್‌ಡಿ ಬ್ಯಾಂಕ್‌ನವರು ನೀವೇ ಬಡ್ಡಿ ಕೊಡಿ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದೇವೆ. ಆ ವಿಷಯ ಪ್ರಸ್ತಾಪಿಸಿ ಸ್ಪಷ್ಟವಾಗಿ ಹೇಳಿದ್ದೇವೆ. ಆ ಹಣಕ್ಕೆ ಲ್ಯಾಂಡ್ ಬ್ಯಾಂಕ್ ಜವಾಬ್ದಾರಿ ತೆಗೆದುಕೊಳ್ಳಬೇಕು ಅಥವಾ ಸರ್ಕಾರದಿಂದ ಕೊಡಬೇಕೆಂದು ನಾವು ನಮ್ಮ ಅಭಿಪ್ರಾಯವನ್ನು ಕೊಟ್ಟಿದ್ದೇವೆ. ಅದರ ಬಗ್ಗೆ ಸಹ ಒಂದು ನಿರ್ಣಯ ಆಗುತ್ತದೆ. ಹಾಗಾಗಿ ಯಾರಿಗೆ ಎಕ್ಸ್ ಟೆನ್‌ಷನ್ ಆಫ್ ಈ ಬೆನಿಫಿಟ್ ಕೊಡಬೇಕೆಂದಾಗಲೀ ದಿನಾಂಕ : 31-03-2005 ಒಳಗಾಗಿ ಯಾರು ಸಾಲ ಮರುಪಾವತಿ ಮಾಡಿದ್ದಾರೆ ಅವರ ಬಗ್ಗೆಯಾಗಲೀ, ಈ ಎಲ್ಲಾ ವಿಷಯಗಳ ಹಾಗೂ ತಾವು ಇವತ್ತೇನು ರೈಸ್ ಮಾಡಿದಿರಿ ಆ ಎಲ್ಲವನ್ನೂ ಸಂಗ್ರಹ ಮಾಡಿ ನಾವು ಒಂದು ಕಡೆ ಮಾಡಿ ಹಣಕಾಸಿನ ಇಲಾಖೆಗೆ ಕಳುಹಿಸಿದ್ದೇವೆ. ನಮಗೆ ವಿಶ್ವಾಸ ಇದೆ ಹಣಕಾಸಿನ ಇಲಾಖೆಯ ಮಾನ್ಯ ಉಪ ಮುಖ್ಯಮಂತ್ರಿಗಳ ಸಹಾಯದಿಂದ ಎಷ್ಟು ಸಾಧ್ಯ ಇದೆಯೋ ಅಷ್ಟು ಸಹಾಯವನ್ನು ರೈತರಿಗೆ ಮಾಡಬೇಕೆಂದು ಇದ್ದೇವೆ. ಅವರಿಗೆ ಸಹಾಯ ಮಾಡಿದ್ದೇವೆಂದು ಹೇಳಬಾರದು ಅದು ನಮ್ಮ ಕರ್ತವ್ಯ ಇದೆ. ಅದು ನಮ್ಮ ಜವಾಬ್ದಾರಿಯಾಗುತ್ತದೆ. ಸಹಾಯ ಮಾಡಿದ್ದೇವೆಂದು ಹೇಳಿದರೆ ಅದು ದೊಡ್ಡ ಪಾಪ ಆಗುತ್ತದೆ. ಸಹಾಯ ಎನ್ನುವ ಶಬ್ದವನ್ನೇ ನಾವು ಉಪಯೋಗಿಸಬಾರದು. ಅದು ನಮ್ಮ ಡ್ಯೂಟಿಯಾಗುತ್ತದೆ. ಕರ್ತವ್ಯವಾಗುತ್ತದೆ. ಹಾಗಾಗಿ ಅದರ ಬಗ್ಗೆ ತಾವು ಹೇಳಿದ ಹಾಗೆ ಸಹಾಯ ಮಾಡುವುದಕ್ಕೆ ಭಿನ್ನಾಭಿಪ್ರಾಯ ಯಾರದೂ ಇಲ್ಲ. ಯಾರ ವಿರೋಧವೂ ಇಲ್ಲ. ರಾಷ್ಟ್ರೀಕೃತ ಬ್ಯಾಂಕ್‌ಗಳ ಮೇಲೆ ಸ್ಟೇಟ್ ಗೌರ್ನಮೆಂಟ್ ಕಂಟ್ರೋಲ್ ಇರುವುದಿಲ್ಲ. ಹಾಗಾಗಿ ಇದಕ್ಕೆ ಬೇಕಾದರೆ. ಕೇಂದ್ರ ಸರ್ಕಾರದ ಜೊತೆ ಪರ್ಸ್ಯೂ ಮಾಡಿ ತಾವು ಹೇಳಿದ ಹಾಗೆ ಇದಕ್ಕೆ ನಿರ್ಣಯ ಮಾಡಿ ಅದಕ್ಕೆ ನಮ್ಮದೇನೂ ವಿರೋಧ ಇಲ್ಲ. ಅದರ ಬಗ್ಗೆ ಕೂಡ ಸರ್ಕಾರ ಚಿಂತನೆ ಮಾಡಬಹುದು. ಯಾವ ರೀತಿಯಲ್ಲಿ ಮಾಡಬೇಕೆಂದು ಚಿಂತನೆ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬಹುದು. ನಾವು ಈಗಾಗಲೇ

ಮಾತನಾಡಿದ್ದೇವೆ ಪುನಃ ಅವರ ಮೇಲೆ ಒತ್ತಡ ತಂದು ಆ ಕಾರ್ಯಕ್ರಮ ಮಾಡುವುದಕ್ಕೆ ಕೂಡ ಸರ್ಕಾರ ಸಿದ್ಧವಿದೆ ಅದರ ಬಗ್ಗೆ ಕೂಡ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಈಗ ಎರಡು ವಿಷಯಗಳನ್ನು ತಾವು ಕೇಳುತ್ತಿದ್ದೀರಿ. ಇದರಲ್ಲಿ ಮೊದಲನೆಯದು ಏನೆಂದರೆ, ಇವತ್ತಿಗೆ ಅಂದರೆ 30ನೇ ತಾರೀಖಿಗೆ ಅವಧಿ ಮುಗಿಯುತ್ತಿದೆ. ಈ ಅವಧಿಯಲ್ಲಿ ಎಕ್ಸ್‌ಟೆನ್ಷನ್ ಮಾಡಿ, ಏಕೆಂದರೆ, ಬರಗಾಲವಿರುವುದರಿಂದ ಬಹಳಷ್ಟು ಜನ ಕಷ್ಟದಲ್ಲಿದ್ದು ಸಾಲ ಹಣವನ್ನು ಮರುಪಾವತಿ ಮಾಡುವುದಕ್ಕೆ ಆಗಿಲ್ಲವೆಂದು ಮತ್ತು ನಾವು ಹೇಳಿದ ಹಾಗೆ 3 ಅಥವಾ 4 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ತಂದು ಮಾಡಿದ್ದಾರೆ. ಮತ್ತೆ ತಮ್ಮಗಳ ಎರಡನೇ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಮಾನ್ಯ ಮಾಧುಸ್ವಾಮಿಯವರಿಗೆ ಇದರ ಬಗ್ಗೆ ರಿಪ್ಲೈ ಕೊಟ್ಟಿದ್ದೇನೆ. ದಿನಾಂಕ: 01–04–2005 ರಿಂದ 30–06–2005 ರವರೆಗೆ ಅಂದರೆ ಮೂರು ತಿಂಗಳ ಅವಧಿಯವರೆಗೆ ಯಾರು ತನ್ನ ಅಸಲು ಕಟ್ಟುವುದಕ್ಕೆ ಹೋದಾಗ ಅವರಿಗೆ ಬಡ್ಡಿ ಹಣವನ್ನು ಕೇಳುತ್ತಿದ್ದಾರೆಂದು ಹೇಳಿದ್ದೀರಿ. ನಮ್ಮ ಸರ್ಕಾರದ ಆದೇಶ ಏಪ್ರಿಲ್27 ನೇ ತಾರೀಖಿನ ದಿವಸ ಆಗಿದೆ. ಇದು ಏನಾಗುತ್ತದೆ ಎನ್ನತಕ್ಕಂಥದ್ದು ತಮಗೆ ಗೊತ್ತಿದೆ. ಬಜೆಟ್ ಪಾಸ್ ಆದ ಮೇಲೆ ಮಾನ್ಯ ರಾಜ್ಯಪಾಲರ ಅಸೆಂಟ್ ಪಡೆದ ನಂತರ ಪ್ರೊಪೋಜಲ್ ಕಳುಹಿಸಿಕೊಡಬೇಕು. ಇದರಿಂದ ಸ್ವಲ್ಪ ಪ್ರೊಸೀಜರ್ ಡಿಲೇಯಾಗಿದೆ. There is nothing purposefully done ನಾವು ಕೂಡ ತಕ್ಷಣ ಕಳುಹಿಸಿಕೊಡುತ್ತೇವೆ. ಮತ್ತೆ ಅವರೂ ಕೂಡ ಅಟೆಂಡ್ ಮಾಡುತ್ತಾರೆ. ಆದರೂ ಸಹ ತಾವು ಹೇಳಿರುವಂಥದರಲ್ಲಿ ಅರ್ಥ ಇದೆ. ನಾವು ಕೊಡಗು ಮತ್ತು ಮೈಸೂರಿಗೆ ಹೋಗಿದ್ದಂಥ ಸಂದರ್ಭದಲ್ಲಿ ಈ ಸಮಸ್ಯೆ ನನಗೂ ಕೂಡ ಬಂತು. ಇದರ ಬಗ್ಗೆ ಹಣಕಾಸಿನ ಸಚಿವರ ಜೊತೆ ಚರ್ಚೆ ಮಾಡಿ ಸ್ಪಷ್ಟೀಕರಣವಾದ ರಿಪ್ಲೈ ಕೊಟ್ಟಿದ್ದೇನೆ. ದಿನಾಂಕ : 01–05–2005 ರಿಂದ ದಿನಾಂಕ : 30–06–2006 ರವರೆಗೆ ಅಂದರೆ ಇವತ್ತಿನವರೆಗೆ ರೈತರು ಕೇವಲ ಅಸಲು ಮಾತ್ರ ಮರು ಪಾವತಿ ಮಾಡಬೇಕು. ಈ ಮೂರು ತಿಂಗಳ ಬಡ್ಡಿ ಹಣ ಎಷ್ಟಿರುತ್ತದೆಯೋ ಅದನ್ನು ಸರ್ಕಾರವೇ ಕೊಡುತ್ತದೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿ ಘೋಷಣೆ ಮಾಡುತ್ತೇವೆ. ಇದಕ್ಕೆ ಮಾನ್ಯ ಹಣಕಾಸಿನ ಸಚಿವರೂ ಕೂಡ ಒಪ್ಪಿಕೊಂಡಿದ್ದಾರೆ. ಇದಕ್ಕೆ ಸುಮಾರು 50 ರಿಂದ 60 ಕೋಟಿ ರೂಪಾಯಿಗಳಷ್ಟು ರೈತರಿಗೆ ಉಳಿತಾಯವಾಗುತ್ತದೆಂದು ನಾವು ಅಂದಾಜು ಮಾಡಿದ್ದೇವೆ, ಇನ್ನು ಎಕ್ಸ್‌ಟೆನ್ಷನ್ ಆಫ್ ಟೈಂ ಬಗ್ಗೆ ಹೇಳುವುದಾದರೆ ಮಾನ್ಯ ಶ್ರೀರಾಮರೆಡ್ಡಿಯವರು ಜನವರಿ ತಿಂಗಳವರೆಗೆ ಅವಧಿಯನ್ನು ವಿಸ್ತರಣೆ ಮಾಡಿ ಎಂದು ಹೇಳಿದ್ದಾರೆ. ಮತ್ತು ಇನ್ನೂ ಕೆಲವು ಜನ ಸ್ನೇಹಿತರು ಮಾರ್ಚ್ ತಿಂಗಳವರೆಗೆ ಅವಧಿ ವಿಸ್ತರಣೆ ಮಾಡಿ ಎಂದು ಹೇಳಿರುತ್ತಾರೆ. ಜನವರಿ ಅಥವಾ ಮಾರ್ಚ್ ಅಥವಾ ಇನ್ನೊಂದು ಆಗಬೇಕು ಎನ್ನತಕ್ಕಂಥದರ

ಬಗ್ಗೆ ನೇರವಾಗಿ ಇಷ್ಟೇ ಸಮಯವೆಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಏಕೆಂದರೆ, ರಿಕವರಿ ಎಷ್ಟಾಗುತ್ತದೆ ಎನ್ನತಕ್ಕಂಥದ್ದು ಸ್ಪಷ್ಟವಾಗಿ ಗೊತ್ತಿಲ್ಲ. ನನಗೆ ಬಂದ ಮಾಹಿತಿ ಪ್ರಕಾರ ದಿನಾಂಕ : 24–06–2005ರವರೆಗೆ ಶಾರ್ಟ್ ಟರ್ಮ್ ಲೋನ್‌ನಲ್ಲಿ ಸುಮಾರು 500 ಕೋಟಿ ರೂಪಾಯಿ ಮತ್ತು ಲಾಂಗ್ ಟರ್ಮ್ ಲೋನ್‌ನಲ್ಲಿ 200 ಕೋಟಿ ರೂಪಾಯಿ ಕಲೆಕ್ಟ್ ಆಗಿದೆ ಎಂದು ತಿಳಿದು ಬಂದಿದೆ ಆದರೆ, ಟೋಟಲ್ ಆಗಿ ಇಷ್ಟೇ ಹಣ ಕಲೆಕ್ಟ್ ಆಗಿದೆ ಎಂಬ ಮಾಹಿತಿ ನನ್ನ ಹತ್ತಿರ ಇಲ್ಲ, ಆದರೆ, ಕೆಲವು ಕಡೆ ವಸೂಲಾತಿ ಚೆನ್ನಾಗಿ ಆಗಿದೆ. ಆದರೆ, ಇದು ಇನ್ನೂ ಚೆನ್ನಾಗಿ ಆಗಬೇಕು. ಇದರ ಬಗ್ಗೆ ನಾನು ಈಗಾಗಲೇ ಹಣಕಾಸಿನ ಸಚಿವರ ಜೊತೆ ಮಾತನಾಡಿದ್ದೇನೆ. ಇವತ್ತು ಮುಂಜಾನೆಯೇ ಅವಧಿ ವಿಸ್ತರಣೆಯಾಗಿರುವ ಬಗ್ಗೆ ಹೇಳಬೇಕಾಗಿತ್ತು. ಆದರೆ, ಈಗ ಸದನ ನಡೆಯುತ್ತಿರುವುದರಿಂದ ಸದನದಲ್ಲಿ ಬಿಟ್ಟು ಹೊರಗಡೆ ಹೋಗಿ ಹೇಳುವುದು ಸರಿಯಿಲ್ಲ. ಮತ್ತೆ ನಿಮ್ಮ ಕೆಂಗಣ್ಣಿಗೆ ನಾವು ಗುರಿಯಾಗುತ್ತಿದ್ದೇವು. ಆದ್ದರಿಂದ ಇವತ್ತು ಸಂಜೆ 6 ಗಂಟೆಗೆ ಮತ್ತೆ ಈ ಸದನದಲ್ಲಿ ಮೊದಲು ಪ್ರಕಟಣೆ ಮಾಡಬೇಕೆಂದು ನಾವು ಮತ್ತು ಮಾನ್ಯ ಹಣಕಾಸಿನ ಸಚಿವರು ನಿರ್ಣಯ ಮಾಡಿದ್ದೇವು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಜೊತೆ ಕೂಡ ಮಾತನಾಡಿದ್ದೇವೆ. ಈಗ ನಾವು ಮಾಡಿರತಕ್ಕಂಥ ನಿರ್ಣಯ ಏನೆಂದರೆ ಇವತ್ತಿನ ದಿವಸ ಮತ್ತೆ ಇನ್ನು ಒಂದು ತಿಂಗಳವರೆಗೆ ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಅಂದರೆ, ದಿನಾಂಕ : 01–07–2005 ರಿಂದ 31–07–2005 ರವರೆಗೆ, ಜುಲೈ ತಿಂಗಳ ಅಂತ್ಯದವರೆಗೆ ಅವಧಿ ವಿಸ್ತರಣೆ ಮಾಡಲಾಗಿದೆ. ಇದರ ಲಾಭವನ್ನು ರೈತರು ಪಡೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಒಂದು ತಿಂಗಳ ಅವಧಿ ಸಾಕಾಗುವುದಿಲ್ಲ. ಮಾರ್ಚ್ ತಿಂಗಳವರೆಗೆ ಈ ಅವಧಿಯನ್ನು ವಿಸ್ತರಣೆ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಸಚಿವರಲ್ಲಿ ನಾನು ಕೇಳುವುದೇನೆಂದರೆ, ಈ ಕಡೆ ಮತ್ತು ಆ ಕಡೆ ಕುಳಿತುಕೊಂಡಿರುವವರೆಲ್ಲರೂ ಕೂಡ ರೈತರ ಮಕ್ಕಳೇ ಆಗಿದ್ದೇವೆ. ಮತ್ತೆ ಅವರ ಪ್ರತಿನಿಧಿಯಾಗಿ ನಾವು ಇಲ್ಲಿಗೆ ಬಂದಿದ್ದೇವೆ. ಇವತ್ತಿನ ದಿವಸ ಕೃಷಿ ಚಟುವಟಿಕೆಗಳಿಗೆ ಮತ್ತು ಗೊಬ್ಬರ, ಬಿತ್ತನೆ ಬೀಜಗಳಿಗೆ ದುಡ್ಡು ಇಲ್ಲದೇ. ಇರತಕ್ಕಂಥ ಸಂದರ್ಭ ರೈತರಿಗೆ ಇದೆ. ಯಾರೋ ಶಕ್ತಿ ಇದ್ದಂಥವರು ಪ್ರಾಮಾಣಿಕವಾಗಿ ಕೊಟ್ಟಿರಬಹುದು. ಆದರೆ, ಸಾಲದ ಹಣ ಕಟ್ಟುವುದಕ್ಕೆ ಆಗದೇ ಇರತಕ್ಕಂಥ ರೈತರನ್ನು ನೇಣು ಹಾಕಬೇಕಷ್ಟೆ. ಇಂಥ ಪರಿಸ್ಥಿತಿಯಲ್ಲಿ ಇರತಕ್ಕಂಥ ರೈತರಿಗೆ ಈ ವರ್ಷ ಸಕಾಲದಲ್ಲಿ ಮಳೆ ಆದರೆ ಮಾತ್ರ

ಬೆಳೆ ಕೈಗೆ ಸಿಕ್ಕಿದರೆ ಮಾತ್ರ ಸಾಲದ ಹಣವನ್ನು ವಾಪಸ್ಸು ಕೊಡಬಹುದಷ್ಟೆ. ಆದ್ದರಿಂದ ಈ ಕಾರಣಕ್ಕೋಸ್ಕರ 2006 ನೇ ಇಸವಿ ಮಾರ್ಚ್ ಕೊನೆಯವರೆಗೆ ಈ ಅವಧಿಯನ್ನು ವಿಸ್ತರಣೆ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ. ತಾವು ರೈತನ ಮಗನಾಗಿ ಇದರ ಬಗ್ಗೆ ಹೇಳಿ. ಸರ್ಕಾರದ ಪರವಾಗಿ ಹೇಳುವುದಕ್ಕೆ ಹೋಗಬೇಡಿ. ಇಂಥ ಸಮಯದಲ್ಲಿ ಸಾಲದ ಹಣವನ್ನು ಮರುಪಾವತಿ ಮಾಡುವುದಕ್ಕೆ ಆತ ಎಲ್ಲಿಂದ ಹಣ ತರಬೇಕು? ಒಂದು ತಿಂಗಳು ಏಕೆ ವಿಸ್ತರಣೆ ಮಾಡುತ್ತೀರಿ? ಇದರಿಂದ ಏನು ಉಪಯೋಗ? ಇವತ್ತಿನ ದಿವಸ ನಮ್ಮ ಕ್ಷೇತ್ರಗಳಿಗೆ ಹೋಗುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಒಂದು ತಿಂಗಳು ಸಮಯವನ್ನು ಏಕೆ ವಿಸ್ತರಣೆ ಮಾಡಿದ್ದೀರಿ? ನಾವು ಎಲ್ಲಿಂದ ಹಣ ತರಬೇಕೆಂದು ಮಾನ್ಯ ದೇಶಪಾಂಡೆಯವರೇ ಮಾನ್ಯ ಯಡಿಯೂರಪ್ಪನವರೇ ಎಂದು ಕೇಳಿದಾಗ ಇದಕ್ಕೆ ಉತ್ತರ ಏನು ಕೊಡುತ್ತೀರಾ? ಅವರು ಎಲ್ಲಿಂದ ಹಣ ತರಬೇಕು ತಾವೇ ಹೇಳಿ? ಆದ್ದರಿಂದ ನಾನು ಈಗಾಗಲೇ ಹೇಳಿದ ಹಾಗೆ ತಾವು ಕನ್ಸೇಷನ್ ಕೊಡುವ ಅಗತ್ಯತೆ ಇಲ್ಲ. ನೀವು ಈಗ ತಜ್ಞರ ಸಮಿತಿ ರಚನೆ ಮಾಡಿ ರೈತರ ಸ್ಥಿತಿಯನ್ನು ನೋಡಿಕೊಂಡ ಆತ ಹಣ ಕೊಡುವುದಕ್ಕೆ ಶಕ್ತಿ ಇದ್ದು ಆತ ಹಣ ಕೊಡದಿದ್ದರೆ ನೀವು ಹೇಳಿದ ಹಾಗೆ ನಾವು ಕೇಳುವುದಕ್ಕೆ ರೆಡಿ ಇದ್ದೇವೆ. ಎರಡನೆಯದಾಗಿ, ದಿನಾಂಕ : 01–04–2004 ರಿಂದ 31–03–2005 ಎಂದು ಮಾನ್ಯ ದೇಶಪಾಂಡೆಯವರು ಸ್ಪಷ್ಟವಾಗಿ ಹೇಳುತ್ತಿಲ್ಲ. ದಿನಾಂಕ: 01–04–2004 ರಿಂದ 31–03–2005 ರವರೆಗೆ ಸಹಕಾರ ಸಂಘಗಳ ಮೂಲಕ ಪಡೆದುಕೊಂಡಿರತಕ್ಕಂಥ ಸಾಲದ ಮೇಲಿನ ಬಡ್ಡಿ ಹಣವನ್ನು ಮನ್ನಾ ಮಾಡುತ್ತೇವೆಂದು ಎಲ್ಲಿಯೂ ಕೂಡ ನೀವು ಹೇಳಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ :– ತಾವು ಏನು ಪ್ರಸ್ತಾಪ ಮಾಡಿದ್ದೀರೆಂದರೆ, ದಿನಾಂಕ : 01–04–2004 ರಂದು 31–03–2005ರವರೆಗೆ ರೈತರು ನಮ್ಮನ್ನು ಮತ್ತು ನಿಮ್ಮನ್ನು ನಂಬಿ ಸಾಲ ಮರು ಪಾವತಿ ಮಾಡಿದ್ದಾರೆ. ಹಾಗಾಗಿ ಅವರಿಂದ ಕೂಡ ಪ್ರಿನ್ಸಿಪಲ್ ಹಣ ತೆಗೆದುಕೊಂಡು ಬಡ್ಡಿ ಮತ್ತು ದಂಡದ ಬಡ್ಡಿ ವಾಪಸ್ಸು ಕೊಡುವುದರ ಬಗ್ಗೆ ತಾವು ಹೇಳಿರತಕ್ಕಂಥದ್ದು ಸರಿಯಲ್ಲವೆ?

ಶ್ರೀ ಬಿ.ಎಸ್.ಯಡಿಯೂರಪ್ಪ :– ಹೌದು.

ಶ್ರೀ ಆರ್.ವಿ.ದೇಶಪಾಂಡೆ :– ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಸ್ನೇಹಿತರ ಸಲಹೆಗಳನ್ನೊಳಗೊಂಡಂಥ ಒಂದು ಪ್ರಸ್ತಾವನೆಯನ್ನು ಹಣಕಾಸಿನ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನೆನ್ನೆ ದಿವಸ ಒಂದು ಸಭೆ ಆಗಬೇಕಾಗಿತ್ತು. ಮಾನ್ಯ ಹಣಕಾಸಿನ

ಸಚಿವರು ಮತ್ತು ನಾವು ಕುಳಿತುಕೊಂಡು ಇದರ ಬಗ್ಗೆ ನಿರ್ಣಯ ಮಾಡುತ್ತೇವೆಂದು ಹೇಳುತ್ತೇನೆ. ಮತ್ತೊಂದು ವಿಷಯವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುವುದೇನೆಂದರೆ......

ಶ್ರೀ ವಾಟಾಳ್ ನಾಗರಾಜ್ :– ಮಾರ್ಚ್ ತಿಂಗಳವರೆಗೆ ಅವಧಿ ವಿಸ್ತರಣೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡಿ.

ಶ್ರೀ ಆರ್. ವಿ. ದೇಶಪಾಂಡೆ :– ಬಹಳ ಜನ ರೈತರ ಲ್ಯಾಂಡನ್ನು ಪಿ.ಎಲ್.ಡಿ. ಬ್ಯಾಂಕ್‌ನವರು ಖರೀದಿ ಮಾಡಿದ್ದಾರೆ. ಆದರೆ, ಈ ಲ್ಯಾಂಡ್‌ನ ಹಣವನ್ನು ವಾಪಸ್ಸು ಕೊಡುವುದರ ಬಗ್ಗೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :– ಕೇವಲ ಪ್ರೊಪೋಸಲ್ ಕಳುಹಿಸಿದರೆ ಏನಾಗುತ್ತದೆ? ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಷ್ಟೆ.

ಶ್ರೀ ಸಿದ್ದು ಸವದಿ :– ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಯಡಿಯೂರಪ್ಪನವರೆ, ಅವರು ಮಾರ್ಚ್ ತಿಂಗಳ ಕೊನೆಯವರೆಗೆ ಅವಧಿ ವಿಸ್ತರಣೆ ಮಾಡದಿದ್ದರೆ, ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ :– ಸಹಕಾರ ಸಚಿವರು ಒಂದು ಪ್ರೊಪೋಸಲ್‌ನ್ನು ಕಳುಹಿಸಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದನ್ನು ನಾವು ಇಲ್ಲವೆಂದು ಹೇಳುವುದಿಲ್ಲ. ಇದರ ಬಗ್ಗೆ ನಾವು ಸುದೀರ್ಘವಾಗಿ ಚರ್ಚೆ ಮಾಡಿ ಇದಕ್ಕೊಂದು ಪರಿಹಾರ ಸಿಗಬೇಕು ಮತ್ತು ಇದಕ್ಕೆ ಮಾನ್ಯ ಹಣಕಾಸಿನ ಸಚಿವರೂ ಕೂಡ ಒಪ್ಪಿಗೆ ಕೊಡಬೇಕು ಎನ್ನತಕ್ಕಂಥದ್ದು ನಮ್ಮ ಉದ್ದೇಶ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್ :– ನೀವು ಮಾನ್ಯ ಹಣಕಾಸಿನ ಸಚಿವರಿಗೆ ಕೊಟ್ಟಿದ್ದೀರಿ. ಮತ್ತೆ ನೀವೇ ಸ್ವತಃ ಅವರ ಹತ್ತಿರ ಹೋಗಿದ್ದೀರಿ. ಅವರು ಇಲ್ಲವೆಂದು ಹೇಳಿದ್ದಾರೆ. ಆದರೆ ಇಲ್ಲಿ ಪ್ರೊಪೋಸಲ್ ಕಳುಹಿಸಿಕೊಟ್ಟಿದ್ದೇವೆಂದು ಹೇಳುತ್ತಾ ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಕೇವಲ 30 ದಿವಸದವರೆಗೆ ಅವಧಿ ವಿಸ್ತರಣೆ ಮಾಡುವುದಕ್ಕೆ ಆಗುವುದಿಲ್ಲ. ಮುಂದಿನ ಮಾರ್ಚ್ ತಿಂಗಳವರೆಗೆ ಸಮಯವನ್ನು ತಾವು ಕೊಡಲೇಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ದೇಶಪಾಂಡೆಯವರೇ, ನಾವು ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಹೆಚ್ಚಿನ ಸಮಯವನ್ನು ನಾವೇಕೆ ಕೇಳುತ್ತಿದ್ದೇವೆಂದರೆ, ವ್ಯವಸಾಯಕ್ಕೆ ರೀ ಇನ್‌ವೆಸ್ಟ್‌ಮೆಂಟ್ ಮಾಡತಕ್ಕಂಥ ಸಮಯ ಇದಾಗಿದೆ. ಇಂಥ ಸಂದರ್ಭದಲ್ಲಿ ಹಣ ಕೊಡಬೇಕೆಂದರೆ ಮತ್ತೆ ಆತ ಸಾಲ ಮಾಡಿಯೇ ಕೊಡಬೇಕಾಗುತ್ತದೆ. ಆದ್ದರಿಂದ ಒಂದು ತಿಂಗಳ ಅವಧಿ ವಿಸ್ತರಣೆ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಕನಿಷ್ಟ ಜನವರಿ ತಿಂಗಳವರೆಗೆ ಅವಧಿ ವಿಸ್ತರಣೆ ಮಾಡಿದರೆ ಮಾತ್ರ ರೈತರಿಗೆ ಪ್ರಯೋಜನವಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ :– ಪ್ರೊಪೋಸಲ್ ಕಳುಹಿಸಿಕೊಟ್ಟಿದ್ದೇವೆಂದು ಅಧಿಕಾರಿಗಳು ಹೇಳತಕ್ಕಂಥ ಮಾತು. ಆದರೆ, ಸರ್ಕಾರದ ಪರವಾಗಿ ಒಬ್ಬ ಮಂತ್ರಿ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಹಣಕಾಸಿನ ಸಚಿವರ ಜೊತೆಯಲ್ಲಿ ಮಾತನಾಡಿ ಕ್ಲಿಯರ್ ಕಟ್ ಆಗಿ ಉತ್ತರ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮುಂದಿನ ಮಾರ್ಚ್ ತಿಂಗಳ ಅಂತ್ಯದವರೆಗೆ ಅವಧಿ ವಿಸ್ತರಣೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಹಣಕಾಸಿನ ಸಚಿವರು ಉತ್ತರ ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಒಂದು ತಿಂಗಳ ಎಕ್ಸ್‌ಟೆಂಡ್ ಮಾಡಿದರೆ ಏನೂ ಪ್ರಯೋಜನ ಆಗುವುದಿಲ್ಲ. ಕನಿಷ್ಟ ಜನವರಿ ತಿಂಗಳವರೆಗಾದರೂ ಸಮಯ ವಿಸ್ತರಣೆ ಮಾಡಬೇಕು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :– ಮಾನ್ಯ ಉಪಾಧ್ಯಕ್ಷರೆ, ಅವರು ಎತ್ತಿರತಕ್ಕಂಥ ಎಲ್ಲಾ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಸಚಿವರು ಬಹಳ ದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ. ಮಾರ್ಚ್ ತಿಂಗಳವರೆಗೆ ವಿಸ್ತರಣೆ ಮಾಡಿದರೆ ಸಾಲ ಕಟ್ಟುತ್ತಾರೆ. ಒಂದು ತಿಂಗಳ ಅವಧಿವರೆಗೆ ವಿಸ್ತರಣೆ ಮಾಡಿದರೆ ಸಾಲ ಕಟ್ಟುವುದಿಲ್ಲ ಎನ್ನತಕ್ಕಂಥದ್ದು ಸರಿಯಲ್ಲ. ಕಳೆದ ಮೂರು ತಿಂಗಳಿಂದ ಸುಮಾರು 40 ಪರ್ಸೆಂಟ್‌ನಷ್ಟು ಸಾಲ ವಸೂಲಾತಿಯಾಗಿದೆ. ರೈತರ ಹತ್ತಿರ ದುಡ್ಡಿದೆ, ಅವರು ಸೇವಿಂಗ್ಸ್ ಮಾಡಿ ಇಟ್ಟುಕೊಂಡಿದ್ದಂಥ ಹಣ ಕಟ್ಟಿದ್ದಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟು ಸಾಲದ ಮೊತ್ತದಲ್ಲಿ ಈಗಾಗಲೇ 40 ಪರ್ಸೆಂಟ್‌ನಷ್ಟು ಅಸಲು ಕೊಟ್ಟಿದ್ದಾರೆ. ಇವತ್ತು ಕಡೆಯ ದಿನಾಂಕವಾದರೂ ಕೂಡ ಇವತ್ತಿನವರೆಗೂ ಕಟ್ಟುತ್ತಾರೆ. ಇವತ್ತು ವಿಧಾನ ಸಭೆ ಪ್ರಾರಂಭ ಆಗಿದೆ. ಮತ್ತೆ ಒಂದು ತಿಂಗಳವರೆಗೆ ಅವಧಿ ವಿಸ್ತರಣೆ ಮಾಡಬೇಕೆಂದು ನಾವು ತೀರ್ಮಾನ ಮಾಡಿಕೊಂಡಿದ್ದೇವೆ.

ಇವತ್ತು 6 ಗಂಟೆಯ ಮೇಲೆ ಪ್ರಕಟಣೆ ಮಾಡಬೇಕೆಂದು ಇದ್ದೇವೆ. ಏಕೆಂದರೆ, ಅವಧಿ ವಿಸ್ತರಣೆಯಾಗಿದೆ ಎಂದು ಬೆಳಿಗ್ಗೆಯೇ ಹೇಳಿದ್ದರೆ, ಕಡೆಯವರೆಗೂ ಕೂಡ ಕಟ್ಟದೇ ಹೋಗುತ್ತಾರೆ. ಮನುಷ್ಯರ ಸ್ವಭಾವಗಳು ಹೇಗಿರುತ್ತವೆಂದರೆ, ಸಮಯ ಕೊಟ್ಟಿದ್ದಾರೆಂದು ತಿಳಿದರೆ ನಾಳೆ, ನಾಡಿದ್ದು ಕಟ್ಟೋಣ ಎನ್ನತಕ್ಕಂಥ ಪ್ರವೃತ್ತಿ ಬರುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಒಂದು ವಿಚಾರವನ್ನು ತಿಳಿದುಕೊಳ್ಳಬೇಕು ನಾವು ಕಳೆದ ವರ್ಷಗಳಿಂದ ಕಡಿಮೆ ಬಡ್ಡಿ ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿರುವವರಿಗೆ ಶೇಕಡ 6 ರ ಬಡ್ಡಿದರದಲ್ಲಿ ಸಾಲ ಸಿಗುವಂಥ ವ್ಯವಸ್ಥೆ ಮಾಡಿದ್ದೇವೆ. ಯಾರು ಅಸಲು ಕಟ್ಟಿ ಸಾಲದಿಂದ ವಿಮುಕ್ತ ಆಗಿರುತ್ತಾರೆಯೋ ಅವರಿಗೂ ಕೂಡ ಮತ್ತೆ 6 ಪರ್ಸೆಂಟ್ ದರದಲ್ಲಿ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆದಷ್ಟು ಜಾಗ್ರತೆ ಸಾಲ ಕಟ್ಟಿದ್ದರೆ ಮತ್ತೆ 6 ಪರ್ಸೆಂಟ್ ಕಡಿಮೆ ಬಡ್ಡಿ ದರದಲ್ಲಿ ಸಾಲಸಿಗುತ್ತದೆ. ಇಲ್ಲದಿದ್ದರೆ ಅವರು ಸಾಲಗಾರರಾಗಿಯೇ ಮುಂದುವರಿದುಕೊಂಡು ಹೋಗುತ್ತಾರೆ. ಮತ್ತೆ ಹೊಸ ಸಾಲದ ಸೌಲಭ್ಯ ಕೂಡ ಸಿಗುವುದಿಲ್ಲ. ಇದನ್ನೂ ಕೂಡ ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಎರಡು–ಮೂರು ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ಬ್ಯಾಂಕ್‌ಗಳ ಮೂಲಕ ಸಾಲ ತೆಗೆದುಕೊಂಡಿರತಕ್ಕಂಥದ್ದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಆದರೆ, ಇಂಥ ಬ್ಯಾಂಕ್‌ಗಳಲ್ಲೂ ಕೂಡ ಹೋಗಬೇಕು ಎನ್ನತಕ್ಕಂಥವರು ನಾವು. ವಾಣಿಜ್ಯ ಬ್ಯಾಂಕ್‌ಗಳು ರೈತರಿಗೆ 6 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ಕೊಡಬೇಕು ಎನ್ನತಕ್ಕಂಥವರು ನಾವು. ನಾವು ಎರಡು–ಮೂರು ಸಾರಿ ಕೇಂದ್ರ ಹಣಕಾಸಿನ ಸಚಿವರ ಜೊತೆ ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದೇವೆ. ಇವತ್ತಿನ ದಿವಸ ಬ್ಯಾಂಕ್‌ಗಳಲ್ಲಿ ಡಿಪಾಸಿಟ್ ಇಟ್ಟರೆ 5 ಪರ್ಸೆಂಟ್ ಬಡ್ಡಿ ಕೊಡುತ್ತಾರೆ ಮತ್ತು ಬೇರೆ ಬೇರೆ ಕಾರಣಗಳಿಗಾಗಿ ಅಂದರೆ ಮನೆ ಕಟ್ಟುವವರಿಗೆ ವಾಣಿಜ್ಯ ಬ್ಯಾಂಕ್‌ಗಳಲ್ಲಿ 6 ರಿಂದ 6.5 ಪರ್ಸೆಂಟ್ ಬಡ್ಡಿದರದಲ್ಲಿ ಸಾಲ ಕೊಡುತ್ತಾರೆ. ಮತ್ತೆ ವಾಹನಗಳನ್ನು ಖರೀದಿ ಮಾಡುವುದಕ್ಕೂ ಕೂಡ ಲೋನ್ ಕೊಡುತ್ತಾರೆ. ಇವರಿಗೆಲ್ಲಾ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವಾಗ ರೈತರಿಗೆ 6 ಪರ್ಸೆಂಟ್ ಅಥವಾ 6.5 ಪರ್ಸೆಂಟ್ ಬಡ್ಡಿದರದಲ್ಲಿ ಸಾಲ ಏಕೆ ಕೊಡಬಾರದೆಂದು ನಾನು ಅವರಲ್ಲಿ ಕೇಳಿದ್ದೇನೆ. ರೈತರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಈ ರೀತಿಯಾಗಿ ಇರತಕ್ಕಂಥ ತಾರತಮ್ಯಗಳೆಲ್ಲಾ ಹೋಗಬೇಕೆಂದು ನಾವು ಅಲ್ಲಿ ಪ್ರಸ್ತಾಪ ಮಾಡಿದ್ದೇವೆ. ಕಳೆದ ಎರಡು –ಮೂರು ವರ್ಷಗಳಿಂದ ರೈತರಿಗೆ ನಾವು ಕೆಲವೊಂದು ಬೆನಿಫಿಟ್‌ಗಳನ್ನು ಮಾಡಿ ಕೊಟ್ಟಿದ್ದೇವೆ. ಯಾರು ಈಗಾಗಲೇ ಅಸಲು ಮತ್ತು ಸರಳ ಬಡ್ಡಿ ಕೊಟ್ಟ ಮೇಲೂ ಕೂಡ ಅಸಲು ಉಳಿದು ಕೊಂಡಿದ್ದರೆ ಅವೆಲ್ಲವನ್ನೂ ಪೂರ್ಣವಾಗಿ ಮನ್ನಾ ಮಾಡಿ ಎಂದು ಒಂದು ಆದೇಶ ಕೂಡ ಮಾಡಿದ್ದೇವೆ. ಇದಕ್ಕೋಸ್ಕರ ಸುಮಾರು 49 ರಿಂದ 50 ಕೋಟಿ

ರೂಪಾಯಿಗಳಷ್ಟು ಕೊಟ್ಟಿದ್ದೇವೆ. ಇದು ಪ್ರತ್ಯೇಕವಾದ ಬೆನಿಫಿಟ್ ಆಗಿದೆ. ಇದು ಕೇವಲ ಲಾಂಗ್ ಟರ್ಮ್ ಮತ್ತು ಮೀಡಿಯಂ ಟರ್ಮ್ ಲೋನ್‌ಗೆ ಮಾತ್ರ ಸಂಬಂಧಪಟ್ಟಿದೆ. ಆದರೆ, ಇದು ಕ್ರಾಪ್ ಲೋನ್‌ಗೆ ಸಂಬಂಧಪಟ್ಟಿಲ್ಲ. ಕ್ರಾಪ್ ಲೋನ್‌ಗಳು ಆಗಾಗ ಬರುತ್ತದೆ.ಅದನ್ನು ಅವರು ತೆಗೆದುಕೊಳ್ಳುತ್ತಾರೆ. ಅದನ್ನು ಅವರು ರಿನ್ಯೂವಲ್ ಮಾಡಿಕೊಂಡು ಹೋಗುತ್ತಿರುತ್ತಾರೆ. ಅವರು ಕೊಡುತ್ತಲೇ ಹೋಗುತ್ತಿರುತ್ತಾರೆ. ಇರಲಿ, ಅದನ್ನು ನೀವು ಹೇಳಿದಂತೆ ಗಮನದಲ್ಲಿಟ್ಟುಕೊಳ್ಳೋಣ. ಇದೊಂದು ಬೆನಿಫಿಟ್‌ನ್ನು ಕೊಟ್ಟಿರುತ್ತೇವೆ. ಎರಡನೇಯದಾಗಿ ಕಳೆದ ವರ್ಷ ಹೊಸ ಸಾಲವನ್ನು ಕೊಡುವಾಗ ಅವರಿಗೆಲ್ಲಾ 6 ಪರ್ಸೆಂಟ್ ಬಡ್ಡಿ ದರದಲ್ಲಿಕೊಡಬೇಕೆಂದು ಹೇಳಿದ್ದೀರಿ. ಅದಕ್ಕೂ ಕೂಡ 60 ಕೋಟಿ ರೂಪಾಯಿಗಳ ದುಡ್ಡನ್ನು ಇಟ್ಟಿದ್ದೇವೆ. ಈ ವರ್ಷ 80 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಅವರಿಗೆ ಇನ್ನು ಹೆಚ್ಚಿನ ಸಾಲ ಸಿಕ್ಕರೆ ಅದಕ್ಕಿಂತ ಹೆಚ್ಚಿಗೆ ಸಾಲ ಕೊಡುತ್ತೇವೆಂದೂ ಕೂಡ ಹೇಳಿರುತ್ತೇವೆ. ಮೂರನೇಯದಾಗಿ ಯಾರು ಸುಸ್ತಿದಾರರಾಗಿದ್ದಾರೆ. ದಿನಾಂಕ : 31–03--2004 ರವರೆಗೆ ಅವರು ತೆಗೆದುಕೊಂಡಿರತಕ್ಕಂಥ ಅಲ್ಪಾವಧಿ ಸಾಲ, ಮಧ್ಯಮಾವದಿ ಸಾಲ, ದೀರ್ಘಾವಧಿ ಸಾಲ ಬಡ್ಡಿ ಮತ್ತು ಅದರ ಸುಸ್ತಿ ಬಡ್ಡಿ ಎಷ್ಟಾಗಿರುತ್ತದೆ. ಅದನ್ನೆಲ್ಲಾ ಮನ್ನಾ ಮಾಡಿ ಬಿಡುತ್ತೇವೆ. ಅದಕ್ಕಾಗಿ ರೈತರಿಗೆ ಜೂನ್ ತಿಂಗಳೊಳಗಾಗಿ ಅಸಲನ್ನು ಕಟ್ಟಿಬಿಡಿ ಎಂದು ಹೇಳಿರುತ್ತೇವೆ. ಈಗಾಗಲೇ ನಾನು ಹೇಳಿದಂತೆ, ಶೇಕಡಾ 40 ರಷ್ಟು ರೈತರು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಕಟ್ಟಿದ್ದಾರೆ. ನಿಮಗೆ ಅಂಕಿ ಅಂಶಗಳನ್ನು ಕೊಡುತ್ತೇವೆ. 700 ಕೋಟಿ ರೂಪಾಯಿಗಳನ್ನು ರೈತರು ಈಗ ಕೊಟ್ಟಿದ್ದಾರೆ. 40 ಪರ್ಸೆಂಟ್ ಅಲ್ಲವೆಂದರೆ, ಮಾನ್ಯ ಶ್ರೀರಾಮರೆಡ್ಡಿಯವರೇ, ನಿಮ್ಮ ಪ್ರಕಾರ ಎಷ್ಟು ಪರ್ಸೆಂಟ್ ಆಗುತ್ತದೆ ? ನಿಮ್ಮ ಪ್ರಕಾರ ಔಟ್‌ಸ್ಟ್ಯಾಂಡಿಂಗ್ ಲೋನ್ ಎಷ್ಟು ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– 30 ಪರ್ಸೆಂಟಾಗುತ್ತದೆ.

ಶ್ರೀ ಸಿದ್ಧರಾಮಯ್ಯ :– ಮಾನ್ಯ ದೇಶಪಾಂಡೆಯವರು ಎಷ್ಟು ಸಾಲ ಇದೆ, ಎಷ್ಟು ಜನರಿಗೆ ಸಾಲ ಸಿಗುತ್ತದೆಂದು ಅವರು ಹೇಳುವುದನ್ನು ಕೂಡ ನಾನು ಕೇಳಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– 17000 ಕೋಟಿ ರೂಪಾಯಿಗಳಲ್ಲಿ ಬಂದಿರತಕ್ಕಂಥದ್ದು ಎಷ್ಟು? ಇದರಲ್ಲಿ 400 ಕೋಟಿ ರೂಪಾಯಿ ಬಂದಿದೆ. ಹಾಗಾದರೆ 40 ಪರ್ಸೆಂಟ್ ಹೇಗಾಗುತ್ತದೆ ?

ಶ್ರೀ ಬಿ.ಎಸ್.ಯಡಿಯೂರಪ್ಪ :– ಇಲ್ಲಿಯವರೆಗೆ 695 ಕೋಟಿ ರೂಪಾಯಿಗಳು ಬಂದಿದೆ.

ಶ್ರೀ ಸಿದ್ಧರಾಮಯ್ಯ :– ಅದರಲ್ಲಿ 700 ಕೋಟಿ ರೂಪಾಯಿಗಳು ಬಂದರೆ ಎಷ್ಟಾಯಿತು ಹೇಳಿ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಅದನ್ನು ನಾನು ಒಪ್ಪಿಕೊಂಡು 40 ಪರ್ಸೆಂಟಾಯಿತು ಎಂದು ನಾನು ಹೇಳಿರುತ್ತೇನೆ. ಈಗ ಪ್ರಶ್ನೆ ಇರುವುದು. ನೀವೂ ರೈತರ ಮಕ್ಕಳು.

ಶ್ರೀ ಸಿದ್ಧರಾಮಯ್ಯ :– ಇಲ್ಲಿ ಇರುವವರೆಲ್ಲರೂ ರೈತರ ಮಕ್ಕಳೇ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾವು ಹೇಳುವ ಪ್ರಶ್ನೆ ಅದಲ್ಲ. ನೀವು ಕೊಟ್ಟಿರುವುದಕ್ಕೆ ನಾವು ಸ್ವಾಗತವನ್ನು ಮಾಡಿರುತ್ತೇವೆ.

ಶ್ರೀ ಸಿದ್ಧರಾಮಯ್ಯ :– ಅವರಿಗೆ ತೊಂದರೆಯನ್ನು ಮಾಡುವುದಕ್ಕೆ ಏನು ಬೇಕೋ ಅದನ್ನು ಮಾಡುತ್ತಿದ್ದೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ತೊಂದರೆ ಮಾಡುವುದಕ್ಕೆ ಅಲ್ಲ, ಮಾನ್ಯ ಸಿದ್ಧರಾಮಯ್ಯನವರೇ, ಅವರು ವ್ಯವಸಾಯಕ್ಕೆ ರೀ – ಇನ್ವೆಸ್ಟ್‌ಮೆಂಟ್ ಮಾಡಬೇಕಲ್ಲವೇ? ಅದಕ್ಕಾಗಿ ಈಗ ಅವರಿಗೆ ಹಣ ಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮದುವೆಯನ್ನು ಮಾಡಿಬಿಟ್ಟರೆ ಸಮಸ್ಯೆ ಬಗೆಹರಿದು ಹೋಗಿ ಬಿಡುತ್ತದೆಯಾ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :– ರೀ – ಇನ್‌ವೆಸ್ಟ್‌ಮೆಂಟ್ ಮಾಡಬೇಕಾದ ಸಂದರ್ಭದಲ್ಲಿ ಸಾಲವನ್ನು ಕೊಡಿ, ಎಂದರೆ ಹೇಗೆ? ಅವರು ಈಗ ರೀ – ಇನ್‌ವೆಸ್ಟ್‌ಮೆಂಟ್ ಮಾಡಬೇಕಲ್ಲವೇ ಸರ್? ವ್ಯವಸಾಯ ಮಾಡಬೇಕಾದ ಸಂದರ್ಭದಲ್ಲಿ ಅವರಿಗೆ ಸಾಲವನ್ನು ಕೊಡಿ ಎಂದರೆ ಅವರು ಎಲ್ಲಿಂದ ತಂದು ಕೊಡುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಸಚಿವರು ನೀವು ಬೇಕಾದರೆ ವಿಚಾರಿಸಿ. ಕಳೆದ 3–4 ದಿವಸಗಳಿಂದ ನಾವು ಸೇರಿ ಯಾರ್‍ಯಾರಿಗೆ ಶಕ್ತಿ ಇದೆ. ಒಂದಲ್ಲ ಒಂದು ಕಡೆ ಅಂದರೆ ಇನ್ನೊಂದು ಕಡೆ ಬಾರೋ ಮಾಡಿ ಕಟ್ಟಿದ್ದಾರೆ. ನಾನು ನಿಮಗೆ ಹೇಳುತ್ತೇನೆ ಕೇಳಿ. ಮೇ ತಿಂಗಳ ಕೊನೆಯವರೆಗೆ 1933 ಕೋಟಿ ರೂಪಾಯಿಗಳಲ್ಲಿ ರೈತರು ಕಟ್ಟಿರುವ ಹಣ 213 ಕೋಟಿ ರೂಪಾಯಿಗಳು, ಈ ಒಂದು ತಿಂಗಳಲ್ಲಿ ನೀವು ಹೇಳಿದಂತೆ ಅಷ್ಟು ಹಣವನ್ನು ರೀಪೇಮೆಂಟ್ ಮಾಡಿದರು. ಆದರೆ ಅದು ಹೇಗಾಯಿತು? ಹೇಗಾದರೂ ಮಾಡಿ ನಾನು ಈ ಸಾಲದಿಂದ ಋಣಮುಕ್ತನಾಗಬೇಕು. ಈ ಬಡ್ಡಿ ಮನ್ನಾ ಯೋಜನೆಯಲ್ಲಿ ಅನುಕೂಲ

ಮಾಡಿಕೊಳ್ಳಬೇಕು. ಶಕ್ತಿ ಇದ್ದವರು ಸಾಲ ತರುವುದಕ್ಕೆ ಶಕ್ತಿ ಇದ್ದವರು ಬೇರೆ ಯಾವುದೋ ರೂಪದಲ್ಲಿ ಹಣವನ್ನು ತಂದು ಕಟ್ಟಿದ್ದಾರೆ. ಅದರ ಬಗ್ಗೆ ನಾನು ಚರ್ಚೆ ಮಾಡುತ್ತಿಲ್ಲ. ಉಳಿದ 100 ಜನರಲ್ಲಿ ಒಬ್ಬನಿಗೆ ಅದರಲ್ಲಿ ಶಕ್ತಿ ಇಲ್ಲ. ಅವನು ಬೆಳೆ ಬೆಳೆದು ಅವನು ವಾಪಸ್ಸು ಕೊಡುವವರೆಗೆ ಅವಕಾಶವನ್ನು ಕೊಡದಿದ್ದರೆ ಈ ಒಂದು ತಿಂಗಳು ಮತ್ತೆ ನಾವು ಗಲಾಟೆ ಮಾಡಿ ಮುಂದಿನ ತಿಂಗಳವರೆಗೆ ವಿಸ್ತರಣೆ ಮಾಡುವುದರಿಂದ ಯಾವುದೇ ಇನ್ನುಳಿದ 60 ಪರ್ಸೆಂಟ್ ಜನ ರೈತರಿಗೆ ಅನುಕೂಲವಾಗುವುದಿಲ್ಲ. ದಯಮಾಡಿ ನಾನು ಹೇಳುತ್ತೇನೆ. ತಾವು ಕೇಳಿ, ಮಾನ್ಯ ದೇಶಪಾಂಡೆಯವರು ಹೇಳಿದಂತೆ ಅವರೆ ಒಂದು ನಿಯೋಗವನ್ನು ತೆಗೆದುಕೊಂಡು 2004ರ ಏಪ್ರಿಲ್ ಒಂದರಿಂದ ಕಳೆದ 31ನೇ ಮಾರ್ಚ್‌ರವರೆಗೆ ನೀವೇ ಹೇಳಿದಂತೆ ಸುಮಾರು 789.18 ಕೋಟಿ ರೂಪಾಯಿಗಳ ಸಾಲ ಮರುಪಾವತಿ ಮಾಡಿದ್ದಾರೆ. ಅದರ ಮೇಲೆ 163 ಕೋಟಿ ರೂಪಾಯಿಗಳ ಬಡ್ಡಿ ಮತ್ತು ದಂಡ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಕೇಳಿದರೆ ಮಾಡುವುದಕ್ಕೆ ನೀವು ಸಾಧ್ಯವಾಗುವುದಿಲ್ಲವೆಂದು ಹೇಳಿದ್ದೀರಾ? ನನ್ನದೇನೆಂದರೆ, ಈ ವಿಸ್ತರಣೆಯನ್ನು ದಿನಾಂಕ: 01-04-2004 ರಿಂದ 31-03-2005ರವರೆಗೆ ಎಂದು ನಿಮಗೆ ಕೋ-ಆಪರೇಟಿವ್ ಮಿನಿಸ್ಟರ್ ಮನವಿಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಮಾಡುತ್ತೇನೆಂದು ಹೇಳುವಂಥದ್ದು ಮತ್ತು ಈ ಅವಧಿಯನ್ನು ವಿಸ್ತರಣೆ ಮಾಡಬೇಕೆಂದರೆ ಮುಂದಿನ ಮಾರ್ಚ್ 2006ರವರೆಗೆ ಮಾಡಿದರೆ ರೈತ ಬೆಳೆ ಬೆಳೆದು ಸಾಲವನ್ನು ಕಟ್ಟುತ್ತಾನೆ. ರೈತ ಋಣಮುಕ್ತನಾಗುತ್ತಾನೆ. ಸರ್ಕಾರಕ್ಕೆ ನಾವು ಒಟ್ಟಾಗಿ ನಂತು ರೈತರು ಈ ಆಪರ್ಚುನಿಟಿಯನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಹೇಳಿ ತಮಗೆ ಸಹಕಾರ ಕೊಡುವುದಕ್ಕೆ ಸಿದ್ದರಿದ್ದೇವೆ. ಅದನ್ನು ನೀವು ಮಾಡದಿದ್ದರೆ ಈ ಒಂದು ತಿಂಗಳು ವಿಸ್ತರಣೆ ಮಾಡುವುದರಿಂದ ಅದು ಯಾವುದಕ್ಕೂ ಉಪಯೋಗವಾಗುವುದಿಲ್ಲ. ನಾನು ಒಂದು ಮಾತನ್ನು ತಮಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಿಮಗೆ ಕಳಕಳಿ ಇದೆ. ಅದರ ಬಗ್ಗೆ ಎರಡು ಮಾತಿಲ್ಲ. ಹಿಂದ ಫೈನಾನ್ಸ್ ಕಮಿಷನ್‌ರವರು ಬೇರೆ ಸಂದರ್ಭದಲ್ಲಿ ಇಲ್ಲಿಗೆ ಬಂದಾಗ ನೀವೊಬ್ಬ ಅಧಿಕೃತ ಹಣಕಾಸಿನ ಸಚಿವರಾಗಿ, ರಾಜ್ಯದ ರೈತರ ಸಮಸ್ಯೆಯನ್ನು ಅರ್ಥಮಾಡಿಕೊಂಡು ಒಂದೇ ಬಾರಿಗೆ ರೈತರ ಸಾಲ ಮನ್ನಾ ಆಗಬೇಕೆಂದು ಒತ್ತಾಯವನ್ನು ಮಾಡಿದ್ದೀರಿ ಬಹಳ ಸಂತೋಷ ರೈತರ ಪರವಾಗಿ, ಸಾಲ ಮನ್ನಾ ಮಾಡುವುದಕ್ಕೆ ನಿಮ್ಮಿಂದ ಆಗದಿರಬಹುದು. ಆದರೆ ಮೊನ್ನೆ ನೀವು ಫೈನಾನ್ಸ್ ಕಮಿಷನ್ ಹತ್ತಿರ ಹೋದಂಥ ಸಂದರ್ಭದಲ್ಲಿ ನಾಲ್ಕು ವರ್ಷದಿಂದ ಸತತವಾಗಿ ಬರಗಾಲ ಬಿದ್ದಿರುವ ಅದನ್ನು ಅನುಭವಿಸಿರುವ ನಮ್ಮ ರೈತರ ಬಗ್ಗೆ, ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದಿರುವ ರೈತನ ಬಗ್ಗೆ ಸಂಪೂರ್ಣವಾಗಿ ಒಂದು ಸಲ ಬಡ್ಡಿಯನ್ನು ಮನ್ನಾ ಮಾಡಿ, ಸಾಲವನ್ನು ಮನ್ನಾ ಮಾಡುವುದಕ್ಕೆ ಆಗದಿರಬಹುದು. ಸಾಲ ಮನ್ನಾ

ಆಗಬೇಕೆನ್ನುವುದು ನಮ್ಮ ಆಗ್ರಹ ಇರಬಹುದು. ತಾತ್ಕಾಲಿಕವಾಗಿಯಾದರೂ ಬಡ್ಡಿ ಮನ್ನಾ ಮಾಡುವುದನ್ನು ಮಾಡಿಸಿಕೊಂಡು ಬರದಿದ್ದರೆ ಸ್ವತಃ ಮಾನ್ಯ ಪ್ರಧಾನ ಮಂತ್ರಿಗಳೇ ರೈತರಿಗೆ ಹಿನ್ನಡೆಯಾಗುತ್ತಿದೆ ಎನ್ನುವುದರ ಬಗ್ಗೆ ಗ್ರಾಮೀಣಾಭಿವೃದ್ಧಿಯಲ್ಲಿ ಹಿನ್ನಡೆಯಾಗುತ್ತಿದೆ ಎಂದು ಅವರು ಹೇಳಿರುವಾಗ ಈ ಸದಾವಕಾಶವನ್ನು ನೀವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಉಪಯೋಗ ಮಾಡಿಕೊಳ್ಳಬಹುದಾಗಿತ್ತು. ನೀವು ಅದರ ಬಗ್ಗೆ ರೆಫರ್ ಮಾಡಲಿಲ್ಲ. ರಾಜ್ಯದಲ್ಲಿ ನಾಲ್ಕು ವರ್ಷ ಬರಗಾಲ ಇತ್ತು ಜನ ಸಂಕಷ್ಟದಲ್ಲಿದ್ದರು, ನಿಮ್ಮದೇ ಆದ ರಾಜಕೀಯ ಗೊಂದಲದಲ್ಲಿ ನೀವು ಸಿಕ್ಕಿಹಾಕಿಕೊಂಡು ಮಾನಸಿಕವಾಗಿ ಅದನ್ನು ಮಾತನಾಡುವುದರಲ್ಲಿ ನೀವು ಇದ್ದಿರೋ ಅಥವಾ ಇಲ್ಲವೋ ಈ ವಿಚಾರದ ಬಗ್ಗೆ ನಾನು ಎಳೆಯುವುದಿಲ್ಲ. ನಿಮ್ಮ ಬಗ್ಗೆ ಅತ್ಯಂತ ಪ್ರಾಮಾಣಿಕವಾಗಿ ಇರುವ ವಿಷಯಗಳ ಒಪ್ಪಿಕೊಳ್ಳುತ್ತೇವೆ. ಆದರೆ ಇಲ್ಲಿ ನೀವು ದುಡಿಕಿದಿರಿ. ಇಲ್ಲಿ ನೀವು ತಪ್ಪು ಹೆಜ್ಜೆಯನ್ನು ಇಟ್ಟಿದ್ದೀರಿ. ಇಲ್ಲಿ ನಮ್ಮ ರಾಜ್ಯದ ರೈತರ ಪರವಾಗಿ ಆ ಫೈನಾನ್ಸ್ ಕಮಿಷನ್ ಮುಂದೆ ಏನು ಪ್ರಸ್ತಾಪ ಮಾಡಬೇಕಾಗಿತ್ತು ಅಲ್ಲಿ ಸಂಪೂರ್ಣವಾಗಿ ನೀವು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ವಿಫಲರಾಗಿರುತ್ತೀರಿ. ಈಗಲೂ ನಾನು ನಿಮಗೆ ಹೇಳುತ್ತಿರುವುದು, ಮಾನ್ಯ ಜಗದೀಶ್ ಶೆಟ್ಟರ್‌ರವರು ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಸಾಲವನ್ನು ತೆಗೆದುಕೊಂಡಿದ್ದಾರೆ. ನಾನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಾಲವನ್ನು ತೆಗೆದುಕೊಂಡಿದ್ದೇನೆ. ಅವರದ್ದು ಬಡ್ಡಿ ಮನ್ನಾ ಆಯಿತು. ಆದರೆ ನನ್ನದು ಬಡ್ಡಿ ಮನ್ನಾ ಆಗಲಿಲ್ಲ. ಇದರಲ್ಲಿ ಏನು ವ್ಯತ್ಯಾಸ ಇದೆ. ನನಗೆ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಸಾಲ ಸಿಗಲಿಲ್ಲ. ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಾಲವನ್ನು ತೆಗೆದುಕೊಂಡಿರುತ್ತೇನೆ. ನನಗೆ ಬಡ್ಡಿ ಮನ್ನಾ ಆಗಲಿಲ್ಲ. ಇದನ್ನು ಎಲ್ಲೋ ಒಂದು ಕಡೆ ನಾವು ಯಾವ ಮಟ್ಟದಲ್ಲಿ ಪ್ರಧಾನ ಮಂತ್ರಿಯವರ ಮನವೊಲಿಸಬೇಕಾಗಿತ್ತು. ಇದು ಆಗಲಿಲ್ಲ. ಈಗಲಾದರೂ ನೀವು ಆ ಕೆಲಸವನ್ನು ಮಾಡಬೇಕಾಗುತ್ತದೆ. ಅದರ ಬಗ್ಗೆ ನಿರ್ಣಯ ಮಾಡುತ್ತೀರೋ ಅಥವಾ ನಿಯೋಗ ತೆಗೆದುಕೊಂಡು ಹೋಗುತ್ತೀರೋ ಅದು ಬೇರೆ ವಿಷಯ. ಅವನಿಗೆ ಮಾತ್ರ ನ್ಯಾಯ ಸಿಗಲೇಬೇಕು. ನೀವು ಆ ಕೆಲಸವನ್ನು ಮಾಡಲೇಬೇಕಾಗುತ್ತದೆ. ಇದನ್ನು ನೀವು ಮಾಡಲಿಲ್ಲ. ಅದಕ್ಕಾಗಿ ನಾನು ಹೇಳುತ್ತೇನೆ. ನಿಮ್ಮ ಕಡೆಯಿಂದ ಆಗುವುದನ್ನು ನೀವು ಈಗ ಮಾಡಿ. ರಾಷ್ಟ್ರೀಕೃತ ಬ್ಯಾಂಕಿನಿಂದ ತೆಗೆದುಕೊಂಡ ಸಾಲಕ್ಕೆ ಬಡ್ಡಿ ಮನ್ನಾ ಮಾಡುವುದಕ್ಕೆ ಯಾವ ರೀತಿ ಒತ್ತಡ ತರುತ್ತೀರೋ ಯಾವ ರೀತಿ ನಿರ್ಣಯ ಆಗಬೇಕು. ಮಾನ್ಯ ಪ್ರಧಾನ ಮಂತ್ರಿಯವರ ಹತ್ತಿರ ನಿಯೋಗ ತೆಗೆದುಕೊಂಡು ಹೋಗುತ್ತೀರೋ ಅದರ ಬಗ್ಗೆ ನೀವು ರಾಜ್ಯದ ರೈತ ಸಮೂಹಕ್ಕೆ ಹೇಳಬೇಕು. ಕೋ-ಆಪರೇಟಿವ್‌ನಲ್ಲಿ ಸಾಲ ತೆಗೆದುಕೊಂಡ ರೈತರಿಗೆ ನೀವು ಯಾವ ರೀತಿಯ ನೆರವು ಕೊಡುತ್ತೀರೋ,

ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡವರಿಗೂ ಕೂಡ ಒಂದು ನೆಮ್ಮದಿ ಬೇಕಲ್ಲವೇ? ಅವರು ನಾವು ವಾಪಸ್ಸು ಕ್ಷೇತ್ರಕ್ಕೆ ಹೋದಾಗ ಕೇಳುತ್ತಾರೆ. ಮಾನ್ಯ ಯಡಿಯೂರಪ್ಪನವರೆ, ಮಾನ್ಯ ಸಿದ್ದರಾಮಯ್ಯನವರೆ ನಾನು ಏನು ಪಾಪವನ್ನು ಮಾಡಿದ್ದೇನೆಂದು, ಆಗ ನಾವು ಕೇಂದ್ರ ಸರ್ಕಾರವನ್ನು ತೋರಿಸಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಕೇಂದ್ರವೂ ನಮ್ಮದೇ, ರಾಜ್ಯವೂ ನಮ್ಮದೇ, ಆದ್ದರಿಂದ ನೀವು ಈ ದಿಕ್ಕಿನಲ್ಲಿ ಒಂದು ದೃಢವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ನಾವು ನಿಮಗೆ ಸಹಕಾರವನ್ನು ಕೊಡುತ್ತಿದ್ದೇವೆ. ಬೆಳಿಗ್ಗೆಯಿಂದ ಅತ್ಯಂತ ಪ್ರಾಮಾಣಿಕವಾದ ರೀತಿಯಲ್ಲಿ ಚರ್ಚೆಯಾಗಿದೆ. ಆದ್ದರಿಂದ ನಾವು ಮತ್ತೊಮ್ಮೆ ನಿಮಗೆ ಒತ್ತಾಯವನ್ನು ಮಾಡುತ್ತೇವೆ. ದಯಮಾಡಿ ಈ ಅವಧಿಯನ್ನು ಮುಂದಿನ ವರ್ಷ ಮಾರ್ಚ್ 2006ರವರೆಗೆ ವಿಸ್ತರಣೆ ಮಾಡಬೇಕು. ದಿನಾಂಕ : 31–04–2004 ರಿಂದ 31–03–2005ರವರೆಗೆ ಸಹ ಈ ಸೌಲಭ್ಯವನ್ನು ಕೊಡಬೇಕು. ಇದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಿದರೆ, ಬಹುಶಃ ಆಗ ರೈತರಿಗೆ ನ್ಯಾಯ ಸಿಗುತ್ತದೆ. ತಾವು ಒಂದು ತಿಂಗಳ ಕಾಲ ಇದನ್ನು ವಿಸ್ತರಣೆ ಮಾಡಿದರೆ, ಅದರ ಬಗ್ಗೆ ನಾನು ಹೇಳುತ್ತೇನೆ. ಕೋ–ಆಪರೇಟೀವ್ ಮಿನಿಸ್ಟರ್ ಅಥವಾ ಆ ಕಡೆ ಆಡಳಿತ ಪಕ್ಷದ ಕಡೆಯಿರುವ ಯಾವುದೇ ಶಾಸಕರು ಇರಬಹುದು. ಇದು ಹೇಗೆ ಸಾಧ್ಯ ಸ್ವಾಮಿ? ರೈತನು ಒಂದು ತಿಂಗಳಲ್ಲಿ ಆತನು ಕೃಷಿ ಕಾರ್ಯದಲ್ಲಿ ತೊಡಗಿಕೊಂಡು ಆತನು ಭೂಮಿಯನ್ನು ಉಳುಮೆ ಮಾಡುವುದಕ್ಕೆ ಸಿದ್ಧ ಮಾಡದೆಯೇ ಇರುವಂತಹ ಸಂದರ್ಭದಲ್ಲಿ ಒಂದು ತಿಂಗಳಲ್ಲಿ ನೀವು ಸಾಲವನ್ನು ಕಟ್ಟಿ ಎಂದು ಹೇಳಿದರೆ ಇದನ್ನು ನೋಡಿ ಜನರು ನಗುವುದಿಲ್ಲವೇ? ರೈತರಿಗೆ ನಮ್ಮ ಬಗ್ಗೆ ವಿಧಾನಮಂಡಲದಲ್ಲಿ ಚೆಲ್ಲಾಟ ನಡೆಸಿದ್ದಾರೆ ಎಂದು ಅವರಿಗೆ ಅನ್ನಿಸುವುದಿಲ್ಲವೇ? ನಾಳೆ ದಿವಸ ನಾವು ನಮ್ಮ ಕ್ಷೇತ್ರಕ್ಕೆ ಹೋಗಿ ಉತ್ತರ ಕೊಡುವ ಸ್ಥಿತಿಯಲ್ಲಿ ಇದ್ದೇವಾ? ನಾನು ಆಡಳಿತ ಪಕ್ಷದ ಶಾಸಕರಲ್ಲಿ ವಿನಂತಿ ಮಾಡುವುದೇನೆಂದರೆ ನಾವೆಲ್ಲರೂ ಒಟ್ಟಾಗಿ ಒಂದಾಗಿ ರೈತರ ಪರವಾಗಿ ಇದರ ಬಗ್ಗೆ ತಾವೆಲ್ಲರೂ ಒತ್ತಾಯವನ್ನು ತರಲೇಬೇಕಾಗುತ್ತದೆ. ಬನ್ನಿ ಎಲ್ಲರೂ ಒಟ್ಟಿಗೆ ವೆಲ್‌ಗೆ ಹೋಗೋಣ. ಇವತ್ತು ಯಾವ್ಯಾವುದೋ ವಿಷಯಕ್ಕೆ ಭಿನ್ನಾಭಿಪ್ರಾಯಗಳು ಬರುತ್ತಿರುವಂತಹ ಸಂದರ್ಭದಲ್ಲಿ ನಾವೆಲ್ಲರೂ ರಾಜ್ಯದ ರೈತರ ಪರವಾಗಿ ಒಟ್ಟಿಗೆ ವೆಲ್‌ಗೆ ಹೋಗುವುದು ಅನಿವಾರ್ಯವಾಗುತ್ತದೆ. ನಾವೆಲ್ಲರೂ ಧರಣಿ ಕುಳಿತುಕೊಳ್ಳುವುದು ಅನಿವಾರ್ಯವಾಗುತ್ತದೆ. ಇದರ ಬಗ್ಗೆ ತಮ್ಮಿಂದ ಸ್ಪಷ್ಟವಾದ ಉತ್ತರ ಬೇಕು. ದಯಮಾಡಿ ನಾನು ಮತ್ತೊಮ್ಮೆ ನಿಮಗೆ ಒತ್ತಾಯ ಮಾಡುತ್ತೇನೆ. ದಿನಾಂಕ: 01–04–2004 ರಿಂದ 31–03–2005 ರವರೆಗೆ ಇದನ್ನು ವಿಸ್ತರಿಸಬೇಕು. ಬಡ್ಡಿಯನ್ನು ಕಟ್ಟುವವರಿಗೆ ವಾಪಸ್ಸು ಕೊಡಬೇಕು. ಮತ್ತು ಈ ಅವಧಿಯನ್ನು ಮಾರ್ಚ್‌ಕೊನೆಯವರೆಗೆ

ವಿಸ್ತರಣೆ ಮಾಡಬೇಕು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯೂ ಸಹ ಆ ಬಡ್ಡಿಯನ್ನೂ ಮನ್ನಾ ಮಾಡುವ ಬಗ್ಗೆ ಬೇಕಾದ ನಿರ್ಣಯವನ್ನು ತಾವು ತೆಗೆದುಕೊಳ್ಳಬೇಕೆಂಬ ಒತ್ತಾಯವನ್ನು ಮಾಡಿ ಇದಕ್ಕೆ ಸ್ಪಷ್ಟವಾದ ಉತ್ತರಬೇಕೆಂಬ ಒತ್ತಾಯವನ್ನು ಮಾಡುತ್ತಾ ಅನಿವಾರ್ಯವಾಗಿ ನಾವೆಲ್ಲರೂ ವೆಲ್‌ಗೆ ಹೋಗಬೇಕಾಗುತ್ತದೆ ಸ್ವಾಮಿ. ನಮಗೆ ಬೇರೆ ದಾರಿಯಿಲ್ಲ ಸ್ವಾಮಿ, ಈ ರೀತಿಯ ಉತ್ತರ ತೆಗೆದುಕೊಂಡು ವಾಪಸ್ಸು ಹೋಗುವುದಕ್ಕೆ ಅಂತಹ ಸ್ಥಿತಿಯಲ್ಲಿ ನಾವಿಲ್ಲಾ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಸದನದ ಬಾವಿಗೆ ಬಂದುರು)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಸ್ವಲ್ಪ ಮಾತನಾಡುತ್ತೇನೆ. ಮಾನ್ಯ ಯಡಿಯೂರಪ್ಪನವರೇ, ತಾವು ಬನ್ನಿ ಸಾರ್.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೆ, ರೈತರ ಬಗ್ಗೆ ನಮಗೆ ಕಳಕಳಿ ಇರುವುದರಿಂದಲೇ ಅವರಿಗೆ ಕಷ್ಟ ಕಾಲದಲ್ಲಿ ಸಹಾಯ ಮಾಡಬೇಕೆಂಬ ಆ ಕಾರಣಕ್ಕೋಸ್ಕರವೇ ಈ ಒಂದು ಕೆಲವು ಸೌಲಭ್ಯಗಳನ್ನು ಅವರಿಗೆ ಕೊಡತಕ್ಕಂತಹ ಕೆಲಸವನ್ನು ಮಾಡಿರುವುದು. ಇದರಿಂದ ರಾಜಕಾರಣ ಮಾಡುವುದರಿಂದ ರೈತರಿಗೆ ಏನೂ ಅನುಕೂಲವಾಗುವುದಿಲ್ಲ. ರಾಜಕಾರಣಕ್ಕೋಸ್ಕರವಾಗಿ ಮಾತನಾಡುವುದು, ರಾಜಕಾರಣಕ್ಕೋಸ್ಕರವಾಗಿ ಪ್ರಚಾರಕ್ಕೋಸ್ಕರವಾಗಿ ಮಾತನಾಡುವುದರಿಂದ ಅದು ರೈತರಿಗೆ ಏನೂ ಸೌಲಭ್ಯಗಳು ಸಿಗುವುದಿಲ್ಲ. ನಾನು ಇನ್ನು ಉತ್ತರವನ್ನೇ ಕೊಟ್ಟಿಲ್ಲ. ಆಗಲೇ ನೀವು ವೆಲ್‌ಗೆ ಬಂದುಬಿಟ್ಟಿದ್ದೀರಿ. ಈಗ 40 ಪರ್ಸೆಂಟ್ ಸಾಲವನ್ನು ಯಾರು ತೀರಿಸಿದ್ದಾರೆ. ಮತ್ತೆ ಅವರಿಗೆ 6 ಪರ್ಸೆಂಟ್ ದರದಲ್ಲಿ ಹೊಸದಾಗಿ ಮತ್ತೆ ಸಾಲ ಸಿಗುತ್ತದೆ. ಯಾರು ಸಾಲವನ್ನು ಕಟ್ಟುವುದಿಲ್ಲ ಅವರಿಗೆ ಆ ಸೌಲಭ್ಯವೇ ಬೇಡವೆಂಬುದು ನಿಮ್ಮ ವಾದವೇ? ಅವರಿಗೆ ಶಕ್ತಿ ಇದೆ. ಹೇಗಾದರೂ ಮಾಡಿ ಸಾಲವನ್ನು ಕಟ್ಟುತ್ತಾರೆ. ಅವರು ವ್ಯವಸಾಯ ಮಾಡುವುದಕ್ಕೆ ಸಾಲ ತೆಗೆದುಕೊಳ್ಳಬೇಕಾದರೆ ಏನು ಮಾಡಬೇಕು?

(ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರು ವೆಲ್‌ನಿಂದ ಮಾತನಾಡುತ್ತಿದ್ದರು)

ಹಾಗಾದರೆ ನೀವು ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ ಏತಕ್ಕೆ ಮನ್ನಾ ಮಾಡಿಸಲಿಲ್ಲ? ಆಗ ಬರಗಾಲವು ಇತ್ತಲ್ಲಾ, ನೀವೇ ಅದನ್ನು ಮಾಡಿಸಬಹುದಾಗಿತ್ತಲ್ಲಾ? ನೀವು ಅಸಲನ್ನು ಮನ್ನಾ ಮಾಡಿಸಬಹುದಾಗಿತ್ತಲ್ಲಾ ನೀವು ಏನು ಮಾಡಿದ್ದೀರಿ? ನೀವು ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ ಬರಗಾಲವಿತ್ತಲ್ಲಾ? ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಬರಗಾಲವಿತ್ತು. ಆಗ ನೀವು ಮನ್ನಾ ಮಾಡಿಸಬಹುದಾಗಿತ್ತಲ್ಲಾ.

(ಗೊಂದಲ)

ಸುಮ್ಮನೆ ರಾಜಕಾರಣಕ್ಕೋಸ್ಕರ ಪ್ರಚಾರಕ್ಕೋಸ್ಕರ ಮಾತನಾಡಿದರೆ ಅದು ಎಲ್ಲರಿಗೂ ಅರ್ಥವಾಗುತ್ತದೆ. ಈ ರೀತಿ ರಾಜಕಾರಣ ಮಾಡುವುದು ಒಳ್ಳೆಯದಲ್ಲಾ. 2002–03ರಲ್ಲಿ ಬರಗಾಲವಿತ್ತು. ಆಗ ಕೇಂದ್ರದಲ್ಲಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದರು. 2003–04ನೇ ಸಾಲಿನಲ್ಲೂ ಕೂಡ ಬರಗಾಲವಿತ್ತು. ಆಗಲೂ ಕೂಡ ಪ್ರಧಾನ ಮಂತ್ರಿಗಳಾಗಿದ್ದವರು ಶ್ರೀ ವಾಜಪೇಯಿಯವರು, ಆವತ್ತು ಸಾಲ ಮತ್ತು ಬಡ್ಡಿ ಎರಡು ಮನ್ನಾ ಆಗಿದ್ದರೆ ನಾವು ನಿಮಗೆ ದೀರ್ಘದಂಡ ನಮಸ್ಕಾರವನ್ನು ಹೊಡೆಯುತ್ತಿದ್ದೇವು.

(ಗೊಂದಲ)

ನಾವು ಎಲ್ಲವನ್ನೂ ಮಾಡಿದ್ದೇವೆ ಆವತ್ತು ಏನೂ ಮಾಡದೇ ಈಗ ನೀವು ಬಾವಿಯಲ್ಲಿ ನಿಂತುಕೊಂಡು ಏತಕ್ಕೆ ಮಾತನಾಡುತ್ತಿದ್ದೀರಿ? ಈಗ ತಾವು ರಾಜಕಾರಣಕ್ಕೋಸ್ಕರವಾಗಿ ಮಾತನಾಡುತ್ತಿದ್ದೀರಿ? ಬಡ್ಡಿಯನ್ನು ನಾವು ರಾಜ್ಯ ಸರ್ಕಾರದ ಇತಿಮಿತಿಯೊಳಗಡೆ 500 ಕೋಟಿ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡುತ್ತಿದ್ದೇವೆ. ಹೊಸದಾಗಿ 6 ಪರ್ಸೆಂಟ್ ದರದಲ್ಲಿ ಸಾಲ ಸಿಗುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಯಾರೂ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಆಗಲಿಲ್ಲ ಇವರಿಗೆ, ಈಗ ಇವರು ರಾಜಕಾರಣ ಮಾಡುವುದಕ್ಕೆ ಬಂದಿದ್ದಾರೆ. ನಾವು ಜುಲೈ 31ರವರೆಗೆ ರೈತರಿಗೆ ಸಹಾಯ ಮಾಡಬೇಕೆನ್ನುವ ಕಾರಣಕ್ಕೋಸ್ಕರವೇ ಇನ್ನೂ ಒಂದು ತಿಂಗಳ ಕಾಲ ಸಾಲ ಕಟ್ಟುವ ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಮತ್ತೆ ಏಪ್ರಿಲ್ 1 ನೇ ತಾರೀಖಿನಿಂದ ಜುಲೈ 31ರವರೆಗೆ ತಗಲುವ ಆ ಬಡ್ಡಿಯನ್ನು ಸಹ ಮನ್ನಾ ಮಾಡುತ್ತಿದ್ದೇವೆ.

(ಬಿ.ಜೆ.ಪಿ ಸದಸ್ಯರು ಸದನದ ಬಾವಿಯಲ್ಲಿದ್ದುಕೊಂಡು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಯಾರು ರೈತ ವಿರೋಧಿಗಳು ಇದ್ದಾರೆ. ಅವರ ಹತ್ತಿರ ರೈತರ ಬಗ್ಗೆ ಪಾಠ ಕಲಿಯಬೇಕಾದಂತಹ ಅಗತ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷರೇ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಕರ್ನಾಟಕ ವಿಧಾನ ಸಭೆ

ಶುಕ್ರವಾರ 1ನೇ ಜುಲೈ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.24 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ

ವಿಷಯ : ಡಾ॥ ದಾಮೋದರ್ ಮೂಲ್ಕಿ
ಶ್ರೀ ಸುನೀಲ್‌ದತ್
ಶ್ರೀ ಸಿ.ವಿ ರಾಜಗೋಪಾಲ್
ಪ್ರೊ॥ ಸಿ.ಡಿ. ನರಸಿಂಹಯ್ಯ
ಶ್ರೀ ಬಿ.ಸಿ. ರಾಮಚಂದ್ರ ಶರ್ಮ
ಶ್ರೀ ನಾರಾಯಣರಾವ್ ಕೃಷ್ಣರಾವ್ ಕುಲಕರ್ಣಿ
ಶ್ರೀ ಹೆಚ್.ಡಿ. ಶೌರಿ ಅವರುಗಳ ನಿಧನದ ಬಗ್ಗೆ :

ಅಧ್ಯಕ್ಷರು :– ಈಗ ಸಂತಾಪ ಸೂಚನೆ.

ಸಂತಾಪ ಸೂಚನೆಗಳು

ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಡಾ॥ ದಾಮೋದರ್ ಮೂಲ್ಕಿ, ಲೋಕಸಭಾ ಸದಸ್ಯರು ಹಾಗೂ ಕೇಂದ್ರ ಸಚಿವರಾದ ಶ್ರೀ ಸುನೀಲ್‌ದತ್, ಪತ್ರಿಕೋದ್ಯಮಿ ಶ್ರೀ ಸಿ.ವಿ. ರಾಜಗೋಪಾಲ್, ಹಿರಿಯ ವಿದ್ವಾಂಸ ಶ್ರೀ ಸಿ.ಡಿ. ನರಸಿಂಹಯ್ಯ, ಆಧುನಿಕ ಕನ್ನಡ ಕಾವ್ಯ ಕ್ಷೇತ್ರದ ಅಗ್ರ ಪಂಕ್ತಿಯ ಕವಿ ಶ್ರೀ ಬಿ.ಸಿ. ರಾಮಚಂದ್ರಶರ್ಮ, ಖ್ಯಾತ ಸಾಹಿತಿ ಶ್ರೀ ನಾರಾಯಣ ಕೃಷ್ಣರಾವ್ ಮತ್ತು ಗ್ರಾಹಕ ಚಳುವಳಿ ಹೋರಾಟಗಾರ ಶ್ರೀ ಹೆಚ್.ಡಿ. ಶೌರಿ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಡಾ॥ ದಾಮೋದರ್ ಮೂಲ್ಕಿ

ಡಾ॥ ದಾಮೋದರ್ ಮೂಲ್ಕಿ ಅವರು 1930 ನೇ ಅಕ್ಟೋಬರ್ 8 ರಂದು ಮೂಲ್ಕಿಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವೈದ್ಯರಾಗಿದ್ದರು. ಮೂಲ್ಕಿ ಬಿಲ್ಲವ ಸಮಾಜ,